ಶ್ರಾದ್ಧ

ಒಂದು ಚಿಂತನೆ

ಶ್ರೀನಿವಾಸ ಸು. ಮಠದ

Rarest Archiver

ಶ್ರಾದ್ಧ: ಒಂದು ಚಿಂತನೆ

ವಿದ್ವಾನ್ ಶ್ರೀನಿವಾಸ ಸು. ಮಠದ

ಪ್ರಕಾಶಕರು
ಜಿತಾಮಿತ್ರ ಪ್ರತಿಷ್ಠಾನ
ರಾಯಚೂರು

Rarest Archiver

SHRADDHA: ONDU CHINTANE

by
Shrinivasa Su. Mathad
Shreesha Nilaya, Ajarekar Chal
Minakshi Chowk
Vijapur 586 101
Cell: 9972078061

Published by
JITAMITRA PRATHISTHANA, RAICHUR
Badarinarayana Heroor
www.jitamitra.org
Cell: 9676736921

Books Available
Pavankumar Gundoor
C/o Brindavan Hotel, Near Bus stand
Gangavathi 583 227
Koppal Dist.
Cell: 98453 00073

Pages: 8 + 64

ಅಕ್ಷರ ಸಂಯೋಜನೆ
ಯಾಜಿ ಗ್ರಾಫಿಕ್ಸ್, ಹೊಸಪೇಟೆ
Cell: 94810 42400/9449922800

ಮುದ್ರಣ
ಇಳಾ ಮುದ್ರಣ, ಬೆಂಗಳೂರು

Rarest Archiver

ಶ್ರೀಮನ್ಮೂಲರಾಮೋ ವಿಜಯತೇ
ಶ್ರೀಗುರುರಾಜೋ ವಿಜಯತೇ

ಆಶೀರ್ವಚನ

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದ
ಪೀಠಾಧಿಪತಿಗಳಾದ ಪ್ರಾತಃಸ್ಮರಣೀಯ
ಶ್ರೀಶ್ರೀಶ್ರೀ ಸುಶಮೀಂದ್ರತೀರ್ಥ ಶ್ರೀಪಾದಂಗಳವರ ಕರಕಮಲ ಸಂಜಾತರಾದ
೧೦೮ ಶ್ರೀಶ್ರೀಶ್ರೀ ಸುವಿದ್ಯೇಂದ್ರತೀರ್ಥ ಶ್ರೀಪಾದಂಗಳವರು

'ದೇವಕಾರ್ಯಾದಪಿ ಮುನೇ ಪಿತೃಕಾರ್ಯಂ ವಿಶಿಷ್ಯತೇ'

ದೇವಕಾರ್ಯಕ್ಕಿಂತಲೂ ಪಿತೃಕಾರ್ಯ ವಿಶೇಷವಾದದ್ದೆಂದು ವ್ಯಾಸರು ಸಾರಿದ್ದಾರೆ. ದೇವರ ಪೂಜಾದಿ ಸಕಲ ಕಾರ್ಯಗಳನ್ನು ಶ್ರದ್ಧೆಯಿಂದಲೇ ಆಚರಿಸಬೇಕು. ಆ ಯಾವ ಕಾರ್ಯವನ್ನು 'ಶ್ರಾದ್ಧ' ಎಂದು ವ್ಯವಹರಿಸುವರು. ಆದ್ದರಿಂದಲೇ ಪಿತೃಕಾರ್ಯದಲ್ಲಿ ಅನಿತರ ಸಾಧಾರಣವಾದ ಶ್ರದ್ಧೆ ಇರಬೇಕೆಂಬುದು ಸಿದ್ಧವಾಯಿತು. ಪಿತೃಕಾರ್ಯದ ಮಹಿಮೆ ಹಾಗೂ ಅದರ ವಿಚಾರಗಳು ನೂರಾರು ವೈದಿಕ ಗ್ರಂಥಗಳಲ್ಲಿ ಉಲ್ಲೇಖ ಗೊಂಡಿವೆ. ಆದ್ದರಿಂದಲೇ ಶ್ರಾದ್ಧವನ್ನು 'ವೈದಿಕ' ಎಂದೂ ವ್ಯವಹರಿಸುವುದುಂಟು.

ಇಂತಹ ಕರ್ಮದ ಬಗ್ಗೆ ಜನರಿಗೆ ಮಾಹಿತಿ ನೀಡುವ ಉದ್ದೇಶದಿಂದ ಶ್ರೀಯುತ ಶ್ರೀನಿವಾಸ ಸು. ಮಠದ ಅವರು ಪುರಾಣ-ಕಾವ್ಯಗಳಲ್ಲಿ ಎಲ್ಲೆಲ್ಲಿ ಏನೇನು ಬಂದಿದೆ ಎಂಬುದನ್ನು ಸಂಗ್ರಹಿಸಿ ಸರಳವಾಗಿ ನಿರೂಪಿಸಿದ್ದಾರೆ. ಸಾಮಾನ್ಯರಿಗೆ ಉಪಯುಕ್ತ ಮಾಹಿತಿ ನೀಡುವ ಪುಸ್ತಕ ಇದು. ಈ ಪುಸ್ತಕ ಪ್ರಕಟಣೆಗೆ ಸಹಕರಿಸಿದ ಬದರಿ ನಾರಾಯಣ ಹೇರೂರು ಹಾಗೂ ಜಿತಾಮಿತ್ರ ಪ್ರತಿಷ್ಠಾನದ ಮೂಲಕ ಪುಸ್ತಕ ಪ್ರಕಟಿಸುತ್ತಿರುವ ಗುಂಡೂರು ಪವನಕುಮಾರ್ ಇವರೆಲ್ಲರಿಗೂ ಭಗವಂತ ವಿಶೇಷವಾಗಿ ಅನುಗ್ರಹಿಸಲಿ.

ಎಲ್ಲರೂ ಇದರ ಸದುಪಯೋಗವನ್ನು ಪಡೆದು ಶ್ರೀ ಹರಿಯ ಅನುಗ್ರಹಕ್ಕೆ ಪಾತ್ರರಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಇತಿ ನಾರಾಯಣ ಸ್ಮರಣೆಗಳು

Rarest Archiver

ಲೇಖಕನ ನುಡಿ

ಶ್ರೀಯುತ ಗುಂಡೂರು ಪವನಕುಮಾರ ಅವರು "ಇತಿಹಾಸ ಪುರಾಣಾದಿಗಳಲ್ಲಿ ಶ್ರಾದ್ಧದ ಉಲ್ಲೇಖ"ದ ಕುರಿತಾಗಿ ಚಿಕ್ಕ ಪುಸ್ತಕವನ್ನು ಬರೆದುಕೊಡಲು ಕೇಳಿಕೊಂಡರು. ಆ ಭಗವಂತನ ಪ್ರೇರಣೆಯಿಂದ ಒಪ್ಪಿಕೊಂಡೆ. ಅದರ ಫಲವೇ ಈ ಚಿಕ್ಕ ಕೃತಿ. ಇದರಲ್ಲಿ ಶ್ರೀಮನ್‌ಮಹಾಭಾರತ, ಪುರಾಣಾದಿಗಳಲ್ಲಿ ಬರುವ ಕೆಲವು ಕಥೆಗಳು ಹಾಗೂ ಶ್ರಾದ್ಧದ ಕುರಿತ ಮಾಹಿತಿಯನ್ನು ಸಂಗ್ರಹಿಸಿದ್ದೇನೆ.

ಈ ಕೃತಿಯನ್ನು ನಮ್ಮ ಕುಲಸ್ವಾಮಿಯಾದ ಶ್ರೀ ಶ್ರೀನಿವಾಸದೇವರ ಅಡಿದಾವರೆಗಳಲ್ಲಿ ಭಕ್ತಿಪೂರ್ವಕ ಸಮರ್ಪಿಸಿದ್ದೇನೆ.

ಈ ಪುಸ್ತಕವನ್ನು ಹೊರತರುವ ಅಭಿಲಾಷೆಯನ್ನು ವ್ಯಕ್ತಪಡಿಸಿದ ಶ್ರೀಯುತ ಬದರಿನಾರಾಯಣ ಹೇರೂರು ಅವರನ್ನು ಶ್ರೀಹರಿವಾಯುಗಳು ಅನುಗ್ರಹಿಸಲಿ.

ಗುಂಡೂರು ಪವನಕುಮಾರ ಅವರು ಜಿತಾಮಿತ್ರ ಪ್ರತಿಷ್ಠಾನದ ಮೂಲಕ ಈ ಪುಸ್ತಕವನ್ನು ಹೊರತರುತ್ತಿದ್ದಾರೆ. ಅವರಿಗೆ ನನ್ನ ತುಂಬು ಧನ್ಯವಾದಗಳು.

ಸಜ್ಜನರು ಇದರ ಲಾಭ ಪಡೆದುಕೊಂಡು ಶ್ರದ್ಧೆಯಿಂದ ಶ್ರಾದ್ಧಾದಿಗಳನ್ನು ಮಾಡಿ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕು.

ವಿಜಾಪುರ

ಇಂತಿ ಸಜ್ಜನ ಸೇವಕ

ಶ್ರೀನಿವಾಸ ಸು. ಮಠದ

Rarest Archiver

Rarest Archiver

ಶ್ರದ್ಧೆಯ ಆಳಕ್ಕಿಳಿಯುತ್ತಾ ...

ಶ್ರಾದ್ಧ: ಶ್ರದ್ಧೆಯಿಂದ ಮಾಡುವಂತಹದ್ದು
ಶ್ರದ್ಧೆ ಇದ್ದಲ್ಲಿ ತನ್ಮಯತೆ ಇರುತ್ತದೆ
ಬಹಳ ಪ್ರೀತಿ ಇದ್ದಲ್ಲಿ ತನ್ಮಯತೆ ಅರಳುತ್ತದೆ

ನಮ್ಮ ಕಾಲದ ಆಚರಣೆಗಳು ಆಡಂಬರದಿಂದ ನಲುಗುತ್ತಿದೆ. ಆಚರಣೆಗಳ ಅಂತರಾಳವನ್ನು ಅರಿಯುವುದಕ್ಕಿಂತ ಅದರ ಬಾಹ್ಯರೂಪದ ಆಕರ್ಷಣೆಗೆ ಮಾರು ಹೋಗುತ್ತಿದ್ದೇವೆ. ಪ್ರಾಚೀನರು ಬಿಟ್ಟು ಹೋದ ದಾರಿಗಳಲ್ಲಿ ಶ್ರಾದ್ಧವೂ ಒಂದು. ಶ್ರಾದ್ಧ ತನ್ನ ಮೂಲ ಆಶಯ–ಅರ್ಥವನ್ನು ಕಳೆದುಕೊಳ್ಳುತ್ತಿದೆ. ಈ ಸಂದರ್ಭದಲ್ಲಿ ಆಚರಣೆಗಳ ಅಂತರಾರ್ಥವನ್ನು ತಿಳಿದು ಮಾಡುವುದು ಹೆಚ್ಚು ಅರ್ಥಪೂರ್ಣ. ತಿಳಿವಿನಿಂದ ಮಾಡುವ ಕ್ರಿಯೆ ಅರಿವಿನ ಬೆಳಕು ಹೊತ್ತಿಸುತ್ತದೆ. ಪಿತೃಕಾರ್ಯದ ಹಿನ್ನೆಲೆ–ಆಶಯವನ್ನು ಎಲ್ಲರೂ ತಿಳಿಯಬೇಕು. ಆ ತಿಳಿವಿನಿಂದ ಶ್ರಾದ್ಧ ಇನ್ನಷ್ಟು ಶ್ರದ್ಧೆಯಿಂದ ಅರ್ಥಪೂರ್ಣವಾಗುತ್ತದೆ.

ಹಿರಿಯರನ್ನು ನೆನಪಿಸಿಕೊಳ್ಳಲು, ಗೌರವಿಸಲು ಇರುವ ವಿಶಿಷ್ಟ ಮಾರ್ಗ ಶ್ರಾದ್ಧ. ಅವರು ಹಾಕಿಕೊಟ್ಟ ಸಾತ್ವಿಕ ಮಾರ್ಗದಲ್ಲಿ ಸಾಗಲು, ಅವರ ಯೋಚನೆಗಳನ್ನು ಮರು ನೆನಪಿಸಿಕೊಳ್ಳಲು ಶ್ರಾದ್ಧ ಬಹುಮುಖ್ಯವಾದ ಆಚರಣೆ. ವೈದಿಕ ಪರಂಪರೆಯ ಕ್ರಿಯಾವಿಧಿಗಳಲ್ಲಿ ಒಂದಾದ ಶ್ರಾದ್ಧ ಪಿತೃದೇವತೆಗಳಿಗೆ ಗೌರವ ಸಲ್ಲಿಸುವ ಪವಿತ್ರ ಕಾರ್ಯ. ಪಿತೃಕಾರ್ಯಗಳನ್ನು ಕೈಗೊಳ್ಳುವ ಹಿನ್ನೆಲೆಯಲ್ಲಿ ಇರುವ ಚಿಂತನೆಗಳು ಇಂದಿನ ದಿನಮಾನಕ್ಕೆ ಅಪರಿಚಿತ.

ಹಿರಿಯರ ನೆನಪಲ್ಲಿ ಶ್ರಾದ್ಧದ ಕುರಿತಾಗಿನ ಸಮಗ್ರ ಮಾಹಿತಿಯುಳ್ಳ ಈ ಕೃತಿಯನ್ನು ಪ್ರಕಟಿಸುವ ನನ್ನ ಹಿರಿದಾಸೆಗೆ ನೀರೆರೆದವರು ಅಣ್ಣ ಬದರಿನಾರಾಯಣ ಹೇರೂರು. ಈ ಕೃತಿ ನಿಮ್ಮ ಕೈಯಲ್ಲಿರಲು ಮುಖ್ಯ ಕಾರಣ ಅಣ್ಣನ ವಿಶೇಷ ಆಸಕ್ತಿ.

ಈ ಕೃತಿಗೆ ಆಶೀರ್ವಚನ ನೀಡಿ ಅನುಗ್ರಹಿಸಿದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಸುವಿದ್ಯೇಂದ್ರತೀರ್ಥ ಶ್ರೀಪಾದಂಗಳವರಿಗೆ ಶಿರಸಾಷ್ಟಾಂಗ ಪ್ರಣಾಮಗಳು. ಹಾಗೂ ಶುಭಹಾರೈಸಿದ ರಾಜಾ ಎಸ್. ರಾಜಗೋಪಾಲಾಚಾರ್ಯರಿಗೆ ನಮಸ್ಕಾರಗಳು.

'ಶ್ರಾದ್ಧ ಒಂದು ಚಿಂತನೆ' ಕೃತಿಯನ್ನು ಬರೆದುಕೊಟ್ಟಿರುವ ವಿಜಾಪುರದ ವಿದ್ವಾಂಸರಾದ ಶ್ರೀನಿವಾಸ ಸು. ಮಠದ ಅವರ ಪ್ರೀತಿ ಅಗಾಧವಾದುದು. ನನ್ನೆಲ್ಲ ಕಾರ್ಯಗಳಿಗೆ

Rarest Archiver

ನಿರಂತರವಾಗಿ ಬೆಂಬಲ ನೀಡುತ್ತ ಆಶೀರ್ವದಿಸುವ ಅವರ ಅಂತಃಕರಣ ದೊಡ್ಡದು. ಅವರ ಅಭಿಮಾನಕ್ಕೆ ನಾನು ಋಣಿ.

ಈ ಕೃತಿಯ ಪ್ರಕಟಣೆಗೆ ಸಹಕಾರ ನೀಡುತ್ತಿರುವ ಜೋಶಿ, ಹೇರೂರು, ನವಲಿ, ರಾಜಪುರೋಹಿತ, ಪುರೋಹಿತ, ಶಿವಪುರ ಕುಟುಂಬದ ಸರ್ವರಿಗೂ ವಂದನೆಗಳು. ಎಂದಿನಂತೆ ಜೊತೆಗಿರುವ ರಾಯಚೂರು ಶೇಷಗಿರಿದಾಸ್, ಶ್ಯಾಮಸುಂದರ್ ಚೀಕಲಪರವಿ ಹಾಗೂ ಇನ್ನಿತರ ಎಲ್ಲ ಗೆಳೆಯರಿಗೂ ಕೃತಜ್ಞತೆಗಳು.

ಈ ಪುಸ್ತಕಕ್ಕೆ ಅಂದವಾದ ಮುಖಪುಟ ರಚಿಸಿದ ಆತ್ಮೀಯ ಕಲಾವಿದ ಬಯ್ಯಾಪುರ ರಾಘವೇಂದ್ರ, ಎಂದಿನಂತೆ ಅಚ್ಚುಕಟ್ಟಾಗಿ ಬೆರಳಚ್ಚಿಸಿದ ಶ್ರೀಮತಿ ಸವಿತಾ ಯಾಜಿ ಮತ್ತು ಗಣೇಶ ಯಾಜಿ ಹಾಗೂ ಮುದ್ರಿಸಿದ ಇಳಾ ಮುದ್ರಣದ ಶ್ರೀ ಗುರುಮೂರ್ತಿ ಮತ್ತು ಬಳಗಕ್ಕೆ ಪ್ರೀತಿಯ ಕೃತಜ್ಞತೆಗಳು.

ಈ ಕೃತಿಯನ್ನು ಜಿತಾಮಿತ್ರ ಪ್ರತಿಷ್ಠಾನದ ಮೊದಲ ಕೃತಿಯಾಗಿ ಪ್ರಕಟಿಸಲು ಅನುಮತಿ ನೀಡಿದ ಶ್ರೀನಿವಾಸ ಸು. ಮಠದ ಹಾಗೂ ಬದರಿನಾರಾಯಣ ಹೇರೂರು, ನನ್ನೊಡನೆ ನಿಂತಿರುವ ಗೆಳೆಯ, ಸಹೃದಯರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಜಿತಾಮಿತ್ರ ಪ್ರತಿಷ್ಠಾನದ ಪರವಾಗಿ
ಗುಂಡೂರು ಪವನ್‌ಕುಮಾರ

Rarest Archiver

ವಿಷಯಾನುಕ್ರಮಣಿಕಾ....

೧. ಶ್ರೀಮನ್ ಮಹಾಭಾರತದಲ್ಲಿ ಶ್ರಾದ್ಧದ ಉಲ್ಲೇಖ / ೧

೨. ಶ್ರೀಹರಿವಂಶದಲ್ಲಿ ಶ್ರಾದ್ಧದ ಉಲ್ಲೇಖ / ೬

೩. ಶ್ರೀಮದ್ರಾಮಾಯಣ ಗ್ರಂಥದಲ್ಲಿ ಶ್ರಾದ್ಧದ ಉಲ್ಲೇಖ / ೮

೪. ಶ್ರೀಮದ್‌ಭಾಗವತ ಮಹಾಪುರಾಣದಲ್ಲಿ ಶ್ರಾದ್ಧದ ಉಲ್ಲೇಖ / ೯

೫. ಶ್ರೀಪದ್ಮ ಮಹಾಪುರಾಣದಲ್ಲಿ ಶ್ರಾದ್ಧದ ಉಲ್ಲೇಖ(ಶ್ರಾದ್ಧ ಮಹಿಮೆ) / ೧೧

೬ ಶ್ರೀಪದ್ಮ ಮಹಾಪುರಾಣದಲ್ಲಿ ಶ್ರಾದ್ಧದ ಉಲ್ಲೇಖ(ಉಪಾಖ್ಯಾನಗಳು) / ೧೩

೭ ಶ್ರೀವರಾಹ ಮಹಾಪುರಾಣದಲ್ಲಿ ಶ್ರಾದ್ಧದ ಉಲ್ಲೇಖ(ಉಪಾಖ್ಯಾನಗಳು) / ೧೮

೮. ಶ್ರೀಗರುಡ ಪುರಾಣದಲ್ಲಿ ಶ್ರಾದ್ಧದ ಉಲ್ಲೇಖ / ೨೧

೯ ಶ್ರೀಮಾರ್ಕಂಡೇಯ ಪುರಾಣದಲ್ಲಿ ಶ್ರಾದ್ಧದ ಉಲ್ಲೇಖ / ೨೩

೧೦. ಶ್ರೀಭವಿಷ್ಯ ಮಹಾಪುರಾಣದಲ್ಲಿ ಶ್ರಾದ್ಧದ ಪ್ರಕಾರಗಳು / ೨೫

೧೧. ಶ್ರೀವಿಷ್ಣು ಮಹಾಪುರಾಣದಲ್ಲಿ ಶ್ರಾದ್ಧದ ಉಲ್ಲೇಖ / ೨೭

೧೨. ಶ್ರೀಕೃಷ್ಣಾಚಾರ್ಯರ ಸ್ಮೃತಿಮುಕ್ತಾವಲಿಯಲ್ಲಿ
ಶ್ರಾದ್ಧದ ಕುರಿತಂತೆ ಪ್ರಮಾಣಗಳು / ೨೯

೧೩. ಶ್ರೀಹರಿವಂಶದಲ್ಲಿ ಶ್ರಾದ್ಧದ ಕುರಿತಂತೆ ಪ್ರಮಾಣಗಳು / ೩೩

೧೪. ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಶ್ರಾದ್ಧದ ಕುರಿತಂತೆ ಪ್ರಮಾಣಗಳು / ೩೫

೧೫. ಮನುಸ್ಮೃತಿಯಲ್ಲಿ ಶ್ರಾದ್ಧದ ಕುರಿತಂತೆ ಪ್ರಮಾಣಗಳು / ೩೯

ಹರಿಕಥಾಮೃತ ಸಾರದ ಜೀವನ ಪ್ರಕ್ರಿಯಾ ಸಂಧಿ / ೪೦

ಶ್ರೀಹರಿಕಥಾಮೃತಸಾರ ಪಿತೃಗಣಸಂಧಿ ಪರಿಚಯ / ೪೫

ಪೈತೃಕವಾರದ ಸುಳಾದಿ / ೫೫

Rarest Archive

Rarest Archiver

೧

ಶ್ರೀಮನ್‌ಮಹಾಭಾರತದಲ್ಲಿ ಶ್ರಾದ್ಧದ ಉಲ್ಲೇಖ

ಧರ್ಮರಾಜನು ಪಿತಾಮಹರಾದ ಭೀಷ್ಮಾಚಾರ್ಯರನ್ನು ಕುರಿತು ಶ್ರಾದ್ಧ ವಿಧಿಯನ್ನು ಸಮಗ್ರವಾಗಿ ಹೇಳಬೇಕೆಂದು ಪ್ರಾರ್ಥಿಸಲು ಭೀಷ್ಮಾಚಾರ್ಯರು ಹೇಳಲು ಪ್ರಾರಂಭಿಸುತ್ತಾರೆ.

ಧನ, ಯಶಸ್ಸು ಮತ್ತು ಮಕ್ಕಳ ಪ್ರಾಪ್ತಿಗೆ ಕಾರಣವಾದ ಪಿತೃಯಜ್ಞವೆನಿಸಿದ ಶ್ರಾದ್ಧ ಕರ್ಮವಿಧಿಯನ್ನು ಹೇಳುತ್ತೇನೆ.

ಪ್ರತಿಪದೆ ತಿಥಿಯಂದು ಪಿತೃಗಳಿಗೆ ಶ್ರಾದ್ಧವನ್ನು ಮಾಡಿದರೆ ಅದರ ಫಲವಾಗಿ ಮನುಷ್ಯನು ತನಗೆ ಅನುರೂಪಳಾದ, ಸಂತಾನವುಳ್ಳ ಭಾರ್ಯೆಯನ್ನು ಪಡೆಯುತ್ತಾನೆ. ದ್ವಿತೀಯಾ ತಿಥಿಯಂದು ಶ್ರಾದ್ಧ ಮಾಡಿದರೆ ಪುತ್ರಿಯರು ಹುಟ್ಟುತ್ತಾರೆ. ತೃತಿಯಾದಿನ ಶ್ರಾದ್ಧ ಮಾಡಿದರೆ ಮನೆಯಲ್ಲಿ ಅಶ್ವಸಮೃದ್ಧಿಯುಂಟಾಗುತ್ತದೆ. ಚತುರ್ಥಿದಿನ ಶ್ರಾದ್ಧ ಮಾಡಿದರೆ ಆಡು, ಕುರಿ ಮುಂತಾದ ಪ್ರಾಣಿಗಳ ಸಮೃದ್ಧಿಯಾಗುತ್ತದೆ. ಪಂಚಮಿಯದಿನ ಪಿತೃಶ್ರಾದ್ಧ ಮಾಡುವವರಿಗೆ ಬಹುಪುತ್ರರು ಹುಟ್ಟುತ್ತಾರೆ. ಷಷ್ಠಿದಿನ ಶ್ರಾದ್ಧ ಮಾಡುವವರು ಕಾಂತಿವಂತರಾಗುತ್ತಾರೆ. ಸಪ್ತಮಿಯದಿನ ಶ್ರಾದ್ಧ ಮಾಡು ವವನು ಕೃಷಿಯಲ್ಲಿ ಲಾಭ ಗಳಿಸುತ್ತಾನೆ. ಅಷ್ಟಮಿಯದಿನ ಶ್ರಾದ್ಧ ಮಾಡುವವನು ವ್ಯಾಪಾರದಲ್ಲಿ ಲಾಭವನ್ನು ಗಳಿಸುತ್ತಾನೆ. ನವಮಿಯದಿನ ಶ್ರಾದ್ಧ ಮಾಡುವವನಿಗೆ ಒಂದೇ ಗೊರಸಿನಿಂದ ಕೂಡಿದ ಕುದುರೆಯೇ ಮೊದಲಾದ ಪ್ರಾಣಿಗಳ ಸಮೃದ್ಧಿಯಾಗುತ್ತದೆ. ದಶಮಿಯ ದಿನ ಶ್ರಾದ್ಧ ಮಾಡುವವನಿಗೆ ಗೋ ಸಂಪತ್ತು ಹೆಚ್ಚುತ್ತದೆ. ದ್ವಾದಶೀ ದಿನ ಶ್ರಾದ್ಧ ಮಾಡುವವನಿಗೆ ಸುವರ್ಣ, ಬೆಳ್ಳಿ ಮತ್ತು ಧನ ಲಾಭವಾಗುತ್ತದೆ. ತ್ರಯೋದಶೀ ದಿನ ಶ್ರಾದ್ಧ ಮಾಡುವವನು ತನ್ನ ಕುಟುಂಬದ ಜನರಲ್ಲಿ ಶ್ರೇಷ್ಠನೆನಿಸಿ ಕೊಳ್ಳುತ್ತಾನೆ. ಆದರೆ ಚತುರ್ದಶೀ ದಿನ ಶ್ರಾದ್ಧ ಮಾಡಿದರೆ ಅವನ ಮನೆಯಲ್ಲಿ ಯುವಕರಾದ ಮಕ್ಕಳು ಸಾಯುತ್ತಾರೆ. ಆದ್ದರಿಂದ ಚತುರ್ದಶೀ ದಿನ ಶ್ರಾದ್ಧ ಮಾಡಬಾರದು(ಕಾಮ್ಯಶ್ರಾದ್ಧ ಮಾಡಬಾರದು ಕಾಲಶ್ರಾದ್ಧ ಬಿಡಬಾರದು) ಅಮವಾಸ್ಯೆಯ ದಿನ ಶ್ರಾದ್ಧ ಮಾಡುವುದರಿಂದ ಯಜಮಾನನು ತನ್ನ ಎಲ್ಲ ಕಾಮನೆಗಳನ್ನು ಹೊಂದುತ್ತಾನೆ.

Rarest Archiver

ಯಾವ ರೀತಿಯಲ್ಲಿ ಶ್ರಾದ್ಧಕರ್ಮಕ್ಕೆ ಶುಕ್ಲಪಕ್ಷಕ್ಕಿಂತಲೂ ಕೃಷ್ಣಪಕ್ಷ ಶ್ರೇಷ್ಠವೋ ಅದೇ ರೀತಿಯಲ್ಲಿ ಶ್ರಾದ್ಧಕರ್ಮಕ್ಕೆ ಪೂರ್ವಾಹ್ನಕ್ಕಿಂತಲೂ ಅಪರಾಹ್ನ ಕಾಲವೇ ಶ್ರೇಷ್ಠವೆಂದು ತಿಳಿಯಬೇಕು.

ಎಳ್ಳು, ಕೆಂಬತ್ತ, ಜವೆ, ಉದ್ದು, ನೀರು, ಗಡ್ಡೆಗೆಣಸುಗಳು ಮತ್ತು ಹಣ್ಣುಗಳು ಇವುಗಳ ಮೂಲಕವಾಗಿ ಮಾಡಿದ ಶ್ರಾದ್ಧದಿಂದ ಪಿತೃಗಳು ಒಂದು ಮಾಸದವರೆಗೆ ತೃಪ್ತರಾಗಿರುತ್ತಾರೆ.

ಯಾವ ಶ್ರಾದ್ಧದಲ್ಲಿ ಎಳ್ಳಿನ ಭಾಗವೇ ಹೆಚ್ಚಾಗಿರುವುದೋ ಆ ಶ್ರಾದ್ಧವು ಅಕ್ಷಯ ವಾದುದೆಂದು ಮನುವು ಹೇಳಿದ್ದಾನೆ. ಶ್ರಾದ್ಧ ಸಂಬಂಧವಾದ ಎಲ್ಲ ಪದಾರ್ಥಗಳಲ್ಲಿಯೂ ಎಳ್ಳನ್ನು ಪ್ರಧಾನವಾಗಿ ಉಪಯೋಗಿಸಬೇಕು.

ಗೋವಿನ ಹಾಲು ಮೊಸರು ತುಪ್ಪ ಮೊದಲಾದ ವಸ್ತುಗಳಿಂದ ಮಾಡಲ್ಪಟ್ಟ ಶ್ರಾದ್ಧವು ಪಿತೃಗಳಿಗೆ ಒಂದು ವರ್ಷದವರೆಗೆ ತೃಪ್ತಿಯನ್ನುಂಟು ಮಾಡುತ್ತದೆ.

ಪಿತೃಗಳು ಮರಣಹೊಂದಿದ ತಿಥಿಯಂದು ನೀರು, ಗೆಡ್ಡೆ-ಗೆಣಸುಗಳು, ಫಲ-ಅನ್ನ ಇವುಗಳನ್ನು ಜೇನುತುಪ್ಪದೊಡನೆ ಸೇರಿಸಿ ಶ್ರಾದ್ಧ ಮಾಡಿ ಪಿತೃಗಳ ಪ್ರೀತ್ಯರ್ಥ ವಾಗಿ ಅರ್ಪಿಸಿದರೆ ಅದು ಅವರಿಗೆ ಅನಂತಕಾಲದವರೆಗೆ ತೃಪ್ತಿಯನ್ನುಂಟು ಮಾಡುತ್ತದೆ.

ಯಾವ ಮನುಷ್ಯನು ಕೃತ್ತಿಕಾ ನಕ್ಷತ್ರವಿರುವ ದಿನ ಶ್ರಾದ್ಧವನ್ನು ಮಾಡುವನೋ ಅವನು ಪುತ್ರವಂತನಾಗಿ ರೋಗ, ಚಿಂತೆಗಳಿಂದ ವಿಮುಕ್ತನಾಗುತ್ತಾನೆ. ಸತ್ಸಂತಾನ ವನ್ನು ಅಪೇಕ್ಷಿಸುವವನು ರೋಹಿಣೀ ನಕ್ಷತ್ರವಿರುವ ದಿನ, ತೇಜಸ್ಸನ್ನು ಅಪೇಕ್ಷಿಸು ವವನು ಮೃಗಶಿರಾ ನಕ್ಷತ್ರವಿರುವ ದಿನದಲ್ಲಿ ಶ್ರಾದ್ಧ ಮಾಡಬೇಕು. ಆರ್ದ್ರಾ ನಕ್ಷತ್ರ ದಲ್ಲಿ ಶ್ರಾದ್ಧ ಮಾಡುವವನು ಕ್ರೂರಿಯಾಗುತ್ತಾನೆ. ಆ ದಿನ ಶ್ರಾದ್ಧ ಮಾಡಬಾರದು(ಕಾಮ್ಯಶ್ರಾದ್ಧ ಮಾಡಬಾರದು ಕಾಲಶ್ರಾದ್ಧ ಮಾಡಬೇಕು)

ಧನಕಾಮನು ಪುನರ್ವಸು ನಕ್ಷತ್ರವಿರುವ ದಿನ, ಪುಷ್ಟಿಕಾಮನು ಪುಷ್ಯ ನಕ್ಷತ್ರವಿರುವ ದಿನ ಶ್ರಾದ್ಧ ಮಾಡಬೇಕು. ಆಶ್ಲೇಷಾ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಧೀರರಾದ ಮಕ್ಕಳನ್ನು ಪಡೆಯುತ್ತಾನೆ. ಮಘಾ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಜ್ಞಾತಿ ಬಾಂಧವರಲ್ಲಿ ಶ್ರೇಷ್ಠನಾಗುತ್ತಾನೆ.

ಪೂರ್ವಫಲ್ಗುನೀ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಸೌಭಾಗ್ಯಶಾಲಿಯಾಗುತ್ತಾನೆ. ಉತ್ತರಾ ಫಲ್ಗುನೀ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಪುತ್ರವಂತನಾಗುತ್ತಾನೆ. ಹಸ್ತ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಅಭೀಷ್ಟವಾದ ಫಲವನ್ನು ಹೊಂದುತ್ತಾನೆ.

ಚಿತ್ತಾ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ರೂಪವಂತರಾದ ಮಕ್ಕಳನ್ನು ಪಡೆಯು ತ್ತಾನೆ. ಸ್ವಾತೀ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ವಾಣಿಜ್ಯವೃತ್ತಿಯಿಂದ ಜೀವಿಸುತ್ತಾನೆ.

Rarest Archiver

ವಿಶಾಖಾ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಬಹುಪುತ್ರರನ್ನು ಪಡೆಯುತ್ತಾನೆ. ಅನುರಾಧಾ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ರಾಜ್ಯಮಂಡಲದ ಶಾಸಕನಾಗುತ್ತಾನೆ.

ಜ್ಯೇಷ್ಠಾ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಸಮೃದ್ಧಿಶಾಲಿಯಾಗುತ್ತಾನೆ ಮತ್ತು ಜನ್ಮಾಂತರದಲ್ಲಿ ಪ್ರಭುತ್ವವನ್ನು ಪಡೆಯುತ್ತಾನೆ.

ಮೂಲನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಆರೋಗ್ಯವಂತನಾಗಿರುತ್ತಾನೆ. ಪೂರ್ವಾಷಾಢಾ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಉತ್ತಮವಾದ ಯಶಸ್ಸು ಗಳಿಸುತ್ತಾನೆ. ಉತ್ತರಾಷಾಢಾ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಶೋಕರಹಿತನಾಗಿ ಪೃಥ್ವಿಯಲ್ಲಿ ಸಂಚರಿಸುತ್ತಾನೆ.

ಅಭಿಜಿತ್ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ವೈದ್ಯಶಾಸ್ತ್ರದಲ್ಲಿ ಸಿದ್ಧಿಯನ್ನು ಹೊಂದುತ್ತಾನೆ (ಉತ್ತಮ ವೈದ್ಯನಾಗುತ್ತಾನೆ). ಶ್ರವಣ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಅವಸಾನಾ ನಂತರದಲ್ಲಿ ಸದ್ಗತಿ ಪಡೆಯುತ್ತಾನೆ.

ಧನಿಷ್ಠಾ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ರಾಜ್ಯಕ್ಕೆ ಅಧಿಪತಿಯಾಗುತ್ತಾನೆ. ವರುಣನ ಸಂಬಂಧವಾದ ಶತಭಿಷಾ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ವೈದ್ಯಸಿದ್ಧಿ ಪಡೆಯುತ್ತಾನೆ. ಪೂರ್ವಾಭಾದ್ರಪದ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಬಹುಸಂಖ್ಯಾತ ಆಡು ಕುರಿಗಳನ್ನು ಹೊಂದುತ್ತಾನೆ. ಉತ್ತರಾಭಾದ್ರಪದ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಸಾವಿರಾರು ಗೋವುಗಳನ್ನು ಹೊಂದುತ್ತಾನೆ. ರೇವತೀ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಚಿನ್ನ ಬೆಳ್ಳಿ ಈ ಎರಡನ್ನು ಬಿಟ್ಟು ಉಳಿದೆಲ್ಲ ವಿಧವಾದ ಸಂಪತ್ತನ್ನು ಪಡೆಯುತ್ತಾನೆ. ಅಶ್ವಿನೀ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು ಕುದುರೆಗಳನ್ನು ಹೊಂದುತ್ತಾನೆ. ಭರಣೀ ನಕ್ಷತ್ರದಲ್ಲಿ ಶ್ರಾದ್ಧ ಮಾಡುವವನು(ಉತ್ತಮ) ದೀರ್ಘಾಯುಷ್ಯವನ್ನು ಹೊಂದುತ್ತಾನೆ.

ಶ್ರಾದ್ಧಕ್ಕೆ ಆಮಂತ್ರಿಸುವಾಗ ವಿದ್ವಾಂಸನಾದವನು ಬ್ರಾಹ್ಮಣನ ಕುಲ, ಶೀಲ, ವಯಸ್ಸು, ರೂಪ, ವಿದ್ಯೆ ಮತ್ತು ಅವನ ವಂಶ ಮುಂತಾದವುಗಳನ್ನು ಪರೀಕ್ಷಿಸಿ ಆಮಂತ್ರಿಸಬೇಕು.

ಶ್ರಾದ್ಧ ಕರ್ಮಗಳಲ್ಲಿ ಪಂಕ್ತಿಪಾವನರನ್ನು ನಿಮಂತ್ರಿಸಬೇಕೆಂಬುದಾಗಿ ಜ್ಞಾನಿಗಳು ಹೇಳುತ್ತಾರೆ.

ವಿದ್ಯಾಭ್ಯಾಸ ಮಾಡಿ, ವೇದವ್ರತಗಳನ್ನು ಮುಗಿಸಿ ಸ್ನಾತಕರಾಗಿರುವ ಮತ್ತು ಸದಾಚಾರದಲ್ಲಿ ತತ್ಪರರಾಗಿರುವ ಬ್ರಾಹ್ಮಣರು ಪಂಕ್ತಿಪಾವನರೆಂದು ತಿಳಿಯಬೇಕು.

ನಿತ್ಯ ಪಂಚಾಗ್ನಿಗಳನ್ನು ಪೂಜಿಸುವವನು, ತ್ರಿಸುಪರ್ಣ ಮಂತ್ರವನ್ನು ಪಠಿಸುವವನು, ವೇದವಿದರ ಪರಂಪರೆಯಲ್ಲಿ ಹುಟ್ಟಿದವನು, ತಂದೆತಾಯಿಗಳಿಗೆ ವಿಧೇಯನಾಗಿರುವವನು, ಶ್ರೋತ್ರಿಯ ಕುಲದಲ್ಲಿ ಹುಟ್ಟಿದವನು ಇವರೆಲ್ಲರೂ ಪಂಕ್ತಿಪಾವನರೆಂದು ತಿಳಿಯಬೇಕು.

Rarest Archiver

ಯಾವನು ತನ್ನ ಧರ್ಮಪತ್ನಿಯೊಡನೆ ಋತುಕಾಲದಲ್ಲಿ ಮಾತ್ರ ಸಮಾಗಮ ಮಾಡುವನೋ, ವೇದಾಧ್ಯಯನ ಮಾಡಿ ಸ್ನಾತಕನಾಗಿರುವವನೋ ಅಂತಹ ಬ್ರಾಹ್ಮಣನು ಪಂಕ್ತಿ ಪಾವನನೆನಿಸುತ್ತಾನೆ.

ಅಥರ್ವಣವೇದ ಅಧ್ಯಯನ ಮಾಡಿದವನು, ಪ್ರಯತ್ನಪೂರ್ವಕ ವ್ರತಾನುಷ್ಠಾನ ಮಾಡುವವನು, ಸತ್ಯವನ್ನೇ ನುಡಿಯುವವನು, ಧರ್ಮಶೀಲನು, ನಿತ್ಯಕರ್ಮಾನುಷ್ಠಾನಗಳಲ್ಲಿ ನಿರತನಾದವನು ಇವರೆಲ್ಲರೂ ಪಂಕ್ತಿಯನ್ನು ಪಾವನಗೊಳಿಸುತ್ತಾರೆ.

ಕ್ರೋಧರಹಿತರು, ಚಾಪಲ್ಯವಿಲ್ಲದವರು, ಕ್ಷಮಾಶೀಲರು, ಜಿತೇಂದ್ರಿಯರು, ಸರ್ವ ಪ್ರಾಣಿಹಿತದಲ್ಲಿ ನಿರತರಾದವರು, ಅಂತಹ ಬ್ರಾಹ್ಮಣರನ್ನು ಶ್ರಾದ್ಧದಲ್ಲಿ ನಿಮಂತ್ರಿಸಬೇಕು.

ವೇದವಿದನಾಗಿದ್ದು ಸಕಲವಿಧ ಪಂಕ್ತಿದೋಷಗಳಿಂದ ರಹಿತನಾಗಿದ್ದರೆ, ಪತಿತನಲ್ಲದಿದ್ದರೆ ಅಂತಹವನು ಪಂಕ್ತಿಪಾವನನಾಗುತ್ತಾನೆ.

ಶ್ರಾದ್ಧಕರ್ಮಗಳಲ್ಲಿ ಮಿತ್ರನನ್ನು ನಿಮಂತ್ರಿಸಬಾರದು. ಮಿತ್ರ ಸಂಗ್ರಹಣಾರ್ಥವಾಗಿ ಹಣ ಕೊಡಬಹುದು. ಆದರೆ ಹವ್ಯಕವ್ಯಗಳಲ್ಲಿ ಮಿತ್ರ ಅಥವಾ ಶತ್ರುಭಾವನೆಯಿಲ್ಲದ ಮಧ್ಯಸ್ಥನಾದವನನ್ನೇ ಕರೆದು ಭೋಜನ ಮಾಡಿಸಬೇಕು.

ಸ್ವಾಧ್ಯಾಯ ಹೀನನಾದ ಬ್ರಾಹ್ಮಣನನ್ನು ಶ್ರಾದ್ಧದಲ್ಲಿ ಆಮಂತ್ರಿಸಬಾರದು. ಶ್ರಾದ್ಧಾದಿಗಳಲ್ಲಿ ಜ್ಞಾನನಿಷ್ಠರಾದ ಬ್ರಾಹ್ಮಣರನ್ನು ಆಮಂತ್ರಿಸಬೇಕು.

ಯಾರು ಪರಸ್ಪರವಾಗಿ ಹರಟುತ್ತಿರುವಾಗ ಬ್ರಾಹ್ಮಣರನ್ನು ನಿಂದಿಸುವರೋ ಅಂತಹವರನ್ನು ಶ್ರಾದ್ಧ ಭೋಜನಕ್ಕೆ ಆಮಂತ್ರಿಸಬಾರದು.

ವೇದಜ್ಞನಾದ ಪುರುಷನು ಪ್ರಿಯನಾಗಿರಲಿ, ಅಪ್ರಿಯನಾಗಿರಲಿ ವಿಚಾರ ಮಾಡದೇ ಶ್ರಾದ್ಧಕ್ಕೆ ಅಂತಹವರನ್ನು ನಿಮಂತ್ರಿಸಿ ಭೋಜನ ಮಾಡಿಸಬೇಕು.

ಹತ್ತು ಲಕ್ಷ ಅಪಾತ್ರರಿಗೆ ಭೋಜನ ಮಾಡಿಸುವುದಕ್ಕಿಂತಲೂ ವೇದ ಪಾರಂಗತನಾದ ಒಬ್ಬನೇ ಬ್ರಾಹ್ಮಣನನ್ನು ಕರೆದು ಅವನಿಗೆ ಭೋಜನ ಮಾಡಿಸಿ ದಕ್ಷಿಣೆ ಕೊಟ್ಟು ತೃಪ್ತಿ ಪಡಿಸಬೇಕು.

ಶ್ರಾದ್ಧದಲ್ಲಿ ಮಾಡುವ ಪಿಂಡಪ್ರದಾನ ಸಮಯದಲ್ಲಿ ಚಂಡಾಲ, ಶ್ವಪಚ ಇವರ ದರ್ಶನವಾಗಬಾರದು. ಕುಷ್ಠರೋಗಿ, ಪತಿತ, ಬ್ರಹ್ಮಹತ್ಯೆ ಮಾಡಿದವನು, ಸಂಕರ ಯೋನಿ ಯಲ್ಲಿ ಹುಟ್ಟಿದವನು, ಧರ್ಮಭ್ರಷ್ಟನಾದವನು ಇವರನ್ನು ಶ್ರಾದ್ಧದಲ್ಲಿ ವಿದ್ವಾಂಸರಾದವರು ವರ್ಜಿಸಬೇಕು.

ಶ್ರೀಮನ್‌ಮಹಾಭಾರತದ ಆಶ್ರಮವಾಸಿಕ ಪರ್ವದಲ್ಲಿ ಧೃತರಾಷ್ಟ್ರನು ಭೀಷ್ಮಾಚಾರ್ಯರ ಹಾಗೂ ಮೃತರಾದ ತನ್ನ ಮಕ್ಕಳ ಶ್ರಾದ್ಧಕ್ಕೋಸ್ಕರವಾಗಿ ಸುಯೋಗ್ಯರಾದ ಮತ್ತು

Rarest Archiver

ಶ್ರೇಷ್ಠರಾದ ಬ್ರಹ್ಮರ್ಷಿಗಳನ್ನು ಆಮಂತ್ರಿಸಿ ಅವರಿಗೆ ಭೋಜನಮಾಡಿಸಿ ಧನ, ಕನಕಾದಿಗಳನ್ನು ದಾನವಾಗಿ ಕೊಟ್ಟನು ಎಂಬುದಾಗಿ ತಿಳಿಸಿದ್ದಾರೆ.

ಮುಂದೆ ಧೃತರಾಷ್ಟ್ರನು ವಾಯುವನ್ನೇ ಆಹಾರವಾಗಿ ಸೇವಿಸುತ್ತ ಅರಣ್ಯದಲ್ಲಿ ಇರುತ್ತ ಯಾಜಕರಿಂದ ಇಷ್ಟಿಯನ್ನು ಮಾಡಿಸಿ ಮೂರು ಅಗ್ನಿಗಳನ್ನು ವಿಸರ್ಜಿಸಿದನು. ಯಾಜಕರು ಆ ಮೂರು ಅಗ್ನಿಗಳನ್ನು ನಿರ್ಜೀವವಾದ ಅರಣ್ಯದಲ್ಲಿ ವಿಸರ್ಜಿಸಿ ಹೊರಟು ಹೋದ ಮೇಲೆ ಆ ಅಗ್ನಿಯೇ ವಾಯುವಿನ ಸಹಾಯದಿಂದ ವೃದ್ಧಿಯಾಗಿ ಅರಣ್ಯದಲ್ಲಿ ಹರಡಿತು. ಧೃತರಾಷ್ಟ್ರನು ತನ್ನ ಅಗ್ನಿಯಲ್ಲೇ ಸಮಾವೇಶ ಹೊಂದಿದನು.

ಈ ಸುದ್ಧಿಯನ್ನು ಕೇಳಿ ಯುಧಿಷ್ಠಿರನು ಗಂಗಾನದಿಗೆ ಹೋಗಿ ಧೃತರಾಷ್ಟ್ರನನ್ನು ಕುರಿತು ತರ್ಪಣಕೊಟ್ಟನು. ಅಶೌಚ ನಿವೃತ್ತಿಯಾದ ನಂತರ ಹನ್ನೊಂದನೆಯ ದಿನ ಮಾಡಬೇಕಾದ ಕರ್ಮಗಳನ್ನು ಮುಗಿಸಿದನು. ಹನ್ನೆರಡನೆಯ ದಿನ ಧೃತರಾಷ್ಟ್ರಾದಿಗಳ ಸಲುವಾಗಿ ವಿಧಿವತ್ತಾಗಿ ಶ್ರಾದ್ಧಗಳನ್ನು ಮಾಡಿ ಬ್ರಾಹ್ಮಣರಿಗೆ ಅತಿಶಯವಾಗಿ ದಕ್ಷಿಣೆಗಳನ್ನು ಕೊಟ್ಟನು. ಹೀಗೆ ಯುಧಿಷ್ಠಿರನು ಹಲವು ಬಾರಿ ಶ್ರಾದ್ಧಗಳನ್ನು ಮಾಡಿ ದಾನಗಳನ್ನು ಕೊಟ್ಟು ಹಸ್ತಿನಾಪುರವನ್ನು ಪ್ರವೇಶಿಸಿದನು.

* * *

Rarest Archives

೨

ಶ್ರೀಹರಿವಂಶದಲ್ಲಿ ...

ಒಂದು ದಿನ ಧರ್ಮರಾಜನು ಪಿತಾಮಹರಾದ ಭೀಷ್ಮಾಚಾರ್ಯರನ್ನು ಕುರಿತು ಶ್ರಾದ್ಧಕ್ರಿಯೆ ಸಂಸಾರತಾರಕವಾಗುವ ಬಗೆ ಹೇಗೆ? ಎಂದು ಪ್ರಶ್ನೆ ಮಾಡಲು ಆಗ ಭೀಷ್ಮಾಚಾರ್ಯರು ಉತ್ತರಿಸುತ್ತಾರೆ.

ಹಿಂದೆ ನಾನು ನನ್ನ ತಂದೆಯ ಸಲುವಾಗಿ ಶ್ರಾದ್ಧಮಾಡುತ್ತಿದ್ದ ಕಾಲದಲ್ಲಿ ಪಿತೃವಿಗೆ ಪಿಂಡವನ್ನು ಸಮರ್ಪಿಸಲು(ಪಿಂಡಪ್ರದಾನ ಮಾಡಲು) ಕೈ ಎತ್ತಿದೆನು. ಆ ಸಮಯದಲ್ಲಿ ಆ ಪ್ರದೇಶದ ಭೂಭಾಗವನ್ನು ಭೇದಿಸಿಕೊಂಡು ನನ್ನ ತಂದೆಯು ಪಿಂಡವನ್ನು ಸ್ವೀಕರಿಸಲು ಕೈಚಾಚಿದನು. ಆಗ ಅವನ ತೋಳು ವಿವಿಧ ಆಭರಣಗಳಿಂದ ಭೂಷಿತವಾಗಿತ್ತು. ಜೀವಂತನಾಗಿದ್ದಾಗ ನಾನು ನೋಡಿದ್ದಂತೆಯೇ ಅವನು ರೂಪಸಂಪದ್ಭರಿತನಾಗಿದ್ದನು. ಅಂದಿನವರೆಗೆ ಕಾಣದಿರುವ ಸನ್ನಿವೇಶವನ್ನು ಕಂಡು ಆಶ್ಚರ್ಯಭರಿತನಾಗಿ, ಆಲೋಚನೆಗೆ ಒಳಗಾದೆನು. ಕೊನೆಗೆ ಏನೂ ತಿಳಿಯ ದಂತಾಗಲು ಆದದ್ದಾಗಲಿ ಎಂದೆಣಿಸಿ, ವಿಧ್ಯುಕ್ತ ರೀತಿಯಲ್ಲಿ ನಾನು ದರ್ಭಾಸನದಲ್ಲಿಯೇ ಪಿಂಡಪ್ರದಾನ ಮಾಡಿದೆನು. ಆಗ ನನ್ನ ತಂದೆಯು "ಮಗನೇ! ನಿನ್ನಿಂದಾಗಿ ನಾನು ಪುತ್ರವಂತನಾದೆನು. ನಿನ್ನಿಂದಾಗಿ ನನಗೆ ಇಹಪರಗಳೆರಡರಲ್ಲಿಯೂ ಸುಖಶಾಂತಿ ಲಭಿಸಿತು" ಎಂದರು.

ನಿನ್ನಲ್ಲಿ ಅಂಕುರಿಸಿದ ಶ್ರಾದ್ಧ ವಿಚಾರ ಜಿಜ್ಞಾಸೆಯ ಪರಿಹಾರಕ್ಕಾಗಿ ನಾನೀಗ ನಿನಗೆ ಕಾಣಿಸಿಕೊಂಡೆನು. ಇದರಿಂದಾಗಿ ಜನತೆಗೆ ಶ್ರಾದ್ಧ ವಿಧಾನದಲ್ಲಿ ಆಸ್ಥೆ ಉಂಟಾಗುವುದು ನಿಶ್ಚಿತ. ನೀನು ಮಾಡುತ್ತಿರುವ ಶ್ರಾದ್ಧ ಕರ್ಮಾಚರಣೆಯು ಪ್ರಜೆಗಳಿಗೆ ದಾರಿದೀಪವಾಗುತ್ತದೆ. ಪಿತೃಪ್ರೀತಿಜನಕವಾದ ಈ ಶ್ರಾದ್ಧಕ್ರಿಯೆಯಿಂದ ನನಗೆ ಅತೀವ ಸಂತೋಷವನ್ನುಂಟು ಮಾಡಿರುವಿ. ನಿನ್ನ ಈ ಕ್ರಿಯೆಯಿಂದ ಸಂತುಷ್ಟನಾದ ನಾನು ನಿನಗೆ "ಇಚ್ಛಾಮರಣಿ"ಯಾಗು ಎಂದು ವರ ಕೊಟ್ಟಿರುವೆ ಎಂದು ಹೇಳಿ ನನ್ನ ತಂದೆ ಅಂತರ್ಧಾನರಾದರು.

Rarest Archives

ಭೀಷ್ಮಾಚಾರ್ಯರು ಒಂದು ಮಾತನ್ನು ಹೇಳುತ್ತಾರೆ-

ಶ್ರಾದ್ಧೈಃ ಪ್ರೀಣಾತಿ ಹಿ ಪಿತೄನ್ ಸರ್ವಕಾಮಫಲೈಸ್ತು ಯಃ ।
ತತ್ಪರಃ ಪ್ರಯತಃ ಶ್ರಾದ್ಧೀ ಪ್ರೇತ್ಯ ಚೇಹ ಚ ಮೋದತೇ ॥

ಸರ್ವಕಾಮನೆಗಳನ್ನು ಪೂರ್ತಿಗೊಳಿಸುವ ಶ್ರಾದ್ಧದ ಮೂಲಕವಾಗಿ ಯಾವನು ಪಿತೃಗಳನ್ನು ತೃಪ್ತಿಗೊಳಿಸುವನೋ ಅಂತಹ ಶ್ರಾದ್ಧತತ್ಪರನಾದ ಮತ್ತು ವಿನೀತನಾದ ಶ್ರಾದ್ಧಕರ್ತೃವು ಈ ಲೋಕದಲ್ಲಿ ಆನಂದಪಡುತ್ತಾನೆ. ಅವಸಾನಾನಂತರದಲ್ಲಿ ಪರಲೋಕ ದಲ್ಲಿಯೂ ಸುಖವನ್ನು ಅನುಭವಿಸುತ್ತಾನೆ.

ಪಿತರೋ ಧರ್ಮಕಾಮಸ್ಯ ಪ್ರಜಾಕಾಮಸ್ಯ ಚ ಪ್ರಜಾಮ್ ।
ಪುಷ್ಟಿಕಾಮಸ್ಯ ಪುಷ್ಟಿಂ ಚ ಪ್ರಯಚ್ಛಂತಿ ಯುಧಿಷ್ಠಿರ ॥

ಶ್ರಾದ್ಧದಿಂದ ಸುಪ್ರೀತರಾದ ಪಿತೃಗಳು ಧರ್ಮಕಾಮನಾದವನಿಗೆ ಧರ್ಮವನ್ನು ಪ್ರಜಾಕಾಮನಿಗೆ ಸಂತಾನವನ್ನೂ, ಪುಷ್ಟಿಕಾಮನಿಗೆ ಪುಷ್ಟಿಯನ್ನು ಅನುಗ್ರಹಿಸುತ್ತಾರೆ.

"ದೇವಕಾರ್ಯಾದಪಿ ಮುನೇ ಪಿತೃಕಾರ್ಯಂ ವಿಶಿಷ್ಯತೇ" ಉಕ್ತಿಯಂತೆ ದೇವ ಕಾರ್ಯಕ್ಕಿಂತಲೂ ಪಿತೃಕಾರ್ಯವು ಶ್ರೇಷ್ಠವಾದುದು.

ಸರ್ವೇಷಾಂ ರಾಜತಂ ಪಾತ್ರಮಥವಾ ರಜತಾನ್ವಿತಮ್ ।
ದತ್ತಂ ಸ್ವಧಾಂ ಪುರೋಧಾಯ ಶ್ರಾದ್ಧಂ ಪ್ರೀಣಾತಿ ವೈ ಪಿತೄನ್ ॥

ಎಲ್ಲ ಪಿತೃಗಳ ಪ್ರೀತ್ಯರ್ಥವಾಗಿ ಬೆಳ್ಳಿಯ ಪಾತ್ರೆಯಲ್ಲಿ ಅಥವಾ ಬೆಳ್ಳಿಯಿಂದ ಮಿಶ್ರಿತವಾದ ಪಾತ್ರೆಯಲ್ಲಿ "ಸ್ವಧಾ ಪಿತೃಭ್ಯಃ" ಎಂದು ಹೇಳಿ ಕೊಡಲ್ಪಡುವ ಶ್ರಾದ್ಧವು ಪಿತೃಗಳಿಗೆ ತೃಪ್ತಿ ಯನ್ನೂ ಪ್ರಸನ್ನತೆಯನ್ನೂ ಉಂಟುಮಾಡುತ್ತದೆ.

* * *

Rarest Archiver

೩

ಶ್ರೀಮದ್ರಾಮಾಯಣ ಗ್ರಂಥದಲ್ಲಿ ...

ಶ್ರೀರಾಮಚಂದ್ರನು ಚಿತ್ರಕೂಟ ಪರ್ವತದಲ್ಲಿದ್ದಾಗ ಭರತನಿಂದ ತಂದೆಯಾದ ದಶರಥ ಮಹಾರಾಜನ ಮರಣದ ವಾರ್ತೆಯನ್ನು ಕೇಳಿದ ಕ್ಷಣದಲ್ಲಿಯೇ ಲಕ್ಷ್ಮಣನಿಂದ ಕೂಡಿಕೊಂಡು ತಿಲಾಂಜಲಿ, ದಾನಗಳಿಂದ ತಂದೆಯ ಔರ್ಧ್ವದೇಹಿಕ ಕ್ರಿಯೆಗಳನ್ನು ಶ್ರದ್ಧಾಭಕ್ತಿಪೂರ್ವಕವಾಗಿ ಮಾಡಿದ ವಿಚಾರವು ರಾಮಾಯಣದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ನಂತರ ದಶರಥ ಮಹಾರಾಜನ ಸಾಂವತ್ಸರಿಕ ಶ್ರಾದ್ಧ ಬಂತು. ಆಗ ಶ್ರೀರಾಮ ಚಂದ್ರನು ತಪಸ್ವಿಗಳಾದ ಮಹಾಋಷಿಗಳನ್ನು ದೇವಸ್ಥಾನ, ಪಿತೃಸ್ಥಾನಗಳಲ್ಲಿ ಕುಳ್ಳಿರಿಸಿ ಶ್ರಾದ್ಧ ಮಾಡಿದ. ಸ್ವತಃ ಸೀತಾದೇವಿಯು ಅಡಿಗೆ ಮಾಡಿ ಬಡಿಸುತ್ತಿದ್ದಳು. ಆಗ ಬ್ರಾಹ್ಮಣರನ್ನು ನೋಡಿ ನಾಚಿಕೆಯಿಂದ ಗಾಬರಿಯಾಗಿ ಒಳಗೆ ಹೋದಳು. ಶ್ರೀರಾಮಚಂದ್ರನು ಸೀತೆಯನ್ನು ಕುರಿತು ಹಾಗೇಕೆ ಒಳಗೆ ಹೋಗಿ ಅಡಗಿಕೊಂಡೆ? ಎಂದು ಪ್ರಶ್ನಿಸಲು ಸೀತಾದೇವಿಯು ಉತ್ತರಿಸಿದಳು.

ಪ್ರಭು! ನಿಮ್ಮ ತಂದೆ ಶ್ರೀ ದಶರಥ ಮಹಾರಾಜರನ್ನು ಈ ಬ್ರಾಹ್ಮಣರ ದೇಹದಲ್ಲಿ ಕಂಡೆ. ಅದರಿಂದ ನಾಚಿಕೆಯಾಗಿ ಒಳಗೆ ಹೋದೆ. ಏಕೆಂದರೆ ನಿಮ್ಮ ತಂದೆಯವರು ನನ್ನನ್ನು ಹಿಂದೆ ಸರ್ವಾಭರಣಭೂಷಿತಳನ್ನಾಗಿ ನೋಡಿದ್ದರು. ಈಗ ಬಳಲಿ ಬೆವರಿದ ನಾರುಮಡಿಯುಟ್ಟ ನನ್ನನ್ನು ನೋಡಿ ಅವರೇನು ಅಂದುಕೊಳ್ಳುವರೋ ಎಂಬುದಾಗಿ ಚಿಂತಿಸಿ ನಾನು ಒಳಗೆ ಹೋಗಿ ಅಡಗಿಕೊಂಡೆ.[೧]

ಶ್ರೀರಾಮಚಂದ್ರನು ರಾವಣನನ್ನು ಸಂಹರಿಸಿದ ನಂತರ ಅವನ ತಮ್ಮನಾದ ವಿಭೀಷಣ ನಿಂದ ಶಾಸ್ತ್ರೋಕ್ತವಾದ ಸಂಸ್ಕಾರ, ಉತ್ತರಕ್ರಿಯೆ ಶ್ರಾದ್ಧಾದಿಗಳನ್ನು ಮಾಡಿಸಿದ ಉಲ್ಲೇಖವು ಶ್ರೀರಾಮಾಯಣದ ಯುದ್ಧಕಾಂಡದಲ್ಲಿ ಬಂದಿದೆ.

೧. ಪಿತಾ ತವ ಮಯಾದೃಷ್ಟಃ ಬ್ರಾಹ್ಮಣಾಂಗೇಷುರಾಘವ ।
ದೃಷ್ಟ್ವಾತ್ರಪಾನ್ವಿತಾ ಚಾಹಮಪಕ್ರಾಂತಾ ತವಾಂತಿಕಾತ್ ॥
ಯಾಹಂ ರಾಜಾ ಪುರಾ ದೃಷ್ಟಾ ಸರ್ವಾಲಂಕಾರಭೂಷಿತಾ
ಸಾ ಸ್ವೇದಮಲದಿಗ್ಧಾಂಗೀ ಕಥಂ ಪಶ್ಯಾಮಿ ಭೂಮಿಪಮ್ । ಶ್ರೀರಾಮಾಯಣ

Rarest Archiver

೪

ಶ್ರೀಮದ್‌ಭಾಗವತ ಮಹಾಪುರಾಣದಲ್ಲಿ ...

ಧನವುಳ್ಳ ಬ್ರಾಹ್ಮಣನು ತನ್ನ ಸಂಪತ್ತಿಗನುಸಾರವಾಗಿ ಭಾದ್ರಪದ ಮಾಸದಲ್ಲಿ ತಂದೆ ತಾಯಿಗಳಿಗೂ ಅವರ ಬಂಧುಗಳಿಗೂ ಮಹಾಲಯ ಶ್ರಾದ್ಧವನ್ನು ಮಾಡಬೇಕು.[೧]

ಉತ್ತರಾಯಣ, ದಕ್ಷಿಣಾಯನ ಸಂಕ್ರಾಂತಿಗಳಲ್ಲಿ, ತುಲಾ, ಮೇಷ, ವಿಷುವ ಕಾಲಗಳಲ್ಲಿ ಅಮಾವಾಸ್ಯೆಯಲ್ಲಿ, ವ್ಯತೀಪಾತದಲ್ಲಿ, ದಿನಕ್ಷಯದಲ್ಲಿ ಚಂದ್ರಸೂರ್ಯ ಗ್ರಹಣಕಾಲದಲ್ಲಿ, ಪಾರಣಯೋಗ್ಯ ದ್ವಾದಶಿಯಲ್ಲಿ, ಶ್ರವಣ, ಮಘಾ, ಭರಣಿ ನಕ್ಷತ್ರಗಳಲ್ಲಿ, ವೈಶಾಖ ಶುದ್ಧ ತೃತೀಯಾದಲ್ಲಿ, ಕಾರ್ತಿಕ ಶುದ್ಧ ನವಮಿಯಲ್ಲಿ, ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುಣಗಳೆಂಬ ನಾಲ್ಕು ಮಾಸಗಳ ಕೃಷ್ಣಪಕ್ಷದಲ್ಲಿ ಬರುವ ಸಪ್ತಮೀ, ಅಷ್ಟಮೀ, ನವಮೀ, ತ್ರಯೋದಶೀ ತಿಥಿಗಳಲ್ಲಿ, ಮಾಘ ಶುದ್ಧ ಸಪ್ತಮಿಯಲ್ಲಿ, ಮಘಾ ನಕ್ಷತ್ರಯುಕ್ತವಾದ ಹುಣ್ಣಿಮೆಯಲ್ಲಿ, ಹುಣ್ಣಿಮೆಯಿಂದ ಯುಕ್ತವಾದ ಚಿತ್ರಾ, ವಿಶಾಖಾ, ಜ್ಯೇಷ್ಠಾ ಮುಂತಾದ ನಕ್ಷತ್ರಗಳಲ್ಲಿ, ದ್ವಾದಶಿಯಲ್ಲಿ ಬರುವ ಅನುರಾಧಾ, ಶ್ರವಣ, ಉತ್ತರಾ, ಉತ್ತರಾಷಾಢಾ, ಉತ್ತರಾಭಾದ್ರಪದಾ ನಕ್ಷತ್ರಗಳಲ್ಲಿ, ಮೃಗಶಿರಾ ನಕ್ಷತ್ರ ಸಂಬಂಧವಿರುವ ಜನ್ಮನಕ್ಷತ್ರದಲ್ಲಿ ಶ್ರಾದ್ಧ ಮಾಡಬೇಕು. ಸ್ನಾನ ಪ್ರವಚನಾದಿ ಪುಣ್ಯಕರ್ಮಗಳನ್ನು ಮಾಡುವವರಿಗೆ ಉತ್ತರಾ, ಉತ್ತರಾಷಾಢಾ, ಉತ್ತರಾಭಾದ್ರಪದಾ ನಕ್ಷತ್ರಯುಕ್ತವಾದ ಏಕಾದಶಿ ಹೇಗೋ ಹಾಗೆ ಶ್ರಾದ್ಧ ಮಾಡುವವರಿಗೆ ಅನುರಾಧಾ ಮುಂತಾದ ನಕ್ಷತ್ರಯುಕ್ತವಾದ ದ್ವಾದಶೀ ಬಹು ಫಲಪ್ರದವಾಗಿದೆ.[೨]

ಈ ದಿನಗಳಲ್ಲಿ ಸ್ನಾನ, ಜಪ, ಹೋಮ, ವ್ರತ, ದೇವಪೂಜೆ, ಬ್ರಾಹ್ಮಣಾರಾಧನೆ, ಪಿತೃಗಳಿಗೆ, ದೇವತೆಗಳಿಗೆ, ಮನುಷ್ಯರಿಗೆ, ಪ್ರಾಣಿಗಳಿಗೆ ನೀಡಿದ್ದೆಲ್ಲವೂ ಅಕ್ಷಯಫಲ ಕೊಡಬಲ್ಲವು.[೩]

ವಿಶ್ವೇದೇವಸ್ಥಾನದಲ್ಲಿ ಇಬ್ಬರನ್ನು ಪಿತೃಸ್ಥಾನದಲ್ಲಿ ಮೂವರನ್ನು ಅಥವಾ ಎರಡೂ ಕಡೆ ಒಬ್ಬೊಬ್ಬರನ್ನು ಕೂಡಿಸಿ ಭೋಜನ ಮಾಡಿಸಬೇಕು. ತುಂಬ ಶ್ರೀಮಂತನಾಗಿದ್ದರೂ ಶ್ರಾದ್ಧದಲ್ಲಿ ಹೆಚ್ಚು ವಿಸ್ತಾರ ಮಾಡಬಾರದು.[೪]

Rarest Archiver

ಅನ್ನವನ್ನು ದೇವ, ಋಷಿ, ಪಿತೃ, ಭೂತಗಳಿಗೂ, ತನಗೂ, ತನ್ನ ಬಂಧುಮಿತ್ರರಿಗೂ, ವಿಭಾಗ ಮಾಡಿ ಅರ್ಪಿಸಿ ಎಲ್ಲ ಅಧಿಷ್ಠಾನಗಳಲ್ಲಿಯೂ ಭಗವಂತನೇ ಭುಂಜಿಸುವನೆಂದು ತಿಳಿಯಬೇಕು.[೫]

ಅಡಿಟಿಪ್ಪಣಿಗಳು

೧. ಕುರ್ಯಾದಪರಪಕ್ಷೀಯಂ ಮಾಸಿ ಪ್ರೋಷ್ಠಪದೇ ದ್ವಿಜಃ ।
ಶ್ರಾದ್ಧಂ ಪಿತ್ರೋರ್ಯಥಾವಿತ್ತಂ ತದ್ ಬಂಧೂನಾಂ ಚ ವಿತ್ತವಾನ್ (೭-೧೫-೨೦)

೨. ಅಯನೇ ವಿಷುವೇ ಕುಹ್ವಾಂ ವ್ಯತೀಪಾತೇ ದಿನಕ್ಷಯೇ ।
ಚಂದ್ರಾದಿತ್ಯೋಪರಾಗೇಚ ದ್ವಾದಶ್ಯಾಂ ಶ್ರವಣೇಷು ಚ ॥
ತೃತೀಯಾಯಾಂ ಶುಕ್ಲಪಕ್ಷೇ ನವಮ್ಯಾಮಥ ಕಾರ್ತಿಕೇ
ಚತಸೃಷ್ವಪ್ಯಷ್ಟಕಾಸು ಹೇಮಂತೇ ಶಿಶಿರೇ ತಥಾ ॥
ಮಾಘೇ ಚ ಸಿತಸಪ್ತಮ್ಯಾಂ ಮಘಾರಾಕಾ ಸಮಾಗಮೇ ।
ರಾಕಾಯಾಂ ವಾಽನುಮತ್ಯಾಂ ವಾ ಮಾಸರ್ಕ್ಷಾಣಿ ಯುತಾನ್ಯಪಿ ॥
ದ್ವಾದಶ್ಯಾಮನುರಾಧಾ ಸ್ಯಾತ್ ಶ್ರವಣಸ್ತಿಸ್ರ ಉತ್ತರಾಃ ।
ತಿಸೃಷ್ವೇಕಾದಶೀ ಚಾಸು ಜನ್ಮರ್ಕ್ಷಂ ಸೌಮ್ಯಯೋಗಯುಕ್ (೭-೧೫-೨೧, ೨೪)

೩. ಯೇಷು ಸ್ನಾನಂ ಜಪೋ ಹೋಮೋ ವ್ರತಂ ದೇವದ್ವಿಜಾರ್ಚನಮ್ ।
ಪಿತೃದೇವ ನೃಭೂತೇಭ್ಯೋ ಯದ್ದತ್ತಂ ತದ್ಧ್ಯನಶ್ವರಮ್ (೭-೧೫-೨೬)

೪. ದ್ವೌ ದೈವೇ ಪಿತೃಕಾರ್ಯೇ ತ್ರೀನೇಕೈಕಮುಭಯತ್ರ ವಾ ।
ಭೋಜಯೇತ್ ಸುಸಮೃದ್ಧೋಽಪಿ ಶ್ರಾದ್ಧೇ ಕುರ್ಯಾನ್ನ ವಿಸ್ತರಮ್ (೭-೧೬-೩)

೫. ದೇವರ್ಷಿ ಪಿತೃಭೂತೇಭ್ಯ ಆತ್ಮನೇ ಸ್ವಜನಾಯ ಚ ।
ಅನ್ನಂ ಸಂವಿಭಜನ್ ಪಶ್ಯೇತ ಸರ್ವಂ ತತ್ ಪುರುಷಾತ್ಮಕಮ್ (೭-೧೬-೭)

Rarest Archiver

೫

ಶ್ರೀಪದ್ಮ ಮಹಾಪುರಾಣದಲ್ಲಿ ...

ಭೀಷ್ಮಾಚಾರ್ಯರು ಪುಲಸ್ತ್ಯರನ್ನು ಕುರಿತು ಯಾವ ತೀರ್ಥಗಳಲ್ಲಿ ಮಾಡಿದ ಶ್ರಾದ್ಧಕ್ಕೆ ವಿಶೇಷ ಫಲ ಬರುವುದೆಂದು ಕೇಳಲು ಪುಲಸ್ತ್ಯರು ಹೇಳಲು ಉಪಕ್ರಮಿಸುತ್ತಾರೆ.

ಗಂಗಾಯಮುನಾ ಸಂಗಮದಲ್ಲಿರುವ ಇಕ್ಷುಮತೀ ತೀರ್ಥವು ಪಿತೃಗಳಿಗೆ ಅತ್ಯಂತ ಪ್ರಿಯವಾಗಿದೆ. ನೀಲಕಂಠಕ್ಷೇತ್ರವು ಮತ್ತು ಭದ್ರನರ, ಮಾನಸಸರ ಎಂಬ ಎರಡು ಸರೋವರಗಳು ಅತ್ಯಂತ ಪುಣ್ಯಕರ ಪಿತೃತೀರ್ಥಗಳು. ಇದರಂತೆ ಮಂದಾಕಿನೀ, ವಿಪಾಶಾ, ಸರಸ್ವತೀ ಮುಂತಾದ ನದೀತೀರಗಳಲ್ಲಿಯೂ ಮತ್ತು ಸರ್ವಮಿತ್ರ, ಪದ, ವೈದ್ಯನಾಥ, ಮಹಾಬಲ, ಭದ್ರೇಶ್ವರ, ನರ್ಮದಾದ್ವಾರ, ಕ್ಷಿಪ್ರಾ ಕಾಲಂಜರ, ವಂಶೋದ್ಭೇದ, ಹರೋದ್ಭೇದ, ಗರ್ಭೋದ್ಭೇದ ಮುಂತಾದ ಪುಣ್ಯಕ್ಷೇತ್ರ ಗಳಲ್ಲಿಯೂ ಪಿತೃಗಳನ್ನು ಉದ್ದೇಶಿಸಿ ಪಿಂಡಪ್ರದಾನ ಮಾಡಿದರೆ ಗಯಾ ಕ್ಷೇತ್ರದಲ್ಲಿ ಪಿಂಡಪ್ರದಾನ ಮಾಡಿದ ಪುಣ್ಯ ಬರುತ್ತದೆ.

> ಏಷ್ಟವ್ಯಾ ಬಹವಃ ಪುತ್ರಾ ಯದ್ಯೇಕೋऽಪಿ ಗಯಾಂ ವ್ರಜೇತ್ ।
> ಯಜೇತ ವಾಶ್ವಮೇಧೇನ ನೀಲಂ ವಾ ವೃಷಮುತ್ಸೃಜೇತ್ ॥

ಬಹಳ ಮಂದಿ ಮಕ್ಕಳನ್ನು ಪಡೆಯಬೇಕು. ಯಾಕೆಂದರೆ ಅನೇಕ ಪುತ್ರರಿದ್ದರೆ ಅವರಲ್ಲಿ ಒಬ್ಬನಾದರೂ ಗಯಾಕ್ಷೇತ್ರಕ್ಕೆ ಹೋಗಿ ವಿಷ್ಣುಪಾದದ ಮೇಲೆ ಪಿಂಡವನ್ನು ಹಾಕುವನು. ಅಶ್ವಮೇಧ ಯಾಗವನ್ನು ಮಾಡಬೇಕು. ಇಲ್ಲವೆ ಕಪ್ಪು ಎತ್ತನ್ನು ಬಿಡಬೇಕು. ಅಂದರೆ ಗಯಾಕ್ಷೇತ್ರವು ಇಷ್ಟು ಅತ್ಯಂತ ಪುಣ್ಯಕರವಾದ ಕ್ಷೇತ್ರವಾಗಿದೆ.

ಎಲ್ಲ ಪಿತೃಗಳು ಹೀಗೆ ಅಪೇಕ್ಷೆ ಪಡುವರಂತೆ– ನಮ್ಮ ವಂಶದಲ್ಲಿ ಯಾವನೊಬ್ಬನಾದರೂ ಗಯಾಕ್ಷೇತ್ರಕ್ಕೆ ಹೋಗಿ ಶ್ರಾದ್ಧ ಮಾಡಿ ತನ್ನ ಹಿಂದು ಮುಂದಿನ ತಾಯಿತಂದೆಗಳ ಕುಲವನ್ನು ಉದ್ಧರಿಸುವನೇ? ಗಯಾ, ಧರ್ಮವೃಷ್ಟಿ, ಧರ್ಮಸರ, ಗಯಾಶಿರ, ವಟವೃಕ್ಷ

Rarest Archiver

ಈ ಐದು ಸ್ಥಳಗಳಲ್ಲಿ ಶ್ರಾದ್ಧ ಮಾಡಿ ಪಿಂಡಪ್ರದಾನ ಮಾಡಿದರೆ ಪಿತೃಗಳಿಗೆ ಪ್ರೀತಿಯುಂಟಾಗುತ್ತದೆ. ಈ ಪುಣ್ಯಕ್ಷೇತ್ರಗಳಲ್ಲಿ ಶ್ರಾದ್ಧಮಾಡಿದ ಮನುಷ್ಯನ ಕುಲದಲ್ಲಿ ಯಾರೂ ಪ್ರೇತಜನ್ಮವನ್ನು ಹೊಂದುವದೇ ಇಲ್ಲ.

ಗಯಾದಲ್ಲಿ ಪಿಂಡದಾನಕ್ಕಿಂತ ಹೆಚ್ಚಿನ ದಾನವೇ ಇಲ್ಲ. ಗಯಾಕ್ಷೇತ್ರದಲ್ಲಿ ಪಿಂಡದಾನ ಮಾತ್ರದಿಂದಲೇ ಪಿತೃಗಳು ತೃಪ್ತರಾಗುತ್ತಾರೆ. ಶ್ರಾದ್ಧದಲ್ಲಿ ವಿಶೇಷ ಧಾನ್ಯ ದಾನ ಮಾಡುವುದರಿಂದ ಶ್ರೇಷ್ಠ ಶ್ರಾದ್ಧವಾಗುವದೆಂದು ಕೆಲವರು ಹೇಳುತ್ತಾರೆ. ವಸ್ತ್ರದಾನ ಮಾಡುವುದೇ ಉತ್ತಮ ಶ್ರಾದ್ಧವೆಂದು ಕೆಲವು ಋಷಿಗಳು ಹೇಳುತ್ತಾರೆ. ಆದರೆ ವಾಸ್ತವಿಕವಾಗಿ ಗಯಾಕ್ಷೇತ್ರದಲ್ಲಿ ಪಿಂಡಪ್ರದಾನ ಮಾಡುವುದೇ ಅತ್ಯುತ್ತಮ ಶ್ರಾದ್ಧಕಲ್ಪ. ಅದರಿಂದಲೇ ಸರ್ವಪುಣ್ಯ ಪ್ರಾಪ್ತಿಯಾಗುತ್ತದೆ.

ಶ್ರಾದ್ಧದಲ್ಲಿ ಖಡ್ಗಪಾತ್ರ, ಕುತಪಕಾಲ, ನೇಪಾಳದೇಶದ ಕಂಬಳಿ, ಹಸು, ಚಿನ್ನ, ದರ್ಭೆ, ದೌಹಿತ್ರ, ಎಳ್ಳು ಇವು ಎಂಟು ಪ್ರಶಸ್ತವಾಗಿವೆ.

ದರ್ಭೆ, ಎಳ್ಳು ಇವು ವಿಷ್ಣುವಿನ ದೇಹದಿಂದ ಹುಟ್ಟಿದ್ದರಿಂದ ಇವೆರಡೂ ಶ್ರಾದ್ಧಕ್ಕೆ ಅವಶ್ಯ. ಶ್ರಾದ್ಧಕ್ಕೆ ಕಾಲವು ಮುಖ್ಯವೆಂದು ದೇವತೆಗಳು ಹೇಳುತ್ತಾರೆ. ಕುತಪಕಾಲದಲ್ಲಿ ಶ್ರಾದ್ಧ ಮಾಡುವುದು ಶ್ರೇಯಸ್ಕರ. ಶ್ರಾದ್ಧವಿಧಿಯು ಅತ್ಯಂತ ಪುಣ್ಯಕರ. ಇದು ಆಯುಷ್ಯ ನೀಡುವುದು, ಪಾಪನಾಶ ಮಾಡುವುದು. ಬ್ರಹ್ಮದೇವರು ಈ ಶ್ರಾದ್ಧ ವಿಧಿಯನ್ನು ಹೇಳಿದ್ದಾರೆ.

ಶ್ರಾದ್ಧಕಾಲದಲ್ಲಿ ಇಲ್ಲಿ ಹೇಳಿದ ಶ್ರಾದ್ಧಮಹಿಮೆಯನ್ನು ಪಠಿಸಬೇಕು. ಈ ಶ್ರಾದ್ಧ ಮಹಿಮೆ ಪರಮ ಪವಿತ್ರವಾದುದು. ಜ್ಞಾನಿಗಳು ಈ ಶ್ರಾದ್ಧ ಮಹಿಮೆಯನ್ನು ಕೊಂಡಾಡಿದ್ದಾರೆ.

* * *

Rarest Archiver

೬

ಶ್ರೀಪದ್ಮ ಮಹಾಪುರಾಣದಲ್ಲಿ ಉಪಾಖ್ಯಾನಗಳು

ಪೂರ್ವಕಾಲದಲ್ಲಿ ಪೃಥು ಎಂಬ ಬ್ರಾಹ್ಮಣನಿದ್ದನು. ಅವನು ಒಳ್ಳೆಯ ನಿಯಮ ನಿಷ್ಠನಾಗಿದ್ದನು. ವೇದಾಧ್ಯಯನ, ಹೋಮ, ಜಪ ಮುಂತಾದ ಯಾವ ವಿಧಿಯನ್ನೂ ಬಿಡುತ್ತಿರಲಿಲ್ಲ. ಶಮ, ದಮಗಳಿಂದ ಕೂಡಿದ್ದನು. ಬ್ರಹ್ಮಚರ್ಯವ್ರತವನ್ನು ಅನೂಚಾನವಾಗಿ ಪಾಲಿಸುತ್ತಿದ್ದ. ದೇವ ಹಾಗೂ ಪಿತೃಕಾರ್ಯಗಳನ್ನು ಸಕಾಲದಲ್ಲಿ ಆಚರಿಸುತ್ತಿದ್ದ.

ಈ ದ್ವಿಜನಿಗೆ ತೀರ್ಥಯಾತ್ರೆ ಮಾಡಬೇಕೆಂಬ ಬುದ್ಧಿ ಉಂಟಾಯಿತು. ಪುಣ್ಯ ತೀರ್ಥಗಳಲ್ಲಿ ಮುಳುಗುಹಾಕಿ ತನ್ನ ದೇಹವನ್ನು ಪಾವನ ಮಾಡಬೇಕೆಂಬ ಹಿರಿಯಾಸೆ ಮೂಡಿತು. ಪುಷ್ಕರತೀರ್ಥಕ್ಕೆ ಬಂದು ಸ್ನಾನ ಮಾಡಿ, ಸೂರ್ಯೋದಯಕ್ಕೆ ಸರಿಯಾಗಿ ಸಂಧ್ಯಾ, ಜಪ, ಉಪಸ್ಥಾನ ಪೂಜೆ ಮುಂತಾದ ಎಲ್ಲ ಆಹ್ನಿಕ ಮುಗಿಸಿ ಪ್ರಯಾಣ ಬೆಳೆಸಿದನು. ಅವನು ಒಂದು ಅರಣ್ಯದಲ್ಲಿ ಹೋಗುವಾಗ ನೀರು ನೆರಳಿಲ್ಲದ ಭಯಂಕರ ಕಾಡಿನ ಮಧ್ಯದಲ್ಲಿ ಬಂದನು. ಎಲ್ಲ ಕಡೆ ಬರೀ ಮುಳ್ಳಿನಗಿಡಗಳಿದ್ದವು. ಅಂತಹ ಗೊಂಡಾರಣ್ಯದಲ್ಲಿ ಅವನಿಗೆ ಐದು ಭೀಕರಾಕಾರದ ಮನುಷ್ಯರು ಕಣ್ಣಿಗೆ ಬಿದ್ದರು. ಅವರ ಆಕಾರವನ್ನು ನೋಡಿ ಬ್ರಾಹ್ಮಣನಿಗೆ ತುಸು ಹೆದರಿಕೆ ಆಯಿತು. ಆದರೂ ಅಲುಗಾಡದೇ ನಿಂತಲ್ಲಿಯೇ ನಿಂತುಕೊಂಡನು. ನಂತರ ತುಸು ಧೈರ್ಯ ತೆಗೆದುಕೊಂಡು ಸವಿನುಡಿಯಲ್ಲಿ ಅವರನ್ನು ಕೇಳಿದನು.

ಅಯ್ಯಾ ನೀವು ಯಾರು? ನಿಮ್ಮ ಮುಖಗಳು ಏಕೆ ವಿಕಾರಗೊಂಡಿವೆ?

ಆಗ ಪ್ರೇತಗಳು– ಬ್ರಾಹ್ಮಣನೇ! ನಾವು ಹಸಿದು ಕಂಗಾಲಾಗಿದ್ದೇವೆ. ಭಯಂಕರ ದುಃಖದಲ್ಲಿ ಮುಳುಗಿದ್ದೇವೆ. ನಮಗೆ ಜ್ಞಾನವೇ ಇಲ್ಲ. ಐವರಲ್ಲಿ ನಾನು ಪ್ರತ್ಯುಷಿತ, ಇವನು ಸೂಚೀಮುಖ, ಅವನು ಶೀಘ್ರಗ, ನಾಲ್ಕನೆಯವನು ರೋಹಕ, ಐದನೆಯವನು ಲೇಖಕ.

ಬ್ರಾಹ್ಮಣ ಅವರ ಹೆಸರುಗಳನ್ನು ಕೇಳಿ "ದುಷ್ಕರ್ಮದಿಂದ ಪ್ರೇತಗಳಾಗಿ ಹುಟ್ಟಿದವರ ಹೆಸರುಗಳೇ ನಿಮಗಿರುತ್ತವೆ. ನಿಮಗೆ ಇಂಥ ಹೆಸರು ಬರಲು ಕಾರಣವೇನು? ತಿಳಿಸಿರಿ ಎಂದ.

Rarest Archiver

ಪ್ರೇತಗಳು ಉತ್ತರಿಸಿದವು. ನಾನು ಮೊದಲು ಬದುಕಿದ್ದಾಗ ರುಚಿಕರವಾದ ಬಿಸಿ ಅನ್ನವನ್ನು ಊಟ ಮಾಡುತ್ತಿದ್ದೆ. ದ್ವಿಜರಿಗೆ ಹಳಸಿದ ತಂಗಳು ಅನ್ನ ಹಾಕುತ್ತಿದ್ದೆ. ಈ ಕಾರಣದಿಂದ ನನಗೆ "ಪ್ರತ್ಯುಷಿತ" ಎಂದು ಹೆಸರು ಬಂತು.

ಈ ನನ್ನ ಜೊತೆಗಾರನು ಅನ್ನ ಬಯಸಿ ಬಂದ ದ್ವಿಜರನ್ನು ವ್ಯಂಗ ಮಾತು ಗಳಿಂದ ಚುಚ್ಚಿ ಮಾತಾಡಿಸುತ್ತಿದ್ದ. ಬಿರುನುಡಿಗಳಿಂದ ಅವಮಾನ ಮಾಡಿ ತಿವಿಯುತ್ತಿದ್ದನು. ಅದರಿಂದ ಇವನಿಗೆ "ಸೂಚೀಮುಖ" ಎಂದು ಹೆಸರು ಬಂತು.

ಮತ್ತೊಬ್ಬ ನನ್ನ ಮಿತ್ರನು ಹಸಿದು ಬಂದ ದ್ವಿಜರು ಅನ್ನ ಕೇಳಿದ ಕೂಡಲೇ ಅಲ್ಲಿಂದ ವೇಗವಾಗಿ ಓಡಿ ಹೋಗುತ್ತಿದ್ದ. ಬೇಕಾದಷ್ಟು ಅನ್ನ ಇದ್ದರೂ ಯಾರಿಗೂ ಕೊಡದೇ ಓಡಿ ಹೋಗುತ್ತಿದ್ದುದರಿಂದ ಇವನಿಗೆ "ಶೀಘ್ರಗ" ಎಂದು ಹೆಸರು ಬಂದಿದೆ.

ನಮ್ಮ ಈ ನಾಲ್ಕನೆಯ ಸಹಚರನು ಮನೆಗೆ ಬಂದ ಅತಿಥಿಗಳ ಕಣ್ಣುತಪ್ಪಿಸಿ ತನ್ನ ಮನೆಯ ಅಟ್ಟದ ಮೇಲೆ ಕುಳಿತು ಪಕ್ವಾನ್ನ ಊಟ ಮಾಡುತ್ತಿದ್ದನು. ಅದರಿಂದ ಅವನಿಗೆ "ರೋಹಕ" ಎಂದು ಹೆಸರು ಬಂದಿದೆ.

ಈ ಐದನೆಯ ಸಹಚರನು ಹಸಿದ ಜನರು ಮನೆಗೆ ಬಂದು ಅನ್ನ ಬೇಡಿದಾಗ ಮನೆಯಲ್ಲಿ ಸಾಕಷ್ಟು ಅನ್ನವಿದ್ದರೂ ಕೆಳಗೆ ಮುಖಮಾಡಿ ಏಕಾಕಿಯಾಗಿ ನೆಲ ಕೆದರುತ್ತ ಕುಳಿತುಕೊಳ್ಳುತ್ತಿದ್ದನು. ಆದ್ದರಿಂದ ಇವನಿಗೆ "ಲೇಖಕ" ಎಂದು ಹೆಸರು ಬಂದಿದೆ.

ಬ್ರಾಹ್ಮಣನು ಈ ಪ್ರೇತರನ್ನು ಕುರಿತು ಭೂಲೋಕದಲ್ಲಿ ಮಾನವ ಜೀವಿಗಳು ಬದುಕುವುದು ಆಹಾರದಿಂದ. ಈಗ ನಿಮ್ಮ ಆಹಾರ ಯಾವುದು? ಏನು ತಿನ್ನುವಿರಿ? ಕೇಳಿದ.

ಬ್ರಾಹ್ಮಣನೇ! ನಾವು ಕಸಕಡ್ಡಿ ಶೌಚಕೂಪಗಳಲ್ಲಿ ವಾಸಮಾಡುತ್ತೇವೆ. ಶ್ಲೇಷ್ಮ, ಮಲ, ಮೂತ್ರ ಇವೇ ಮೊದಲಾದವು ನಮಗೆ ಆಹಾರ. ನೈವೇದ್ಯ, ವೈಶ್ವದೇವ ಇಲ್ಲದ, ವ್ರತ ಗಳನ್ನು ಆಚರಿಸದ, ಮಂತ್ರ ಪಠಿಸದ, ಗುರುಗಳನ್ನು ಪೂಜಿಸದ, ಮನೆಯಲ್ಲಿ ಗಂಡಸು ಹೆಂಗಸಿನ ವಶವರ್ತಿಯಾಗಿ ನಡೆಯುವ ಸ್ತ್ರೀಪ್ರಧಾನ ಮನೆಯಲ್ಲಿ ನಮ್ಮಂತಹ ಪ್ರೇತಗಳಿಗೆ ಆಹಾರ ಇರುತ್ತದೆ. ನಮ್ಮ ಆಹಾರ ಹೇಳಿ ಕೊಳ್ಳಲು ನಮಗೆ ನಾಚಿಕೆ ಆಗುತ್ತದೆ. ಮನುಷ್ಯನು ಪ್ರೇತನಾಗದಂತೆ ಇರಬೇಕಾದರೆ ಏನು ಮಾಡಬೇಕು ಹೇಳು ಎಂದಾಗಿ ಪ್ರೇತಗಳು ಕೇಳಿಕೊಂಡವು.

ಅದಕ್ಕೆ ಉತ್ತರವಾಗಿ ಬ್ರಾಹ್ಮಣನು ಹೇಳುತ್ತಾನೆ–

ದೇವತೆಗಳು, ಅತಿಥಿಗಳು, ಗುರುಗಳು, ಪಿತೃಗಳು ಇವರ ಪೂಜೆಯಲ್ಲಿ ಆಸಕ್ತನಾದವನು ಪ್ರೇತನಾಗುವುದಿಲ್ಲ. ಶುಕ್ಲಪಕ್ಷದ ಚತುರ್ಥಿಯು ಮಂಗಳವಾರ ಬಂದರೆ ಆದಿನ ಶ್ರದ್ಧೆಯಿಂದ ಶ್ರಾದ್ಧ ಮಾಡಿದವನು ಪ್ರೇತನಾಗುವುದಿಲ್ಲ. ಗೋ, ದ್ವಿಜರು, ತೀರ್ಥಗಳು, ಪರ್ವತಗಳು,

Rarest Archiver

ನದಿಗಳು ದೇವತೆಗಳು ಇವರನ್ನು ಸ್ಮರಿಸುವವನು ಪ್ರೇತನಾಗುವುದಿಲ್ಲ. ಪಾಪಾನ್ನವನ್ನು ತಿಂದು ಅದರಲ್ಲಿಯೂ ದ್ವಿಜನಾಗಿ ಅತಿಶಯ ವಾಗಿ ಆ ಅನ್ನವು ಹೊಟ್ಟೆಯಲ್ಲಿರುವಾಗ ಸತ್ತರೆ ಪ್ರೇತನಾಗುವನು. ತಮ್ಮ ತಮ್ಮ ಆಶ್ರಮಧರ್ಮ ಬಿಟ್ಟು ಮದ್ಯ ಕುಡಿಯುತ್ತ, ಸ್ತ್ರೀಲೋಲನಾಗಿ, ಮಾಂಸ ತಿನ್ನುವುದರಿಂದ ಪ್ರೇತನಾಗುವನು. ಆ ದ್ವಿಜನು ಹೀಗೆ ನುಡಿಯುತ್ತಿರುವಾಗ ಆಕಾಶದಿಂದ ಪುಷ್ಪವೃಷ್ಟಿ ಆಯಿತು. ಬ್ರಹ್ಮಜ್ಞಾನಿಯ ಜೊತೆಗೆ ಮಾತಾಡಿ ತತ್ವಾರ್ಥ ತಿಳಿದಿದ್ದರಿಂದ ಆ ಪ್ರೇತಜನ್ಮದಿಂದ ಮುಕ್ತರಾಗಿ ಅವರೆಲ್ಲರೂ ಸ್ವರ್ಗಕ್ಕೆ ಪ್ರಯಾಣ ಬೆಳೆಸಿದರು.

೨

ಹಿಮಾಚಲದ ತಪ್ಪಲ ಪ್ರದೇಶದಲ್ಲಿ ಒಂದು ಬೇಡರನಗರ. ಅದಕ್ಕೆ "ಕಿರಾತನಗರ" ವೆಂದೇ ಹೆಸರು. ಅಲ್ಲಿ ಕುಶಲನೆಂಬ ಬ್ರಾಹ್ಮಣ ವಾಸವಾಗಿದ್ದ. ಅವನು ಮಹಾದರಿದ್ರ. ಅವನ ಹೆಂಡತಿ ದುರಾಚಾರ, ವ್ಯಭಿಚಾರ, ವಂಚನೆಗಳ ತವರು. ಆದರೆ ಅವಳ ಗಂಡನಾದ ಕುಶಲ ಬ್ರಾಹ್ಮಣ ಮಡದಿಯ ಮೋಹಕ ಸೌಂದರ್ಯದಿಂದ ಮುಗ್ಧನಾಗಿದ್ದ.

ತನ್ನ ಮಡದಿಯ ದುರಾಚಾರಗಳನ್ನು ತಾಳಲಾರದೇ ದುಃಖಿಸುತ್ತ ಒಳಗೊಳಗೇ ನೋವು ಅನುಭವಿಸುತ್ತ ಇದ್ದ. ಆ ಕುಶಲಬ್ರಾಹ್ಮಣ ಅದೇ ಚಿಂತೆಯಿಂದ ಒಂದು ದಿನ ರಾತ್ರಿಯಲ್ಲಿ ಮರಣ ಹೊಂದಿದ. ಇದರಿಂದ ಅವನ ಹೆಂಡತಿಗೆ ದುಃಖವಾಗದಿದ್ದರೂ, ರಾಜಾದಿಗಳ ಹೆದರಿಕೆಯಿಂದ ಚಿಂತೆಯಾಯಿತು. ಅವಳು ತನ್ನ ಪತಿಯ ಶರೀರವನ್ನು ಪಡಸಾಲೆಗೆ ತಂದು ಹಾಕಿ ದೊಡ್ಡ ಧ್ವನಿಯಿಂದ ಅತ್ತು ಜನರನ್ನು ಕೂಡಿಸಿದಳು. ಅವರ ಎದುರು ತಾನು ಸಹಗಮನ ಹೋಗುವುದಾಗಿ ಹೇಳತೊಡಗಿದಳು. ಅವಳ ಸ್ನೇಹಿತೆಯರು "ನೀನು ಸಹಗಮನ ಹೋಗುವುದು ಬೇಡ. ನಿನ್ನ ಮಗನ ಕಡೆಗೆ ಲಕ್ಷ್ಯಕೊಡು. ಅವನು ಬೆಳೆದು ದೊಡ್ಡವನಾದ ಮೇಲೆ ನಿನಗೆ ಸಂತೋಷ ನೀಡುತ್ತಾನೆ" ಎಂದರು.

ಅವರ ಮಾತನ್ನು ಕೇಳಿ ಬ್ರಾಹ್ಮಣನ ಹೆಂಡತಿಯು ನೀವು ಹೇಳಿದ ಮಾತು ನಿಜವೇ. ಈ ಪುತ್ರನನ್ನು ರಕ್ಷಿಸುವುದು ನನ್ನ ಕರ್ತವ್ಯ. ಆದರೆ ಎಲ್ಲಕ್ಕಿಂತ ಪತಿಯೇ ಪತ್ನಿಗೆ ಸರ್ವಸ್ವ. ಪತಿಯು ದರಿದ್ರನಿರಲಿ, ರೋಗಿಷ್ಟನಿರಲಿ ಅವನನ್ನು ಅನುಸರಿಸಿ ಇರಬೇಕಾದುದು ಪತ್ನಿಯ ಕರ್ತವ್ಯ. ಕಾರಣ ಗೆಳತಿಯರೇ! ನಾನು ನನ್ನ ಪತಿಯನ್ನು ಅನುಸರಿಸಿ ಸತಿ ಹೋಗಬೇಕೆಂದು ನಿರ್ಧರಿಸಿದ್ದೇನೆ ಎಂದಳು. ಆಗ ಗೆಳತಿಯರು "ನಿನ್ನ ಪತಿಯೊಡನೆ ಸಹಗಮನ ಮಾಡುವುದು ನಿಶ್ಚಿತವಾದುದಾದರೆ ನಮಗೆ ವಿಷಕೊಟ್ಟು ಕೊಂದುಬಿಡು. ನಿನ್ನ ವಿರಹ ತಾಳಲಾರೆವು" ಎನಲು ಗೆಳತಿಯರ ಆಗ್ರಹದ ಮೇರೆಗೆ ಅವಳು ಸಹಗಮನದಿಂದ ನಿವೃತ್ತಳಾಗಿ ಮಗನಿಂದ ಪತಿಯ ಔರ್ಧ್ವದೇಹಿಕ ಸಂಸ್ಕಾರ ಗಳನ್ನು, ಶ್ರಾದ್ಧಾದಿಗಳನ್ನು ಮಾಡಿಸಿದಳು.

Rarest Archiver

ಕೆಲವು ದಿನಗಳು ಕಳೆದಮೇಲೆ ದುರಾಚಾರಿಯಾದ ಅವಳು ಬ್ರಾಹ್ಮಣರನ್ನು ಕರೆದು ತನ್ನ ಪ್ರಿಯರಾದ ವಿಟಪುರುಷರು ನೀಡಿದ ಹಣದಿಂದ ಮಗನ ಉಪನಯನ ನೆರವೇರಿಸಿದಳು. ಉಪನಯನ ಹೊಂದಿದ ಮಗನಿಗೆ ತತ್ವಜ್ಞಾನೋದಯವಾಗಲು ಮಗನು ಮನೆಬಿಟ್ಟು ಹೊರಟೇ ಬಿಟ್ಟ. ಸಜ್ಜನರ ಸಹವಾಸ ಮಾಡಿ, ಭಗವದ್ವಿಷಯಕ ಜ್ಞಾನ ಸಂಪಾದಿಸಿ ಭಗವಂತನನ್ನು ಚಿಂತಿಸುತ್ತ ಆಧ್ಯಾತ್ಮ ಸಾಧನೆ ಮಾಡಿಕೊಂಡ. ನಿರಂತರ ಶ್ರೀಹರಿಯ ಆರಾಧನೆಯನ್ನು ಶ್ರದ್ಧಾತಿಶಯದಿಂದ ಮಾಡಿ ಈ ಪ್ರಾಕೃತ ಶರೀರವನ್ನು ತ್ಯಜಿಸಿ ಯೋಗಿಗಮ್ಯವಾದ ಸದ್ಗತಿ ಹೊಂದಿದ.

ಮಗನು ಮನೆಬಿಟ್ಟು ಹೋದನಂತರ ದುರಾಚಾರಿಣಿಯಾದ ಅವನ ತಾಯಿಯು ಅನೇಕ ಜಾರರೊಡನೆ ಸರಸಸಲ್ಲಾಪಗಳನ್ನು ಮಾಡುತ್ತ ಕಾಲ ಕಳೆದಳು. ಕಾಲಕ್ರಮದಲ್ಲಿ ಮುಪ್ಪು ಅವಳನ್ನು ಆವರಿಸಿತು. ಎಲ್ಲರೂ ಅವಳಿಂದ ದೂರಾದರು. ಆಗ ಜೀವನ ಕಳೆಯುವುದೇ ಕಷ್ಟವಾಯಿತು. ಕುಷ್ಠರೋಗಕ್ಕೆ ತುತ್ತಾದಳು. ಈ ಜನ್ಮದಲ್ಲಿ ಮಾಡಿದ ಪಾಪಕೃತ್ಯದ ಫಲವನ್ನು ಈ ಜನ್ಮದಲ್ಲೇ ಅನುಭವಿಸುತ್ತ ಅನ್ನ ಆಹಾರಗಳಿಲ್ಲದೇ ರೋಗಗಳು ಉಲ್ಬಣಿಸಿ ಒಂದು ದಿನ ಜನ್ಮ ನೀಗಿದಳು. ಅವಳ ಶರೀರಕ್ಕೆ ಯಾರೂ ಸಂಸ್ಕಾರ ಮಾಡಲಿಲ್ಲ. ನರಿ ನಾಯಿ ಹದ್ದುಗಳು ಶರೀರವನ್ನು ತಿಂದು ಹಾಕಿದವು.

ಅವಳು ಯಾತನಾದೇಹವನ್ನು ಹೊಂದಿ ಯಮಪಟ್ಟಣಕ್ಕೆ ಹೋಗಿ ರೌರವ ನರಕದಲ್ಲಿ ಅನೇಕ ಯಮಯಾತನೆಗಳನ್ನು ಅನುಭವಿಸಿದಳು. ಯಮದೇವರು ಅವಳು ಮಾಡಿದ ದುರಾಚಾರಕ್ಕೆ ಪ್ರತಿಯಾಗಿ ಅನೇಕ ರೀತಿಯಾದ ಶಿಕ್ಷೆ ಕೊಟ್ಟರು. ಒಂದು ಮನ್ವಂತರ ಪರ್ಯಂತ ಘೋರತರ ದುಃಖಗಳನ್ನು ನರಕದಲ್ಲಿ ಅನುಭವಿಸಿ ಭೂಲೋಕದ ಸ್ಮಶಾನ ವೊಂದರಲ್ಲಿ ಹಲ್ಲಿಯಾಗಿ ಹುಟ್ಟಿದಳು. ಸತ್ತ ಮಾನವರ ಶರೀರವನ್ನು ತಿನ್ನುತ್ತ ನೂರು ವರ್ಷ ಸ್ಮಶಾನದಲ್ಲಿ ವಾಸಮಾಡಿದಳು.

ಇವಳ ಹೊಟ್ಟೆಯಲ್ಲಿ ಹುಟ್ಟಿದ ಮಗನು ಉಪನಯನವಾದ ಬಳಿಕ ವಿರಕ್ತ ಸನ್ಯಾಸಿ ಯಾಗಿ ಭಗವದಾರಾಧನೆ ಮಾಡುತ್ತ ಆ ಜನ್ಮದಿಂದ ಮುಕ್ತನಾಗಿ ಬೇರೊಂದು ಬ್ರಾಹ್ಮಣನ ಮನೆಯಲ್ಲಿ ಯೋಗಿಯಾಗಿ ಜನಿಸಿದ. ಈ ಜನ್ಮದಲ್ಲಿ ವಿರಕ್ತನಾಗಿ ಬಾಲ್ಯದಲ್ಲೇ ತೀರ್ಥಯಾತ್ರೆ ಮಾಡುತ್ತ ಹೊರಟಾಗ ದಾರಿಯಲ್ಲಿ ಸ್ಮಶಾನದಲ್ಲಿ ಶವದ ಮಾಂಸವನ್ನು ತಿನ್ನುತ್ತ ಇರುವ ಹಲ್ಲಿಯನ್ನು ಕಂಡನು. ಕೂಡಲೇ ಅವನಿಗೆ ಇವಳು ತನ್ನ ಪೂರ್ವಜನ್ಮದ ತಾಯಿ ಎಂದು ತಿಳಿದು ಹೋಯಿತು. ಅವನು ತನ್ನ ಮನಸ್ಸಿನಲ್ಲಿ "ಈ ಭಯಂಕರವಾದ ಜನ್ಮ ದಿಂದ ಉದ್ಧರಿಸಬೇಕು" ಎಂದುಕೊಂಡ.

ಈ ಯೋಗಿ ಮಗನು ತನ್ನ ಪೂರ್ವಜನ್ಮದ ತಾಯಿಯ ಸ್ಥಿತಿಗತಿಗಳನ್ನು ಕಣ್ಮುಚ್ಚಿ ಯೋಗದೃಷ್ಟಿಯಿಂದ ವಿಚಾರಿಸಿದ. "ಒಂದು ನೂರು ಕಲ್ಪ ಹೀಗೆ ದುಃಖಪಟ್ಟರೂ ಇವಳ ದುಃಖ ಸವೆಯಲಾರದು ಇವಳಿಗೆ ಉದ್ಧಾರವೇ ಆಗುವುದಿಲ್ಲ. ಆದ್ದರಿಂದ

Rarest Archiver

ಇವಳು ಯಾವುದಾದರೂ ಒಂದು ತೀರ್ಥದಲ್ಲಿ ಮರಣ ಹೊಂದಬೇಕು. ಇಲ್ಲವೇ ಶ್ರೀಹರಿಗೆ ಶರಣು ಹೋಗಬೇಕು ಅಥವಾ ನಾನು ಗಯೆಗೆ ಹೋಗಿ ವಿಷ್ಣುಪಾದದ ಮೇಲೆ ಇವಳ ಹೆಸರಿನಿಂದ ಪಿಂಡವನ್ನು ಹಾಕಬೇಕು. ಈ ಮೂರರಲ್ಲಿ ಒಂದನ್ನು ಮಾಡದ ಹೊರತು ಇವಳ ಉದ್ಧಾರ ಸಾಧ್ಯವೇ ಇಲ್ಲ. ಮೊದಲಿನವೆರಡು ಉಪಾಯಗಳು ಸಾಧ್ಯವಿಲ್ಲದ ಕಾರಣ ನಾನೇ ಗಯಾಕ್ಷೇತ್ರಕ್ಕೆ ಹೋಗಿ ಇವಳ ಶ್ರಾದ್ಧ ಮಾಡಿ ವಿಷ್ಣುಪಾದದ ಮೇಲೆ ಇವಳ ಹೆಸರಿನಿಂದ ಪಿಂಡದಾನ ಮಾಡಿದರೆ ಉದ್ಧಾರವಾಗುವುದೆಂದುಕೊಂಡು ಆ ಯೋಗಿಪುತ್ರನು ತನ್ನ ಈ ಜನ್ಮದ ತಂದೆ ಯಾದ ಮುನೀಶ್ವರರ ಬಳಿಗೆ ತೆರಳಿದ. ಅವರಿಗೆ ನಮಸ್ಕರಿಸಿ "ತನ್ನ ಜನ್ಮಾಂತರದ ತಾಯಿ ಸ್ಮಶಾನದಲ್ಲಿ ಹಲ್ಲಿಯಾಗಿ ಜನಿಸಿದ್ದನ್ನು ಹೇಳಿದ. ಇದನ್ನು ಕೇಳಿದ ತಂದೆ. ಆ ನಿನ್ನ ಹಿಂದಿನ ಜನ್ಮದ ತಾಯಿಯನ್ನು ಬೇಗ ಉದ್ಧರಿಸು, ತನ್ನ ತಂದೆತಾಯಿಗಳನ್ನು ಪಾರುಮಾಡದ ಮಗನು ತಾನೇ ನರಕಕ್ಕೆ ಬೀಳುತ್ತಾನೆ" ಎಂದರು.

ಮಗನೇ! ನೀನು ಇಲ್ಲಿ ಸಮೀಪದಲ್ಲಿರುವ ಖಾಂಡವವನಕ್ಕೆ ಹೋಗು. ಅಲ್ಲಿ ಮುನಿವರ್ಯರಿಂದ ಸೇವಿತಳಾದ ಯಮುನೆ ಹರಿಯುತ್ತಲಿದ್ದಾಳೆ. ಅಲ್ಲಿ ಸಾಕ್ಷಾತ್ ಶ್ರೀಹರಿಯು ಸ್ಥಾಪಿಸಿದ "ಮಧುವನ" ಇದೆ. ಅಲ್ಲಿರುವ ಪಾವನತೀರ್ಥದಲ್ಲಿ ಸ್ನಾನ ಮಾಡಿ ಪೂಜಾದಿಗಳನ್ನು ಮಾಡಿ ನಿನ್ನ ಜನ್ಮಾಂತರದ ತಾಯಿಯನ್ನು ಉದ್ದೇಶಿಸಿ ಶ್ರಾದ್ಧ ಮಾಡು. ಆ ಮಧುವನ ತೀರ್ಥದಲ್ಲಿ ಶ್ರಾದ್ಧ ಮಾಡುವುದರಿಂದ, ಗಯಾಕ್ಷೇತ್ರದಲ್ಲಿ ಶ್ರಾದ್ಧ ಮಾಡುವುದರಿಂದ ಬರುವ ಪುಣ್ಯದ ನೂರುಪಟ್ಟು ಪುಣ್ಯ ಪ್ರಾಪ್ತವಾಗುತ್ತದೆ. ಈಗ ಸೂರ್ಯನು ಕನ್ಯಾರಾಶಿಯಲ್ಲಿ ಇರುತ್ತಾನೆ. ನೀನು ಅಲ್ಲಿಗೆ ಹೋಗಿ ನಿನ್ನ ಪಿತೃಗಳನ್ನು ಉದ್ದೇಶಿಸಿ ಶ್ರಾದ್ಧ ಮಾಡಿ ಅವರೆಲ್ಲರನ್ನೂ ಉದ್ಧರಿಸು ಎಂದರು.

ತನ್ನ ಈ ಜನ್ಮದ ತಂದೆಯ ವಚನದಂತೆ ಆ ಯೋಗೀಶ್ವರನು ಅವಸರದಿಂದ ಮಧುವನಕ್ಕೆ ತೆರಳಿದ. ಅಲ್ಲಿ ಬ್ರಾಹ್ಮಣರನ್ನು ಕರೆಸಿ ವಿಧಿಪೂರ್ವಕವಾಗಿ ಚಟಕಶ್ರಾದ್ಧ ಮಾಡಿ ಬ್ರಾಹ್ಮಣರೆಲ್ಲರಿಗೂ ತೃಪ್ತಿಯಾಗುವಂತೆ ಸುಗ್ರಾಸಭೋಜನ ಮಾಡಿಸಿದ. ವಿಶೇಷ ವಾಗಿ ದಾನ, ದಕ್ಷಿಣೆಗಳನ್ನು ನೀಡಿದ. ಬ್ರಾಹ್ಮಣರಿಂದ ಅಪ್ಪಣೆ ಪಡೆದು ತಾನೂ ಭೋಜನ ಮಾಡಿದ.

ಹೀಗೆ ಶ್ರಾದ್ಧ ವಿಧಿಯು ಪೂರ್ಣವಾದ ಬಳಿಕ ಅಲ್ಲಿ ಆರು ವಿಮಾನಗಳು ಬಂದವು. ಅದರಲ್ಲಿ ಇವನ ಶ್ರಾದ್ಧದಿಂದ ತೃಪ್ತಿಗೊಂಡ ಪಿತೃಗಳು ದಿವ್ಯವಸ್ತ್ರ, ಆಭರಣಗಳನ್ನು ಧರಿಸಿ ಕುಳಿತಿದ್ದರು.

ಪಿತೃಗಳು ಇವನನ್ನು ಕುರಿತು ಹೇಳಿದರು. ವತ್ಸ! ನೀನು ಮಾಡಿದ ಈ ಪಾವನ ತೀರ್ಥದಲ್ಲಿನ ಶ್ರಾದ್ಧದಿಂದ ನಾವು ಉದ್ಧಾರ ಹೊಂದಿ ಉತ್ತಮವಾದ ಗತಿ ಹೊಂದಿದ್ದೇವೆ. ಆಗ ತಂದೆ, ತಾಯಿಗಳಿಬ್ಬರೂ ಮಗನನ್ನು ಆಶೀರ್ವದಿಸಿದರು ಮತ್ತು ಅಲ್ಲಿಂದ ಹೊರಟು ಹೋದರು.

Rarest Archive

೭

ಶ್ರೀವರಾಹ ಮಹಾಪುರಾಣದಲ್ಲಿ ಉಪಾಖ್ಯಾನಗಳು

ಪೂರ್ವಕಾಲದಲ್ಲಿ ವಿಶಾಲ ಎಂಬ ಅರಸನು ವಿಶಾಲಾ ಎಂಬ ನಗರದಲ್ಲಿ ವಾಸ ಮಾಡಿದ್ದನು. ಅವನು ಧೀರನೂ ಧನ್ಯನೂ ಆಗಿದ್ದನು. ಆದರೆ ಅವನಿಗೆ ಒಳ್ಳೆಯ ಯೋಗ್ಯ ಸಂತಾನ ಇರಲಿಲ್ಲ. ಅದಕ್ಕಾಗಿ ಅವನು ಜ್ಞಾನಿಗಳಾದ ಬ್ರಾಹ್ಮಣರನ್ನು ಕೇಳಲು ಅವರು ಯೋಚಿಸಿ ರಾಜನಿಗೆ ಹೀಗೆ ಆದೇಶವಿತ್ತರು.

"ರಾಜನೇ! ನಿನಗೆ ಒಳ್ಳೆಯ ಸಂತಾನವಾಗಬೇಕಿದ್ದರೆ ನೀನು ಗಯಾಕ್ಷೇತ್ರಕ್ಕೆ ಹೋಗಿ ಪಿತೃಗಳನ್ನು ಕುರಿತು ಶ್ರಾದ್ಧ ಮಾಡಿ ಅವರನ್ನು ತೃಪ್ತಿಪಡಿಸು. ಇದರಿಂದ ನಿನಗೆ ಓರ್ವ ಗಂಡುಮಗನು ಹುಟ್ಟುತ್ತಾನೆ. ಅವನು ಇಡೀ ಭೂಮಂಡಲಕ್ಕೆ ಅಧಿರಾಜನಾಗುತ್ತಾನೆ, ಅವನು ಕೊಡುಗೈ ದೊರೆಯೆಂದು ಪ್ರಸಿದ್ಧನಾಗಿ ಭಾರೀ ದಾನಮಾಡುತ್ತಾನೆ" ಎಂದರು.

ಇದನ್ನು ಕೇಳಿ ವಿಶಾಲಾನಗರಿಯ ಅಧಿಪತಿಯಾದ ವಿಶಾಲರಾಜನು ಸಂತೋಷ ಭರಿತನಾಗಿ ಮಹಾಪ್ರಯತ್ನಪೂರ್ವಕವಾಗಿ ಆ ಬ್ರಾಹ್ಮಣರು ಹೇಳಿದಂತೆ ಎಲ್ಲವನ್ನೂ ಮಾಡಲು ಗಯಾಕ್ಷೇತ್ರಕ್ಕೆ ಬಂದು ಅಲ್ಲಿ ಪಿತೃತೀರ್ಥದಲ್ಲಿ ಮಘಾ ನಕ್ಷತ್ರದಲ್ಲಿ ಭಕ್ತಿಯಿಂದ ಸ್ನಾನಮಾಡಿ ಭಕ್ತಿಯಿಂದ ವಿಧಿಪೂರ್ವಕ ಶ್ರಾದ್ಧ ಮಾಡಿ ಪಿತೃಗಳಿಗೆ ಪಿಂಡಪ್ರದಾನ ಮಾಡಿದನು. ಆಗ ಆ ವಿಶಾಲರಾಜನ ಕಣ್ಣಿಗೆ ಆಕಾಶದಲ್ಲಿ ಮೂರು ವ್ಯಕ್ತಿಗಳು ಕಾಣಿಸಿ ಕೊಂಡರು. ಅದರಲ್ಲಿ ಒಬ್ಬನು ಬೆಳ್ಳಗಿದ್ದು, ಇನ್ನೊಬ್ಬನು ಹಳದೀ, ಮತ್ತೊಬ್ಬನು ಕಪ್ಪು ಬಣ್ಣದವನಾಗಿದ್ದನು. ಇವರನ್ನು ನೋಡಿ ಕುತೂಹಲ ಭರಿತನಾದ ರಾಜನು ನೀವು ಯಾರು? ಎಂದು ಕೇಳಿದನು.

ಆಗ ಬೆಳ್ಳಗಿನವನು ಮಗನೇ! ನಾನು ನಿನ್ನ ತಂದೆಯಾಗಿದ್ದೇನೆ. ನೀನು ಎಲ್ಲ ರೀತಿ ಯಿಂದಲೂ ನನ್ನಂತೆ ಇರುವೆ. ನನ್ನ ಪಕ್ಕದಲ್ಲಿರುವ ಹಳದೀ ಬಣ್ಣದ ಹಿರಿಮನುಷ್ಯನು ನನ್ನ ತಂದೆಯಾಗಿದ್ದಾನೆ. ಅವನ ಹೆಸರು ಅಧೀಶ್ವರ. ಇವನು ಬದುಕಿರುವಾಗ ಅನೇಕ ಪಾಪಕಾರ್ಯಗಳನ್ನು ಮಾಡಿದ್ದಾನೆ. ಇನ್ನು ಮೂರನೆಯ ವ್ಯಕ್ತಿ ಅವನ ತಂದೆ ಅಂದರೆ ನನಗೆ ಅಜ್ಜನಾಗಿದ್ದಾನೆ. ಅವನ ಹೆಸರು ಕೃಷ್ಣ. ಅವನು ಪೂರ್ವಜನ್ಮಗಳಲ್ಲಿ ಅನೇಕ

Rarest Archiver

ಮಾಡಬಾರದ ಅಕೃತ್ಯಗಳನ್ನೆಲ್ಲ ಮಾಡಿದ್ದಾನೆ. ಈ ನನ್ನ ತಂದೆ ಮತ್ತು ಅಜ್ಜ ಇಬ್ಬರೂ ಮರಣದ ನಂತರ ಅವೀಚಿ ಎಂಬ ಘೋರ ನರಕದಲ್ಲಿ ಬಹುಕಾಲದವರೆಗೆ ಯಾತನೆಯನ್ನು ಅನುಭವಿಸಿ ಬೆಂದು ಬಂದಿದ್ದಾರೆ.

ನಾನು ಮಾತ್ರ ಪರಿಶುದ್ಧವಾದ ಸದಾಚಾರ ಮತ್ತು ಶಾಸ್ತ್ರೋಕ್ತವಾದ ಸತ್ಕರ್ಮಾನುಷ್ಠಾನ ದಿಂದ ಸ್ವರ್ಗವನ್ನು ಹೊಂದಿದೆನು. ಸತ್ಪುತ್ರನೇ! ಮಂತ್ರ ವಿದ್ಯಾವಿಶಾರದನಾದ ನೀನು ಗಯಾಕ್ಷೇತ್ರಕ್ಕೆ ಬಂದು ಶ್ರಾದ್ಧಮಾಡಿ ಪಿಂಡಪ್ರದಾನ ಮಾಡಿ ನರಕದಲ್ಲಿ ಕಷ್ಟಪಡುತ್ತಿರುವ ನನ್ನ ತಂದೆ, ತಾತರನ್ನು ಉದ್ಧಾರ ಮಾಡಿದೆ. ನಿನ್ನ ಈ ಗಯಾಶ್ರಾದ್ಧ, ಪಿಂಡಪ್ರದಾನದಿಂದ ನಾವು ಮೂವರೂ ಒಂದುಗೂಡಿದಂತಾಯಿತು. ತಂದೆ, ತಾತ ಮುತ್ತಾತರನ್ನು ತೃಪ್ತಿ ಪಡಿಸುತ್ತೇನೆಂದು ಉಚ್ಚರಿಸಿ ನೀನು ಕೊಟ್ಟ ತರ್ಪಣದಿಂದ ನಾನಂತೂ ಪಿತೃಲೋಕಕ್ಕೆ ಹೋಗುತ್ತೇನೆ ಮತ್ತು ಪಿಂಡಪ್ರದಾನದ ಮಹಿಮೆಯಿಂದ ಇವರಿಬ್ಬರೂ ತಾತ, ಮುತ್ತಾತರೂ ಕೂಡ ಉದ್ಧೃತರಾಗಿದ್ದಾರೆ ಎಂದು ಹೇಳಿ ಅಲ್ಲಿಂದ ಹೊರಟುಹೋದರು.

೨

ಅವಂತೀ ದೇಶದಲ್ಲಿ ಅತೀಧಾರ್ಮಿಕನಾದ ಮೇಧಾತಿಥಿ ಎಂಬ ದೊರೆಯಿದ್ದನು. ಅವನಿಗೆ ಆತ್ರೇಯ ಗೋತ್ರೋತ್ಪನ್ನನಾದ, ವೇದಾಸಕ್ತನಾದ ಚಂದ್ರಕರ್ಮನೆಂಬ ಬ್ರಾಹ್ಮಣನು ಪುರೋಹಿತನಾಗಿದ್ದನು. ದೊರೆಯು ನಿತ್ಯದಲ್ಲಿ ಬ್ರಾಹ್ಮಣರಿಗೆ ವಿಧಿಪೂರ್ವಕವಾಗಿ ನೂರು ಹಸುಗಳನ್ನು ದಾನ ಮಾಡಿದ ಬಳಿಕವೇ ಊಟ ಮಾಡುತ್ತಿದ್ದನು- ಹೀಗೆ ಬಹುಕಾಲ ಕಳೆಯಿತು. ಒಮ್ಮೆ ವೈಶಾಖಮಾಸದಲ್ಲಿ ಆ ಮೇಧಾತಿಥಿಯು ತಂದೆಯ ಶ್ರಾದ್ಧಕ್ಕಾಗಿ ಬ್ರಾಹ್ಮಣರನ್ನು ಕರೆಸಿದನು. ನಿರ್ಮಲಮನಸ್ಕನಾದ ಆ ಮೇಧಾತಿಥಿಯು ಬಂದ ಬ್ರಾಹ್ಮಣರನ್ನು ನಮಸ್ಕರಿಸಿ ಶ್ರಾದ್ಧಕರ್ಮವನ್ನು ಪ್ರಾರಂಭಿಸಿದನು. ಶ್ರಾದ್ಧವನ್ನು ವಿಧಿಪೂರ್ವಕ ವಾಗಿ ಮಾಡಿ ಬ್ರಾಹ್ಮಣರಿಗೆ ಭೋಜನ ಮಾಡಿಸಿ ದಾನಾದಿಗಳನ್ನು ಮಾಡಿದನು. ಆ ಬ್ರಾಹ್ಮಣರ ನಡುವೆ ಒಬ್ಬ ಗೋಲಕನು(ವಿಧವೆಯಲ್ಲಿ ಜಾರಪುರುಷನಿಂದ ಹುಟ್ಟಿದ ಮಗನು) ಸೇರಿದ್ದನು. ಹಾಗೆ ಗೋಲಕನನ್ನಿಟ್ಟುಕೊಂಡು ಶ್ರಾದ್ಧ ಮಾಡಿದ ದೋಷದಿಂದ ಆ ದೊರೆಯ ಪಿತೃಗಳು ಸ್ವರ್ಗದಿಂದ ಭ್ರಷ್ಟರಾಗಿ ಮುಳ್ಳಿನಿಂದ ಕೂಡಿದ ದಟ್ಟವಾದ ಕಾಡಿನಲ್ಲಿ ನೇತಾಡುವ ವರಾದರು. ಅವರು ಪ್ರತಿದಿನವೂ ಹಸಿವು ಬಾಯಾರಿಕೆಗಳಿಂದ ಪೀಡಿತರಾಗಿ ದುಃಖಿಸುತ್ತಿದ್ದರು. ಒಂದಾನೊಂದು ದಿನ ಆ ಮೇಧಾತಿಥಿಯು ದೈವಯೋಗ ದಿಂದ ಇಬ್ಬರು ಪರಿಜನರಿಂದ ಕೂಡಿ ಬೇಟೆಗೆಂದು ವನಕ್ಕೆ ಹೋದನು. ಅಲ್ಲಿ ನೇತಾಡುತ್ತಿರುವ ಪಿತೃಗಳನ್ನು ನೋಡಿ, ಬ್ರಾಹ್ಮಣ ಪ್ರಿಯನಾದ ಆತನು(ದೊರೆಯು) ಈ ದುರ್ದೆಶೆ ಯನ್ನು ಪಡೆದಿರುವ ನೀವಾರು? ಎಂದು ಕೇಳಿದನು. ಆಗ ಪಿತೃಗಳು ನಮ್ಮ ವಂಶವರ್ಧಕನಾದ ಮೇಧಾತಿಥಿ ಎಂಬ ದೊರೆ ಇರುವನು. ನರಕಕ್ಕೆ ಹೋಗಲು ಸಿದ್ಧರಾಗಿರುವ ನಾವು ಅವನ ಪಿತೃಗಳು" ಎಂದರು.

Rarest Archiver

ಅವರ ಮಾತನ್ನು ಕೇಳಿ ಮೇಧಾತಿಥಿಯು ತನಗೆ ಗುರುವಾದ ಚಂದ್ರಶರ್ಮ ಬ್ರಾಹ್ಮಣನನ್ನು ಕರೆಸಿ ನಾನು ಈ ದಿನ ಪಿತೃಗಳಿಗೆ ಪುನಃ ಶ್ರಾದ್ಧ ಮಾಡುತ್ತೇನೆ. ಕಾರಣ ಕುಂಡ(ಪತಿಯು ಜೀವಿಸಿರುವಾಗ ಪರಪುರುಷನಿಗೆ ಹುಟ್ಟಿದವನು) ಹಾಗೂ ಗೋಲಕರನ್ನು ಬಿಟ್ಟು ಬೇರೆ ಬ್ರಾಹ್ಮಣರನ್ನು ಕರೆಸು ಎಂದನು. ಆ ಪ್ರಕಾರ ಚಂದ್ರಶರ್ಮನು ವೇದ ಪಾರಂಗತರಾದ, ಸಾಧುಗಳಾದ, ಶಾಂತರಾದ ಬ್ರಾಹ್ಮಣರನ್ನು ಕರೆಸಿ ದೊರೆಯಿಂದ ಪುನಃ ಶ್ರಾದ್ಧ ಮಾಡಿಸಿ ಬ್ರಾಹ್ಮಣ ಭೋಜನ ಮಾಡಿಸಿದನು. ಬ್ರಾಹ್ಮಣರಿಗೆ ದಕ್ಷಿಣೆ ಕೊಟ್ಟು ಕಳುಹಿಸಿ ಬಳಿಕ ತಾನೂ ಊಟ ಮಾಡಿದನು.

ದೊರೆಯು ಮತ್ತೆ ವನಕ್ಕೆ ಹೋಗಿ ಸಂತುಷ್ಟರಾದ, ಪುಷ್ಟರಾದ ಪಿತೃಗಳನ್ನು ನೋಡಿ ಸಂತೋಷ ಹೊಂದಿದನು. ಆಗ ಪಿತೃಗಳು ಪಿತೃಭಕ್ತನಾದ ದೊರೆಯನ್ನು ಕುರಿತು ಹೇಳಿದರು– ಪ್ರಭುವೇ! ನಿನಗೆ ಮಂಗಳವಾಗಲಿ. ನಾವು ಇನ್ನು ಸ್ವರ್ಗಕ್ಕೆ ಹೊರಡುತ್ತೇವೆ.

ದೇವಕರ್ಮದಲ್ಲಿ, ಪಿತೃಕರ್ಮ(ಶ್ರಾದ್ಧದಲ್ಲಿ)ದಲ್ಲಿ ಯೋಗ್ಯರಾದ ಬ್ರಾಹ್ಮಣರು ದೊರೆ ಯದೇ ಇದ್ದರೆ ಸಂಕಲ್ಪ ವಿಧಿಯಂತೆ ಶ್ರಾದ್ಧಮಾಡಿ ಅನ್ನವನ್ನು ಗೋವುಗಳಿಗೆ ಕೊಡಬೇಕು.

ಶ್ರಾದ್ಧದಲ್ಲಿ ಪಿತೃಗಳನ್ನು ಮಂತ್ರದಿಂದ ವಿಧಾನ ಪೂರ್ವಕವಾಗಿ ಆಹ್ವಾನಿಸಬೇಕು. ವ್ಯಂಜನದಿಂದೊಡಗೂಡಿದ ಮೂರು ಪಿಂಡಗಳನ್ನು ಪಿತೃ, ಪಿತಾಮಹ, ಪ್ರಪಿತಾಮಹರಿಗೆ ಕೊಡಬೇಕು(ಅರ್ಪಿಸಬೇಕು). ಪ್ರತಿ ತಿಂಗಳೂ ಅಮಾವಾಸ್ಯೆ ದಿನದಂದು ಪಿತೃ, ಪಿತಾಮಹ, ಪ್ರಪಿತಾಮಹರಿಗೆ ಅಪಸವ್ಯದಿಂದ ತಿಲೋದಕವನ್ನು ಅರ್ಪಿಸುವುದು ಅವಶ್ಯವಾಗಿದೆ.

* * *

Rarest Archiver

೮

ಶ್ರೀಗರುಡ ಪುರಾಣದಲ್ಲಿ ...

ಹಿಂದೆ ತ್ರೇತಾಯುಗದಲ್ಲಿ ಬಭ್ರುವಾಹನನೆಂಬ ರಾಜನಿದ್ದನು. ಇವನು ದಾನಿಯೂ, ಸದ್ಗುಣಸಂಪನ್ನನೂ ಆಗಿದ್ದನು. ಪ್ರಜೆಗಳನ್ನು ತನ್ನ ಸ್ವಂತ ಮಕ್ಕಳಂತೆ ನೋಡಿಕೊಳ್ಳುತ್ತಿದ್ದನು.

ಒಂದು ದಿನ ಬಭ್ರುವಾಹನನು ಬೇಟೆಯಾಡುವ ಸಲುವಾಗಿ ದಟ್ಟವಾದ ಕಾಡಿಗೆ ತೆರಳಿದನು. ಬೇಟೆಯಾಡುತ್ತ ಬರುವಾಗ ಒಂದು ಜಿಂಕೆಯನ್ನು ಕಂಡು ಅದರ ಮೇಲೆ ಬಾಣ ಪ್ರಯೋಗ ಮಾಡಿದನು. ಆದರೆ ಜಿಂಕೆ ಬಾಣದೇಟಿಗೆ ಸಾಯದೇ ರಕ್ತಸ್ರಾವ ಹೊಂದಿ ಪಕ್ಕದ ಕಾಡಿನೊಳಗೆ ಓಡಿಹೋಯಿತು. ರಾಜನು ಹೇಗಾದರೂ ಮಾಡಿ ಅದನ್ನು ಪಡೆದುಕೊಳ್ಳಬೇಕೆಂದು ಅದರ ಬೆನ್ನಹಿಂದೆಯೇ ಹೋದನು. ಆದರೆ ಜಿಂಕೆ ತುಸುಹೊತ್ತಿನಲ್ಲಿ ಕಾಣದಾಗಲು ರಾಜನು ನಿರಾಶೆ ಹೊಂದಿದನು. ಅವನಿಗೆ ಅತೀವ ಬಾಯಾರಿಕೆಯಾಗಿತ್ತು. ಕೂಡಲೇ ಕುದುರೆಯಿಂದ ಇಳಿದು ಹತ್ತಿರದಲ್ಲಿದ್ದ ಕೊಳದಲ್ಲಿ ಸ್ನಾನ ಮಾಡಿ ಕುದುರೆಗೂ ಸ್ನಾನ ಮಾಡಿಸಿದನು. ನೀರು ಕುಡಿದನು. ಅಲ್ಲಿಯೇ ಇದ್ದ ಮರದಡಿಯಲ್ಲಿ ವಿಶ್ರಾಂತಿ ಪಡೆಯಲು ಕುಳಿತುಕೊಂಡನು. ಇದ್ದಕ್ಕಿದ್ದ ಹಾಗೆ ಅವನ ಎದುರಿಗೆ ಒಂದು ಪ್ರೇತವು ಕಾಣಿಸಿಕೊಂಡಿತು. ಅದರ ಭಯಾನಕ ರೂಪವನ್ನು ನೋಡಿ ರಾಜನು ದಿಗ್ಭ್ರಮೆಗೊಂಡನು. ಆ ಪ್ರೇತವು ರಾಜನ ಬಳಿಗೆ ಬಂದು "ಮಹಾರಾಜ! ನನ್ನ ಭಾಗ್ಯ! ನಿನ್ನ ಬರುವಿಕೆಯಿಂದ ನನಗೆ ಪ್ರೇತಜನ್ಮದಿಂದ ಮುಕ್ತಿ ಲಭಿಸಿತು. ನಿನಗೆ ಅನಂತ ವಂದನೆಗಳು ಎಂದಿತು.

ರಾಜನು ಆಶ್ಚರ್ಯದಿಂದ ಪ್ರೇತವೇ! ನೀನು ಯಾರು? ನಿನಗೆ ಈ ಸ್ಥಿತಿ ಏಕೆ ಬಂದಿದೆ? ನೀನು ಮಾಡಿದ ಪಾಪವಾದರೂ ಏನು ಕೇಳಿದನು.

ಆಗ ಪ್ರೇತವು ರಾಜನೇ! ನೀನು ದಯಾಗುಣಸಂಪನ್ನನು. ನಿನ್ನ ಪ್ರಶ್ನೆಗೆ ಉತ್ತರ ಹೇಳುವೆ ಕೇಳು– ನಾನೊಬ್ಬ ವೈಶ್ಯ. ನನ್ನ ವೃತ್ತಿ ಮಾತ್ರ ಅರ್ಚಕ ವೃತ್ತಿ. ವೈದಶ್ವ ಎಂಬ ಪಟ್ಟಣದಲ್ಲಿದ್ದೆನು. ನನ್ನ ಹೆಸರು ಸುದೇವ. ಯಜ್ಞದಿಂದ ದೇವತೆಗಳನ್ನು, ತರ್ಪಣಾದಿಗಳಿಂದ ಪಿತೃಗಳನ್ನು ತೃಪ್ತಿಪಡಿಸಿದೆನು. ಬ್ರಾಹ್ಮಣರಿಗೆ ದಾನಧರ್ಮ ಮಾಡಿ ಸತ್ಕರಿಸಿದೆನು.

Rarest Archiver

ಅನ್ನದಾನವನ್ನು ಬಡಬಗ್ಗರಿಗೆ ಮಾಡುತ್ತಿದ್ದೆ. ಇಷ್ಟೆಲ್ಲ ಸತ್ಕಾರ್ಯಗಳನ್ನು ಮಾಡಿದರೂ ಯಾವ ಜನ್ಮದಲ್ಲಿ ಯಾರ ಮಕ್ಕಳನ್ನು ಅಪಹರಿಸಿದ್ದೇನೋ ನನಗೆ ಸಂತಾನವಾಗಲಿಲ್ಲ. ನಾನು ಸತ್ತ ನಂತರ ನನ್ನ ಔರ್ಧ್ವದೇಹಿಕ ಕ್ರಿಯೆಗಳನ್ನು ಯಾರೂ ಮಾಡಲಿಲ್ಲ. ಸಂಸ್ಕಾರವಾಗದ ಫಲದಿಂದ ನಾನು ಪ್ರೇತನಾದೆ. ಹದಿನಾರು ತಿಂಗಳ ಶ್ರಾದ್ಧವಿಲ್ಲದೇ (ಷೋಡಶ ಮಲಿನ ಶ್ರಾದ್ಧಗಳು) ಎಷ್ಟು ಶ್ರಾದ್ಧಗಳನ್ನು ಮಾಡಿದರೂ ಪ್ರೇತತ್ವ ಹೋಗುವುದಿಲ್ಲ. ರಾಜನೇ! ನಾನಿನ್ನು ಯಾರಲ್ಲಿ ಕೇಳಲಿ? ನೀನೀಗ ಸಿಕ್ಕಿರುವೆ. ನೀನು ನನಗೋಸ್ಕರ ಹದಿನಾರು ಶ್ರಾದ್ಧಗಳನ್ನು ಮಾಡಿ ಉದ್ಧರಿಸು. ನನ್ನ ಹತ್ತಿರವಿರುವ ಈ ರತ್ನವನ್ನು ತೆಗೆದುಕೋ ನನ್ನ ಉತ್ತರಕ್ರಿಯೆಗಳನ್ನು, ಶ್ರಾದ್ಧವನ್ನು ಮಾಡಿ ಸದ್ಗತಿ ಕೊಡಿಸು. ಸತ್ಪಾತ್ರರಿಗೆ ದಾನಧರ್ಮಗಳನ್ನು ಮಾಡು ಎಂಬುದಾಗಿ ಹೇಳಿತು.

ರಾಜನು ರಾಜಧಾನಿಗೆ ಹಿಂತಿರುಗಿ ಕೂಡಲೇ ಆ ಪ್ರೇತದ ಔರ್ಧ್ವದೇಹಿಕ ಕ್ರಿಯೆಗಳನ್ನು, ದಾನಧರ್ಮಗಳನ್ನು ಮಾಡಿ ಆ ಪುಣ್ಯಫಲವನ್ನು ಪ್ರೇತಘಟದೊಂದಿಗೆ ದಾನ ಮಾಡಲು ಅರ್ಚಕನ ಪ್ರೇತತ್ವವು ದೂರವಾಗಿ ಅವನು ಸ್ವರ್ಗಕ್ಕೆ ತೆರಳಿದನು.

ಭಗವಂತನು ಗರುಡನನ್ನು ಕುರಿತು ಹೇಳುತ್ತಾನೆ. ಗರುಡನೇ! ಶ್ರಾದ್ಧದ ಫಲವನ್ನು ತಿಳಿದೆಯಲ್ಲವೇ? ಬಭ್ರುವಾಹನ ರಾಜನು ಮಾಡಿದ ಶ್ರಾದ್ಧದಿಂದ ಪ್ರೇತವು ಉದ್ಧಾರ ವಾಯಿತೆಂದಮೇಲೆ ಸ್ವಂತ ಮಗನು ಶ್ರದ್ಧೆಯಿಂದ ಮಾಡಿದ ಶ್ರಾದ್ಧದಿಂದ ಅವನ ಪಿತೃಗಳು(ಉದ್ಧಾರ) ಸದ್ಗತಿ ಹೊಂದುವುದರಲ್ಲಿ ಸಂದೇಹವಿಲ್ಲ.

* * *

Rarest Archiver

೯

ಶ್ರೀಮಾರ್ಕಂಡೇಯ ಪುರಾಣದಲ್ಲಿ ...

ಪೂರ್ವಿಕರಾದ ಪಿತೃಗಳಿಗೆ ಶ್ರಾದ್ಧಕರ್ಮದಲ್ಲಿ ಪಿಂಡದಾನಕ್ಕೆ ಲೋಪವು ಸಂಭವಿಸುವುದಿಲ್ಲ. ತಾನು ಮಾಡಿದ ಕರ್ಮಾನುಸಾರ ದೇವಲೋಕದಲ್ಲಿ ಸುಖವನ್ನು ಭುಂಜಿಸುತ್ತಿರುವವರೂ, ಮೂಕ ಪ್ರಾಣಿಜನ್ಮ ಹೊಂದಿದವರೂ, ಮನುಷ್ಯಜನ್ಮ ಹೊಂದಿದವರೂ ಮತ್ತು ಇತರ ಭೂತವರ್ಗದಲ್ಲಿ ಜನ್ಮಾಂತರ ಹೊಂದಿದವರೂ ಆದ ಪಿತೃಗಳು ಪಿಂಡ ಉದಕಗಳ ದಾನವನ್ನು ಬಯಸುತ್ತಿರುವರು.

ಪುಣ್ಯವಂತರಾದ ಅಥವಾ ಪುಣ್ಯವಂತರಲ್ಲದ, ಹಸಿವಿನಿಂದ ಬಡವಾಗಿರುವ ಮತ್ತು ನೀರಡಿಕೆಯಿಂದ ಬಾಧಿಸಲ್ಪಟ್ಟ ಪಿತೃಗಳನ್ನು ಕರ್ಮಮಾರ್ಗದಲ್ಲಿ ತತ್ಪರನಾದ ಮಾನವನು ಪಿಂಡ ಉದಕಗಳನ್ನು ಕೊಟ್ಟು ತೃಪ್ತಿಪಡಿಸಬೇಕು.

ಕರ್ಮಾನುಷ್ಠಾನ ಪರನಾದ ಮಾನವನು ಶ್ರದ್ಧೆಯಿಂದ ಪಿತೃಕರ್ಮವನ್ನು(ಶ್ರಾದ್ಧವನ್ನು) ನಡೆಸುತ್ತ ಪಿತೃಗಳನ್ನು ಹಾಗೂ ಪೂಜಾ ಸತ್ಕಾರಗಳಿಂದ ದೇವತೆ ಅತಿಥಿಗಳನ್ನು ಸಂತೋಷಪಡಿಸಬೇಕು.

ಗೃಹಸ್ಥಾಶ್ರಮಿಗೆ ನಿತ್ಯ, ನೈಮಿತ್ತಿಕ ಮತ್ತು ನಿತ್ಯನೈಮಿತ್ತಿಕ ಎಂಬ ಮೂರು ವಿಧವಾದ ಕರ್ಮಗಳು ವಿಹಿತವಾಗಿವೆ. ದೇವ, ಋಷಿ, ಪಿತೃ, ಭೂತ, ಮನುಷ್ಯರನ್ನು ತೃಪ್ತಿಪಡಿಸುವ ಪಂಚಯಜ್ಞಗಳು ನಿತ್ಯಕರ್ಮಗಳಲ್ಲಿ ಸೇರಿವೆ. ಪುತ್ರಜನ್ಮ ಮುಂತಾದ ಪ್ರಸಂಗದಲ್ಲಿ ಮಾಡುವ ಜಾತಕರ್ಮ ಮುಂತಾದ ಸಂಸ್ಕಾರಕರ್ಮಗಳು ನೈಮಿತ್ತಿಕ ಕರ್ಮಗಳೆಂದು ಅರಿಯಬೇಕು. ಪರ್ವಶ್ರಾದ್ಧ ಮುಂತಾದ ಶ್ರಾದ್ಧವಿಧಾನ ಕರ್ಮಗಳನ್ನು ಪಂಡಿತರು ನಿತ್ಯನೈಮಿತ್ತಿಕ ಕರ್ಮವೆಂದು ಹೇಳುತ್ತಾರೆ.

ಮಾನವನು ಮೃತ್ಯು ಹೊಂದಿದ ಸಮಯದಲ್ಲಿ ಪುತ್ರ ಮುಂತಾದ ಅಧಿಕಾರಿಗಳು ಔರ್ಧ್ವದೇಹಿಕ ಕರ್ಮಗಳನ್ನು, ಸಪಿಂಡೀಕರಣ ಶ್ರಾದ್ಧಾದಿಗಳನ್ನು ಮಾಡಬೇಕು.

ಶ್ರಾದ್ಧ ಕರ್ಮಾಚರಣೆಗೆ ಪುತ್ರನು ಮುಖ್ಯಾಧಿಕಾರಿಯಾಗಿರುವನು. ಪುತ್ರನು ಇಲ್ಲದಿದ್ದರೆ ಸಪಿಂಡರು, ಸಪಿಂಡರು ಇಲ್ಲದಿದ್ದರೆ ಸಮಾನೋದಕರಲ್ಲಿ ಯಾರಾದರೂ ಶ್ರಾದ್ಧವನ್ನು

Rarest Archiver

ಆಚರಿಸಬೇಕು. ಕೊನೆಗೆ ಮಾತೃಸಪಿಂಡರು ಅಥವಾ ಮಾತೃವಿನ ಸಹೋದರರು ಶ್ರಾದ್ಧಾಧಿಕಾರವನ್ನು ಹೊಂದಿರುವರು. ಮಗಳ ಪುತ್ರರು ಮಾತಾಮಹನಿಗೆ ಶ್ರಾದ್ಧ ವಿಧಾನವನ್ನು(ಆಶ್ವಿನಶುದ್ಧ ಪ್ರತಿಪದೆಯಂದು) ನೆರವೇರಿಸಬೇಕು.

ದರ್ಶಕಾಲದಲ್ಲಿ ಮಾಡುವ ಶ್ರಾದ್ಧಕರ್ಮವನ್ನು ನಿತ್ಯನೈಮಿತ್ತಿಕವೆನ್ನಬಹುದು.

ಶ್ರಾದ್ಧಕರ್ಮತತ್ಪರನಾದ ಯಜಮಾನನು ಯಥಾವಿಧಿಯಾದ ಶ್ರಾದ್ಧಾಚರಣೆಯಲ್ಲಿ ಸ್ವರ್ಗ ನರಕವಾಸಿಗಳನ್ನು ತೃಪ್ತಿಪಡಿಸುವ ರೀತಿಯನ್ನು ಇಲ್ಲಿ ಹೇಳಲಾಗುತ್ತದೆ. ಪೂರ್ವಜರಲ್ಲಿ ಯಾರು ಪಿಶಾಚಜನ್ಮವನ್ನು ಹೊಂದಿರುವರೋ ಅವರು ಧಾರ್ಮಿಕರಿಂದ ನೆಲದಲ್ಲಿ ಮಾಡಲ್ಪಡುವ ಅನ್ನವಿಕಿರದಲ್ಲಿ ಅರ್ಪಿಸುವ ಅನ್ನದಿಂದ ತೃಪ್ತಿಹೊಂದುವರು. ಸ್ನಾನ ಮಾಡಿದ ಮೇಲೆ ವಸ್ತ್ರವನ್ನು ಹಿಂಡುವಾಗ ಅವರಿಂದ ನೆಲದಲ್ಲಿ ಬೀಳುವ ನೀರಿನಿಂದ ವೃಕ್ಷರೂಪವಾಗಿ ಜನಿಸಿದ ಪೂರ್ವಜರು ತೃಪ್ತಿಹೊಂದುವರು. ಹಾಗೆಯೇ ದೇಹಕ್ಕೆ ಅಂಟಿಕೊಂಡಿದ್ದ ನೀರಿನ ಬಿಂದುಗಳು ನೆಲದಲ್ಲಿ ಬೀಳುವವು. ಗೃಹಸ್ಥನ ಕುಲದಲ್ಲಿ ಜನಿಸಿ ದೇವತ್ವವನ್ನು ಹೊಂದಿದ ಪೂರ್ವಜರು ಆ ಜಲ ಬಿಂದುಗಳಿಂದ ಪ್ರೀತಿ ಹೊಂದುವರು. ಪಿಂಡಗಳನ್ನು ಪಿಂಡ ಸ್ಥಾನದಿಂದ ಉದ್ಧಾರ ಮಾಡಿದ ಮೇಲೆ ನೆಲದಲ್ಲಿ ಬಿದ್ದಿರುವ ಅನ್ನದ ಕಣಗಳಿಂದ ಆ ಗೃಹಸ್ಥನ ವಂಶಕ್ಕೆ ಸೇರಿದ ಮೂಕ ಪ್ರಾಣಿಜನ್ಮವನ್ನು ಹೊಂದಿದ ಪೂರ್ವಜರಿಗೆ ತೃಪ್ತಿಯುಂಟಾಗುವುದು.

ಒಂದು ವಂಶದಲ್ಲಿ ಜನಿಸಿದ್ದು ಮರಣಹೊಂದಿದ ಬಳಿಕ ಕರ್ಮಾಧೀನನಾಗಿ ಬರುವ, ಹಲವಾರು ಜನ್ಮಗಳನ್ನು ಹೊಂದಿರುವ ಪೂರ್ವಜರು ಶ್ರಾದ್ಧಕರ್ಮಾನುಷ್ಠಾನ ಪರನಾಗಿರುವ ಆ ವಂಶದ ಗೃಹಸ್ಥನಿಂದ ದೊರಕಿದ ಶ್ರಾದ್ಧಾಂಗವಾದ ಜಲ ಅನ್ನ ವಿಕ್ಷೇಪಗಳಿಂದ ತೃಪ್ತರಾಗುವರು.

ಯಥಾವಿಧಿಯಾಗಿ ಶ್ರಾದ್ಧವನ್ನು ಮಾಡುತ್ತಿರುವ ಬಾಂಧವರಿಂದ ಅರ್ಪಿಸಲ್ಪಟ್ಟ ಅನ್ನ, ಜಲ, ಶಾಕದ್ರವ್ಯಗಳಿಂದ ವಿವಿಧ ಜನ್ಮಗಳನ್ನು ಹೊಂದಿರುವ ಅನೇಕ ಪೂರ್ವಜರಿಗೆ ತೃಪ್ತಿಯುಂಟಾಗುವುದು ನಿಶ್ಚಿತ.

* * *

Rarest Archiver

೧೦

ಶ್ರೀಭವಿಷ್ಯ ಮಹಾಪುರಾಣದಲ್ಲಿ ...
–ಶ್ರಾದ್ಧದ ಪ್ರಕಾರಗಳು

ಶ್ರಾದ್ಧವು ನಿತ್ಯಶ್ರಾದ್ಧ, ನೈಮಿತ್ತಿಕಶ್ರಾದ್ಧ, ಕಾಮ್ಯಶ್ರಾದ್ಧ, ವೃದ್ಧಿಶ್ರಾದ್ಧ, ಸಪಿಂಡೀಕರಣ ಶ್ರಾದ್ಧ, ಪಾರ್ವಣಶ್ರಾದ್ಧ, ಗೋಷ್ಠಶ್ರಾದ್ಧ, ಶುದ್ಧಿಶ್ರಾದ್ಧ, ಕರ್ಮಾಂಗಶ್ರಾದ್ಧ, ದೈವಿಕ ಶ್ರಾದ್ಧ, ಔಪಚಾರಿಕಶ್ರಾದ್ಧ, ಸಾಂವತ್ಸರಿಕ ಶ್ರಾದ್ಧವೆಂದು ಹನ್ನೆರಡು ವಿಧವಾಗಿದೆ.

ಎಳ್ಳು, ಅಕ್ಕಿ, ನೀರು, ಹಾಲು, ಹಣ್ಣು, ಗಡ್ಡೆ, ತರಕಾರಿ ಮೊದಲಾದವುಗಳಿಂದ ಪಿತೃಗಳ ಸಂತೋಷಕ್ಕಾಗಿ ಪ್ರತಿದಿನ ಶ್ರಾದ್ಧ ಮಾಡಬೇಕು. ಇದೇ ನಿತ್ಯಶ್ರಾದ್ಧವು.

ಏಕೋದ್ದಿಷ್ಟ ಶ್ರಾದ್ಧವನ್ನು ನೈಮಿತ್ತಿಕ ಶ್ರಾದ್ಧವೆಂದು ಹೇಳುತ್ತಾರೆ. ಈ ಶ್ರಾದ್ಧವನ್ನು ವಿಧಿಪೂರ್ವಕ ಆಚರಿಸಿ ವಿಷಮ ಸಂಖ್ಯೆಯ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು.

ಫಲವಿಶೇಷದ ಅಭಿಲಾಷೆಯಿಂದ ಮಾಡುವ ಶ್ರಾದ್ಧವು ಕಾಮ್ಯಶ್ರಾದ್ಧವು. ಈ ಶ್ರಾದ್ಧವನ್ನು ಪೂರ್ವಾಹ್ನ ಕಾಲದಲ್ಲಿಯೇ ಉಪವೀತಿಯಾಗಿ ಮಾಡಬೇಕು.

ಸಪಿಂಡೀಕರಣ ಶ್ರಾದ್ಧದಲ್ಲಿ ನಾಲ್ಕು ಪಾತ್ರೆಗಳಿರಬೇಕು. ವೃದ್ಧ ಪ್ರಪಿತಾಮಹನ ಪಿಂಡವನ್ನು ಪ್ರಪಿತಾಮಹನ ಪಿಂಡದಲ್ಲಿ ಸೇರಿಸಬೇಕು.

ಅಮಾವಾಸ್ಯೆ ಹಾಗೂ ಪರ್ವದಿನಗಳಲ್ಲಿ ಮಾಡುವ ಶ್ರಾದ್ಧವನ್ನು ಪಾರ್ವಣ ಶ್ರಾದ್ಧವೆಂದು ಹೇಳುತ್ತಾರೆ.

ಗೋವುಗಳಿಗೋಸ್ಕರವಾಗಿ ಮಾಡುವ ಶ್ರಾದ್ಧವನ್ನು ಗೋಷ್ಠಶ್ರಾದ್ಧವೆಂದು ಕರೆಯುತ್ತಾರೆ.

ಪಿತೃಗಳ ತೃಪ್ತಿಗೋಸ್ಕರ ಮಾಡುವ ಶ್ರಾದ್ಧವನ್ನು ಶುದ್ಧಿಶ್ರಾದ್ಧವೆಂದು ಕರೆಯುತ್ತಾರೆ.

ಗರ್ಭಾದಾನಾದಿ ಸಂಸ್ಕಾರ ಸಮಯದಲ್ಲಿ ಮಾಡುವ ಶ್ರಾದ್ಧವನ್ನು ಕರ್ಮಾಂಗ ಶ್ರಾದ್ಧವೆಂದು ಹೇಳುತ್ತಾರೆ.

ಯಾತ್ರೆಯ ದಿನದಲ್ಲಿ ದೇವತೆಗಳನ್ನುದ್ದೇಶಿಸಿ ಮಾಡುವ ಶ್ರಾದ್ಧವನ್ನು ದೈವಿಕ ಶ್ರಾದ್ಧ ವೆನ್ನುತ್ತಾರೆ.

Rarest Archiver

ಶರೀರವೃದ್ಧಿ, ಪುಷ್ಟಿ, ಅಶ್ವವೃದ್ಧಿಗೋಸ್ಕರ ಮಾಡುವ ಶ್ರಾದ್ಧವನ್ನು ಔಪಚಾರಿಕ ಶ್ರಾದ್ಧವೆನ್ನುತ್ತಾರೆ.

ಮೃತವ್ಯಕ್ತಿಯ ಮರಣದಿನದಲ್ಲಿ ಮಾಡುವ ಶ್ರಾದ್ಧಕ್ಕೆ ಸಾಂವತ್ಸರಿಕಶ್ರಾದ್ಧವೆಂದು ಹೇಳುತ್ತಾರೆ. ಇದು ಶ್ರೇಷ್ಠವಾದ ಶ್ರಾದ್ಧವು.

ಯಾವ ವ್ಯಕ್ತಿಯು ತಾಯಿ ತಂದೆಗಳ ಸಾಂವತ್ಸರಿಕ ಶ್ರಾದ್ಧವನ್ನು(ವಾರ್ಷಿಕ) ಮಾಡುವುದಿಲ್ಲವೋ ಅವನು ಘೋರವಾದ ತಾಮಿಸ್ರ ನರಕದಲ್ಲಿ ಬೀಳುತ್ತಾನೆ. ಕೊನೆಗೆ ಸೂಕರ (ಹಂದಿಯ) ಜನ್ಮವನ್ನು ಹೊಂದುತ್ತಾನೆ.

ಮಾತಾಪಿತೃಗಳ ಶ್ರಾದ್ಧತಿಥಿ ಮೊದಲಾವು ಗೊತ್ತಿಲ್ಲವಾದರೆ ಆ ವ್ಯಕ್ತಿಯ ಶ್ರಾದ್ಧವನ್ನು ಅಮಾವಾಸ್ಯೆಯ ದಿನ ಮಾಡಬೇಕು.

ರಾತ್ರಿಯಲ್ಲಿ ಶ್ರಾದ್ಧವನ್ನು ಮಾಡಬಾರದು. ಮಾಡಿದ್ದಾದರೆ ಇಂಥ ಶ್ರಾದ್ಧಕ್ಕೆ "ರಾಕ್ಷಸೀ" ಶ್ರಾದ್ಧವೆನ್ನುತ್ತಾರೆ.

ಶ್ರಾದ್ಧದಲ್ಲಿ ದೌಹಿತ್ರ(ಮಗಳಮಗ), ಕುತಪಕಾಲ(ಮಧ್ಯಾಹ್ನ ಸಮಯ), ಎಳ್ಳು ಈ ಮೂರು ಶ್ರಾದ್ಧದಲ್ಲಿ ಪವಿತ್ರವೆಂದು ತಿಳಿಯಲ್ಪಟ್ಟಿವೆ.

"ತ್ರೀಣಿ ಶ್ರಾದ್ಧೇ ಪ್ರಶಂಸಂತಿ ಶೌಚಮಕ್ರೋಧಮತ್ವರಾ" ಉಕ್ತಿಯಂತೆ ಶುದ್ಧಿ, ಸಿಟ್ಟು ಮಾಡದಿರುವುದು, ಗಡಿಬಿಡಿ ಮಾಡದಿರುವುದು ಈ ಮೂರನ್ನು ಶ್ರಾದ್ಧದಲ್ಲಿ ಪ್ರಶಂಸೆ ಮಾಡುತ್ತಾರೆ.

* * *

Rarest Archiver

೧೧

ಶ್ರೀವಿಷ್ಣು ಮಹಾಪುರಾಣದಲ್ಲಿ ...

ಶ್ರಾದ್ಧ ಮಾಡಲು ಅಧಿಕಾರಿ ವ್ಯಕ್ತಿಗಳೆಂದರೆ ಮಗ, ಮೊಮ್ಮಗ, ಮರಿಮಗ, ಸೋದರ, ಸಹೋದರರನ ಮಗ ಅಥವಾ ಸಪಿಂಡರ ಮಕ್ಕಳು, ಮೊಮ್ಮಕ್ಕಳು ಯಾರಾದರೂ ಆಗಬಹುದು. ಅವರಾರೂ ಇಲ್ಲದಿದ್ದರೆ ಆ ಗೋತ್ರದಲ್ಲಿ ಹುಟ್ಟಿದವ ರಾಗಲೀ ಅಥವಾ ಮಾತೃಪಕ್ಷದ ಸಪಿಂಡರಿಗಾಗಲೀ ಶ್ರಾದ್ಧದ ಅಧಿಕಾರ ಇರುತ್ತದೆ. ಕೊನೆಗೆ ಸತ್ತವನ ಮಿತ್ರರು, ಅವರೂ ಇಲ್ಲದಿದ್ದರೆ ರಾಜನಾದರೂ ಬಂಧುಹೀನನಾದ ಅವನ ಶ್ರಾದ್ಧ ಮಾಡಿಸಬೇಕು.

ಶ್ರದ್ಧೆಯಿಂದ ಪಿತೃಗಳನ್ನು ಉದ್ದೇಶಿಸಿ ಶ್ರಾದ್ಧಕರ್ಮವನ್ನು ಮಾಡುವುದರಿಂದ ಬ್ರಹ್ಮಾದಿ ದೇವತೆಗಳೂ, ಪಿತೃಗಳೂ, ಋಷಿಗಳೂ ಮತ್ತು ಎಲ್ಲ ಪ್ರಾಣಿಗಳೂ ಸಂತುಷ್ಟರಾಗುತ್ತಾರೆ. ಮರಣ ತಿಥಿಯಲ್ಲದೇ ಪ್ರತಿ ಅಮಾವಾಸ್ಯೆಯ ದಿನ ಮತ್ತು ಹೇಮಂತ ಶಿಶಿರಋತುಗಳ ಶುಕ್ಲಪಕ್ಷದ ಅಷ್ಟಮಿಯದಿನ ಶ್ರಾದ್ಧವನ್ನು ಮಾಡತಕ್ಕದ್ದು. ಇದು ನಿತ್ಯ ಶ್ರಾದ್ಧಕಾಲ. ಇದಲ್ಲದೇ ಬೇರೆದಿನಗಳಲ್ಲಿಯೂ ಮಾಡಬಹುದು.

ಶ್ರಾದ್ಧಕ್ಕೆ ಯೋಗ್ಯವಾದ ಪದಾರ್ಥಗಳು ದೊರೆತಾಗ ಅಥವಾ ಯೋಗ್ಯರಾದ ವಿಶಿಷ್ಟ ಶಿಷ್ಟರಾದ ಬ್ರಾಹ್ಮಣರು ಮನೆಗೆ ಬಂದಾಗ, ಸಂಕ್ರಮಣ, ಗ್ರಹಣ, ವ್ಯತೀಪಾತ ಮುಂತಾದ ಸಂದರ್ಭಗಳಲ್ಲಿ ಹೊಸಧಾನ್ಯ ಮನೆಗೆ ಬಂದಾಗಲೂ ಕಾಮ್ಯ ಶ್ರಾದ್ಧ ವನ್ನು ಮಾಡಬೇಕು. ಗಂಗಾ, ಯಮುನಾ, ಗೋಮತೀ ಮುಂತಾದ ಪುಣ್ಯತೀರ್ಥಗಳಲ್ಲಿ ಸ್ನಾನ ಮಾಡಿ ಶ್ರಾದ್ಧ ಮಾಡುವುದರಿಂದ ಪಿತೃಗಳು ಪ್ರೀತರಾಗುತ್ತಾರೆ. ವೈಶಾಖ ಶುಕ್ಲ ತೃತೀಯಾ, ಕಾರ್ತಿಕ ಶುದ್ಧ ನವಮೀ, ಭಾದ್ರಪದ ಶುದ್ಧ ತ್ರಯೋದಶಿ, ಮಾಘಮಾಸದ ಅಮಾವಾಸ್ಯೆ ಈ ನಾಲ್ಕು ತಿಥಿಗಳು ಯುಗಾದಿತಿಥಿಗಳು ಎಂದು ಪುರಾಣದಲ್ಲಿ ಹೇಳಿರುತ್ತಾರೆ. ಇವು ನಾಲ್ಕು ಶ್ರಾದ್ಧಕ್ಕೆ ವಿಹಿತವಾದ ಅತ್ಯಂತ ಪ್ರಶಸ್ತವಾದ ತಿಥಿಗಳಾಗಿವೆ.

ಪಿತೃಗಳು ತಮ್ಮ ವಂಶದಲ್ಲಿ ಶ್ರದ್ಧೆಯಿಂದ ಶ್ರಾದ್ಧ ಮಾಡುವ ಪುಣ್ಯಾತ್ಮನು ಹುಟ್ಟಬಹುದೇ ಎಂದು ಕಾಯುತ್ತ ಕುಳಿತಿರುತ್ತಾರೆ. ನಮ್ಮ ಕುಲದಲ್ಲಿ ಸಂಪತ್ತು ಬಂದಾಗ ವಿತ್ತಶಾಠ್ಯಮಾಡದೇ ಪಿತೃಗಳಿಗೆ ಪಿಂಡದಾನ ಮಾಡುವ ಮಗನು ಹುಟ್ಟುವನೇ ಎಂದು ಕಾಯುತ್ತ ಇರುತ್ತಾರೆ.

Rarest Archiver

ಶ್ರಾದ್ಧಕ್ಕೆ ಬ್ರಹ್ಮವಿದ್ಯೆ ಮತ್ತು ಉಪನಿಷತ್ತುಗಳಲ್ಲಿ ಹೇಳಿದ ಮಧುವಿದ್ಯೆ ಹಾಗೂ ಅಧ್ಯಾತ್ಮ ವಿದ್ಯೆಗಳನ್ನು ಬಲ್ಲ ವಿದ್ವಾಂಸರನ್ನು ಅಥವಾ ವೇದಪಾರಂಗತರಾದ ಶ್ರೋತ್ರಿಯ ಬ್ರಾಹ್ಮಣರನ್ನು, ಪುರೋಹಿತರನ್ನು, ಭಗವದ್‌ಭಕ್ತರನ್ನು ಆಮಂತ್ರಿಸಬೇಕು. ಇವರಿಗೆ ಶ್ರಾದ್ಧ ಭೋಜನದಲ್ಲಿ ಅಗ್ರಪ್ರಾಶಸ್ತ್ಯವನ್ನು ಕೊಡಬೇಕು. ಅನಂತರ ಸೋದರಳಿಯ, ಮಗಳಮಗ, ಅಳಿಯ, ಮಾವ ಮುಂತಾದವರು ಯೋಗ್ಯರಾಗಿದ್ದರೆ ಶ್ರಾದ್ಧ ಭೋಜನಕ್ಕೆ ಕೂಡಿಸಬೇಕು.

ಪಿತೃಸ್ಥಾನಕ್ಕೆ ೧-೩-೫ ವಿಷಮಸಂಖ್ಯೆಯಲ್ಲಿ ಬ್ರಾಹ್ಮಣರನ್ನು, ದೇವಸ್ಥಾನಕ್ಕೆ ೨-೪-೬ ಹೀಗೆ ಸಮಸಂಖ್ಯೆಯಲ್ಲಿ ಯಥಾಶಕ್ತಿ ಬ್ರಾಹ್ಮಣರ ಭೋಜನ ಮಾಡಿಸಬೇಕು. ಯೋಗ್ಯತೆ ಇಲ್ಲದಿದ್ದರೆ ಕನಿಷ್ಠ ಒಬ್ಬೊಬ್ಬ ಬ್ರಾಹ್ಮಣರನ್ನಾದರೂ ಕೂಡಿಸಬೇಕು.

ಶ್ರಾದ್ಧದಲ್ಲಿ ಮೂರು ಪದಾರ್ಥಗಳು ಅತ್ಯಂತ ಪವಿತ್ರವಾಗಿವೆ. "ದೌಹಿತ್ರ ಕುತಪಸ್ತಿಲಾಃ" ಉಕ್ತಿಯಂತೆ ಮಗಳಮಗ, ಕುತಪಕಾಲ, ಎಳ್ಳು ಇವು ಮುಖ್ಯವಾಗಿವೆ. ಮಧ್ಯಾಹ್ನ ಅನಂತರದ ಕಾಲಕ್ಕೆ ಕುತಪಕಾಲ ಎನ್ನುತ್ತಾರೆ. ಶ್ರಾದ್ಧವನ್ನು ಈ ಕುತಪ ಕಾಲದಲ್ಲಿ ಮಾಡಬೇಕು. ಶ್ರಾದ್ಧದಲ್ಲಿ ಕರಿ ಎಳ್ಳನ್ನೇ ಉಪಯೋಗಿಸಬೇಕು. ಮಗಳ ಮಗನನ್ನು ಭೋಜನಕ್ಕೆ ಕೂಡಿಸಬೇಕು. ಶ್ರಾದ್ಧದಲ್ಲಿ ಬೆಳ್ಳಿಯನ್ನು ದಾನ ಕೊಟ್ಟರೆ ವಿಶೇಷ ಪುಣ್ಯ. ಎಲ್ಲದಕ್ಕಿಂತಲೂ ಮುಖ್ಯವೆಂದರೆ ಭಗವಂತನ ನಾಮಸ್ಮರಣೆ, ಭಗವತ್ ಕಥಾ ಪ್ರವಚನ, ಪಾರಾಯಣ, ಕೀರ್ತನೆ ಮತ್ತು ಶ್ರಾದ್ಧ ದಿನದಲ್ಲಿ ಬಿಡಬೇಕಾದದ್ದು ಮೂರು. ಸಿಟ್ಟು, ಪ್ರಯಾಣ ಮತ್ತು ಗಡಿಬಿಡಿ. ಅಲ್ಲಿ ಊಟ ಮಾಡುವವರು ಈ ಮೂರನ್ನು ಬಿಡಬೇಕು.

ಶ್ರಾದ್ಧದಲ್ಲಿ ಮೃತಪುರುಷರ ಹೆಸರು, ಗೋತ್ರಗಳನ್ನು ಉಚ್ಚಾರ ಮಾಡಿ ಪಿತೃಗಳಿಗೆ ಶ್ರಾದ್ಧಕ್ಕೆ ವಿಹಿತವಾದ ಅನ್ನವನ್ನು ಕೊಟ್ಟರೆ ಅದು ಆ ಪಿತೃಗಳಿಗೆ ಅವರು ಎಲ್ಲಿಯೇ ಇರಲಿ, ಯಾವ ಲೋಕದಲ್ಲೇ ವಾಸಿಸಲಿ, ಅವರಿಗೆ ಯೋಗ್ಯವಾದ ಆಹಾರವಾಗಿ ಅವರಿಗೆ ತೃಪ್ತಿಯನ್ನುಂಟು ಮಾಡುತ್ತದೆ.

* * *

Rarest Archiver

೧೨

ಶ್ರೀಕೃಷ್ಣಾಚಾರ್ಯರ ಸ್ಮೃತಿಮುಕ್ತಾವಲಿಯಲ್ಲಿ ಶ್ರಾದ್ಧದ ಕುರಿತಂತೆ ಪ್ರಮಾಣಗಳು

ಮಗನಾದವನು ತಂದೆಯ ಶ್ರಾದ್ಧವನ್ನು ಮಾಡಬೇಕು. ಮಗನು ಇಲ್ಲದಿದ್ದರೆ ಪತ್ನಿಯು ಶ್ರಾದ್ಧಮಾಡಬೇಕು. ಅವಳೂ ಇಲ್ಲದಿದ್ದರೆ ಮಗಳ ಮಗನು(ದೌಹಿತ್ರನು) ಶ್ರಾದ್ಧವನ್ನು ಮಾಡಬೇಕು. ಅವನೂ ಇಲ್ಲದಿದ್ದರೆ ಅಜ್ಜನ ಸಂಪತ್ತಿಗೆ ಭಾಗಿಯಾಗುವ ಅಣ್ಣ ಅಥವಾ ತಮ್ಮನು ಮಾಡಬೇಕು. ಅವನೂ ಇಲ್ಲದಿದ್ದರೆ ಸಹೋದರನ ಪುತ್ರನು ಶ್ರಾದ್ಧಾಧಿಕಾರಿಯಾಗುತ್ತಾನೆ.[೧]

ಮಕ್ಕಳು ಇಲ್ಲದಿದ್ದರೆ ಸಪಿಂಡರು(ಜ್ಞಾತಿಗಳು), ಅವರೂ ಇಲ್ಲದಿದ್ದರೆ ಸಹೋದರರು, ಮಕ್ಕಳಿಲ್ಲದವನಿಗೆ ಪಿಂಡಪ್ರದಾನ ಪೂರ್ವಕ ಶ್ರಾದ್ಧವನ್ನು ಮಾಡಬೇಕು ಅಥವಾ ತಾಯಿಯ ಸಪಿಂಡರು ಇದ್ದರೆ ಅವರಾದರೂ ಶ್ರಾದ್ಧವನ್ನು ಮಾಡಬಹುದು. ಅಥವಾ ತಾಯಿಯ ಸಹೋದರರಿದ್ದರೆ ಅವರೂ ಶ್ರಾದ್ಧವನ್ನು ಮಾಡಬಹುದು. ಹೀಗೆ ಗಂಡುಮಕ್ಕಳಿಲ್ಲದವನಿಗೆ ಹೆಣ್ಣುಮಕ್ಕಳ ಮಕ್ಕಳಾದರೂ ಈ ಶ್ರಾದ್ಧ ವಿಧಾನವನ್ನು ಸರಿಯಾಗಿ ಮಾಡಿ ಮುಗಿಸಬೇಕು. ಅಂತೂ ಮೃತನಿಗೆ ಸದ್ಗತಿಯಾಗಬೇಕಾದರೆ ತಾರತಮ್ಯದಿಂದ ಅಧಿಕಾರವುಳ್ಳ ಯಾರಾದರೂ ಮೃತನ ಸದ್ಗತಿಗಾಗಿ ಶ್ರಾದ್ಧವನ್ನು ಮಾಡಬೇಕು.[೨]

ಮಕ್ಕಳಿಲ್ಲದಿದ್ದರೆ ಗೋತ್ರದಾಯಾದಿಗಳು, ತಾಯಿಯ ಕಡೆಯ ಸಪಿಂಡರು, ಪಿಂಡ ಪ್ರದಾನ ಶ್ರಾದ್ಧ ಮಾಡಬೇಕು. ಅವರೂ ಇಲ್ಲದಿದ್ದರೆ ಪುರೋಹಿತರು, ಅವರೂ ಇಲ್ಲದಿದ್ದರೆ ವೇದಶಾಸ್ತ್ರಗಳ ಅಧ್ಯಾಪಕರು ಅಪುತ್ರನಿಗೆ ಪಿಂಡಪ್ರದಾನ ಶ್ರಾದ್ಧವನ್ನು ಮಾಡಬಹುದು.[೩]

ಮೇಲೆ ಹೇಳಿದ ಶ್ರಾದ್ಧಾಧಿಕಾರಿಗಳು ಯಾರೂ ಇಲ್ಲದಿದ್ದರೆ ಹೆಂಗಸರೇ ತಮ್ಮ ತಮ್ಮ ಗಂಡಂದಿರಿಗೆ ಮಂತ್ರರಹಿತವಾದ ಶ್ರಾದ್ಧವನ್ನು ಮಾಡಬೇಕು.[೪]

ಸ್ತ್ರೀಯರೂ ಇಲ್ಲದಿದ್ದರೆ ರಾಜನಾದರೂ ಕ್ರಿಯಾಕರ್ಮಗಳನ್ನು, ಶ್ರಾದ್ಧಾದಿಗಳನ್ನು ಮಾಡಿಸಬೇಕೆಂದು ಹೇಳಲಾಗಿದೆ. ದಹನ, ಉತ್ತರಕ್ರಿಯೆ, ಶ್ರಾದ್ಧಾದಿಗಳನ್ನು ಮಾಡಲು ಯಾರೂ ಇಲ್ಲದಿದ್ದರೆ ಸಕುಟುಂಬರಾದ ಎಲ್ಲರಿಗೂ ರಾಜನು ಆ ಕಾರ್ಯಗಳನ್ನು ಮಾಡಬೇಕು(ಮಾಡಿಸಬೇಕು).[೫]

Rarest Archive

ಪುತ್ರವತಿಯಾದ ಸುಮಂಗಲಿಯು ಮೃತಳಾದರೆ ಪತಿಗೆ ಅಧಿಕಾರವನ್ನು ಸ್ಮೃತಿಯಲ್ಲಿ ಹೇಳಿದೆ. ಪುತ್ರವತಿಯಾದ ಸ್ತ್ರೀಯಳಿಗೆ ಪತಿಯು(ಮಕ್ಕಳಿಗೆ ಅಧಿಕಾರ ಪ್ರಾಪ್ತವಾಗ ದಿರುವಾಗ) ಶ್ರಾದ್ಧಾದಿಗಳನ್ನು ಮಾಡಬೇಕು. ಆದರೆ ಅಪುತ್ರಳಾದ ಅವಳಿಗೆ ಶ್ರಾದ್ಧಾದಿಗಳನ್ನು ಪತಿಯು ಮಾಡಬಾರದು. ಪತಿಯ ತಮ್ಮಂದಿರು ಮಾಡಬೇಕು. ಪುತ್ರನಿಗೂ ತಂದೆಯೇ ಉಚಿತ ಕಾರ್ಯಗಳನ್ನು ಮಾಡಬೇಕು. ತಂದೆ ಇದ್ದಾಗ ತಮ್ಮನೂ ಮಾಡಬಾರದು. ಅಣ್ಣನೂ ಮಾಡಬಾರದು. ಸ್ನೇಹದಿಂದ ಮಾಡುವುದಾದರೂ ಸಪಿಂಡೀಕರಣವನ್ನು ಮಾಡಬಾರದು(ತಂದೆಯು ಇರುವಾಗ ಪುತ್ರನು ಮೃತನಾದರೆ ಅವನಿಗೆ ಸಪಿಂಡೀಕರಣ ವನ್ನು ತಂದೆಯೇ ಮಾಡಬೇಕು).[೬]

ಮಧ್ಯಾಹ್ನಕಾಲ, ಖಡ್ಗಪಾತ್ರ, ನೇಪಾಲದ ಕಂಬಳಿ, ಬೆಳ್ಳಿ, ದರ್ಭೆ, ಎಳ್ಳು, ಗೋವು, ಮೊಮ್ಮಗ(ಮಗಳ ಮಗ) ಈ ಎಂಟರಲ್ಲಿಯೂ 'ಕುತಪ' ಪ್ರಯೋಗವಿದೆ. 'ಕು' ಶಬ್ದಕ್ಕೆ ಕುತ್ಸಿತವಾದ ಪಾಪವೆಂದು ಅರ್ಥವು. ಮೇಲೆ ಹೇಳಿದ ಮಧ್ಯಾಹ್ನ ಕಾಲ ಮುಂತಾದ ಎಂಟೂ ವಸ್ತುಗಳು ಕುಶಬ್ದದಿಂದ ಹೇಳಲ್ಪಡುವ ಕುತ್ಸಿತವಾದ ಪಾಪಕ್ಕೆ ಸಂತಾಪವನ್ನುಂಟು ಮಾಡುತ್ತದೆ. ಆದ್ದರಿಂದ ಮಧ್ಯಾಹ್ನ ಕಾಲ ಮುಂತಾದ ಈ ಎಂಟು ವಸ್ತುಗಳನ್ನು 'ಕುತಪ'ಗಳೆಂದು ಕರೆಯುತ್ತಾರೆ.[೭]

ಶ್ರಾದ್ಧವು ನಾಳೆಯ ದಿವಸ ಇದೆ ಎಂದಾಗ ಹಿಂದಿನ ದಿವಸ ಅಥವಾ ಅದಕ್ಕಿಂತ ಹಿಂದಿನ ದಿವಸದಲ್ಲಿಯಾಗಲೀ ಮೂರಕ್ಕೆ ಕಡಿಮೆ ಇಲ್ಲದಂತೆ ಯೋಗ್ಯರಾದ ಯಥೋಚಿತ ರಾದ ಬ್ರಾಹ್ಮಣರನ್ನು ಆಮಂತ್ರಿಸಬೇಕು.[೮]

ವಿಶ್ವೇದೇವಸ್ಥಾನಕ್ಕೆ ಇಬ್ಬರು ಬ್ರಾಹ್ಮಣರು, ಪಿತೃಸ್ಥಾನಕ್ಕೆ ಮೂರು ಮಂದಿ ಬ್ರಾಹ್ಮಣರು ಅಥವಾ ವಿಶ್ವೇದೇವಸ್ಥಾನಕ್ಕೂ ಒಬ್ಬೊಬ್ಬ ಬ್ರಾಹ್ಮಣನನ್ನೇ ಆಹ್ವಾನಿಸಬೇಕು. ಅತ್ಯಂತ ಸಮೃದ್ಧನಾದರೂ ಈ ರೀತಿಯಾಗಿ ಬ್ರಾಹ್ಮಣರನ್ನು ಕರೆದು ಭೋಜನ ಮಾಡಿಸಬೇಕು. ಶ್ರಾದ್ಧವಿಸ್ತಾರದ ಕಡೆಗೆ ಮನಸ್ಸು ಕೊಡಬಾರದು.[೯]

ವಿಹಿತ ಅನುಷ್ಠಾನ ಮಾಡುವವರು, ತಪಸ್ವಿಗಳು, ದಕ್ಷಿಣಾಗ್ನಿ, ಗಾರ್ಹಪತ್ಯ, ಆವಹನೀಯ, ಸಭ್ಯ, ಆವಸಥ್ಯ ಎಂಬ ಪಂಚಾಗ್ನಿಗಳ ಆಧಾನ ಮಾಡಿದವರು, ಮುಂದೆ ಗೃಹಸ್ಥನಾಗುವ ಬ್ರಹ್ಮಚಾರಿ, ನೈಷ್ಠಿಕ ಬ್ರಹ್ಮಚಾರಿ, ಮಾತಾಪಿತೃಗಳ ಸೇವಾತತ್ಪರ ರಾದವರು ಇಂತಹ ಬ್ರಾಹ್ಮಣರು, ಶ್ರಾದ್ಧವು ಅಕ್ಷಯ ಫಲವಾಗುವುದಕ್ಕೆ ಕಾರಣರಾಗುತ್ತಾರೆ.

ದೇವಪೂಜೆಗಳಲ್ಲಿ ಆಸಕ್ತನಾದವನನ್ನು, ದೇವಯಜ್ಞಾದಿ ಪಂಚಯಜ್ಞನಿರತನನ್ನು, ಪುರಾಣವೇದಶಾಸ್ತ್ರ ಬಲ್ಲವನನ್ನು, ಶ್ರಾದ್ಧಕ್ಕೆ ನಿಮಂತ್ರಿಸಬೇಕು. ವೇದಾಂತಶಾಸ್ತ್ರವನ್ನು ಬಲ್ಲವನನ್ನು, ಶಾಂತನಾಗಿ ಮೃದುಭಾಷಿಯಾದವನನ್ನು, ತುಂಬಾ ಮೃದುಸ್ವಭಾವದವನನ್ನು ಶ್ರಾದ್ಧಕ್ಕಾಗಿ ಆಹ್ವಾನಿಸಬೇಕು.[೧೦]

Rarest Archiver

ಒಬ್ಬ ಯಜಮಾನನು ಮನೆಯಲ್ಲಿ ಪಿತೃಗಳನ್ನು ಉದ್ದೇಶಿಸಿ ಶ್ರಾದ್ಧ ಮಾಡುತ್ತಾನೆ. ಆಗ ಸಂನ್ಯಾಸಿಯೊಬ್ಬನನ್ನು ಕರೆದು ಮನೆಯಲ್ಲಿ ಭೋಜನ ಮಾಡಿಸಿದರೆ ಪ್ರಲಯಕಾಲ ಪರ್ಯಂತವಾಗಿಯೂ ಅವನ ಪಿತೃಗಳಿಗೆ ತೃಪ್ತಿಯುಂಟಾಗುತ್ತದೆ.[೧]

ಶ್ರಾದ್ಧಕರ್ತನು ಕಡ್ಡಿಯಿಂದ ಹಲ್ಲು ಉಜ್ಜಬಾರದು. ತಾಂಬೂಲ ಹಾಕಿಕೊಳ್ಳಬಾರದು. ತೈಲಾಭ್ಯಂಜನವನ್ನು ಮಾಡಬಾರದು. ಎರಡು ಬಾರಿ ಭೋಜನ ಮಾಡಬಾರದು. ಸ್ತ್ರೀಸಂಗವನ್ನು ಮಾಡಬಾರದು. ಔಷಧ ಸೇವನೆ ಮಾಡಬಾರದು. ಪರಾನ್ನ ಭೋಜನ ಮಾಡಬಾರದು. ಶ್ರಾದ್ಧದ ಮರುದಿನ ತಿಲತರ್ಪಣ ಮಾಡುವ ಪಕ್ಷದಲ್ಲಿ ಇವು ಮರುದಿನಕ್ಕೂ ಅನ್ವಯಿಸುತ್ತವೆ.[೨]

ಏಕೋವಿಷ್ಣುರ್ಮಹದ್ಭೂತಂ ಪೃಥಗ್‌ಭೂತಾನ್ಯನೇಕಶಃ ।
ತ್ರೀನ್ ಲೋಕಾನ್ ವ್ಯಾಪ್ಯ ಭೂತಾತ್ಮಾ ಭುಂಕ್ತೇ ವಿಶ್ವಭುಗವ್ಯಯಃ ॥

ಈ ಶ್ಲೋಕರೂಪವಾದ ಮಂತ್ರ ಹೇಳಿ ಈ ಶ್ರಾದ್ಧವೆಂಬ ಕಾರ್ಯದಿಂದ ಪಿತೃಗಳ ಅಂತರ್ಯಾಮಿಯಾಗಿರುವ ಲಕ್ಷ್ಮೀಸಹಿತನಾದ ಜನಾರ್ದನರೂಪೀ ಭಗವಂತನು ಪ್ರೀತನಾಗಲಿ ಎಂದು ಹೇಳುತ್ತ ಶ್ರಾದ್ಧ ಕರ್ಮವನ್ನು ಶ್ರೀಹರಿಗೆ ಅರ್ಪಿಸಬೇಕು.

ಅಡಿಟಿಪ್ಪಣಿಗಳು

೧. ಪುತ್ರಃ ಕುರ್ಯಾತ್ ಪಿತೃಶ್ರಾದ್ಧಂ ಪತ್ನೀ ಚ ತದಸನ್ನಿಧೌ ।
ಧನಹಾರೀ ಚ ದೌಹಿತ್ರಸ್ತತೋ ಭ್ರಾತಾ ಚ ತತ್ಸುತಃ ॥

–ಬೃಹಸ್ಪತಿ ವಚನ

೨. ಪುತ್ರಾಭಾವೇ ಸಪಿಂಡಾಸ್ತು ತದಭಾವೇ ಸಹೋದರಾಃ ।
ಮಾತುಃ ಸಪಿಂಡಾ ಯೇ ವಾ ಸ್ಯುರ್ಯೇ ವಾ ಮಾತುಃಸಹೋದರಾಃ ।
ಕುರ್ಯುರೇನಂ ವಿಧಿಂ ಸಮ್ಯಗಪುತ್ರಸ್ಯ ಸುತಾಸುತಾಃ ॥

–ಮಾರ್ಕಂಡೇಯ ಧರ್ಮಶಾಸ್ತ್ರವಚನ

೩. ಪುತ್ರಾಭಾವೇ ಸಬಾಂಧವಾಃ ಮಾತೃಸಪಿಂಡಾಃ ಶಿಷ್ಯಾಶ್ಚ
ದದ್ಯುಸ್ತದಭಾವೇ ಋತ್ವಿಗಾಚಾರ್ಯಃ ॥

–ಗೌತಮರ ವಚನ

೪. ಸರ್ವಾಭಾವೇ ಸ್ತ್ರಿಯಃ ಕುರ್ಯುಃ ಸ್ವಭರ್ತೃಣಾಮ್ ಅಮಂತ್ರಕಮ್ ॥

–ಮಾರ್ಕಂಡೇಯ ವಚನ

೫. ತದಭಾವೇ ತು ನೃಪತಿಃ ಕುರ್ಯಾತ್ ತತ್ ಸಕುಟುಂಬಿನಾಂ ।
ತಜ್ಜಾತೀಯೈರ್ನರೈಃ ಸಮ್ಯಕ್ ದಾಹಾದ್ಯಾಃ ಸಕಲಾಃ ಕ್ರಿಯಾಃ ।
ಸರ್ವೇಷಾಮೇವ ವರ್ಣಾನಾಂ ಬಾಂಧವೋ ನೃಪತಿರ್ಯತಃ ॥

Rarest Archiver

೬. ಸಪುತ್ರಾಯಾ ವಿಷಯೇ ಪತ್ಯುರಧಿಕಾರಮಾಹ ।
ಸಪುತ್ರಾಯಾಃ ಪತಿಃ ಕುರ್ಯಾದಪುತ್ರಾಯಾ ನ ತು ಕ್ವಚಿತ್ ।
ಪುತ್ರಸ್ಯಾಪಿ ಪಿತಾ ಕುರ್ಯಾನ್ನಾನುಜಶ್ಚ ನವಾಗ್ರಜಃ ।
ಯದಿ ಸ್ನೇಹೇನ ವಾ ಕುರ್ಯಾತ್ ಸಪಿಂಡೀಕರಣಂ ವಿನಾ ॥

೭. ಮಧ್ಯಾಹ್ನಃ ಖಡ್ಗಪಾತ್ರಂ ಚ ತಥಾ ನೈಪಾಲಕಂಬಲಃ ।
ರೂಪ್ಯಂ ದರ್ಭಾಸ್ತಿಲಾ ಗಾವೋ ದೌಹಿತ್ರಶ್ಚಾಷ್ಟಮಃ ಸ್ಮೃತಃ ॥
ಪಾಪಂ ಕುತ್ಸಿತಮಿತ್ಯಾಹುಸ್ತಸ್ಯ ಸಂತಾಪಕಾರಣಃ ।
ಅಷ್ಟಾವೇತೇ ಯತಸ್ತಸ್ಮಾತ್ ಕುತಪಾ ಇತಿ ವಿಶ್ರುತಾಃ ॥

೮. ಪೂರ್ವೇದ್ಯುರಪರೇ ದ್ಯುರ್ವಾ ಶ್ರಾದ್ಧಕರ್ಮಣ್ಯುಪಸ್ಥಿತೇ ।
ನಿಮಂತ್ರಯೀತ ತ್ರ್ಯವರಾನ್ ಸಮ್ಯಗ್ ವಿಪ್ರಾನ್ ಯಥೋಚಿತಾನ್ ॥

೯. ದ್ವೌ ದೈವೇ ಪಿತೃಕಾರ್ಯೇ ತ್ರೀನ್ ಏಕೈಕಮುಭಯತ್ರ ವಾ ।
ಭೋಜಯೇತ್ ಸುಸಮೃದ್ಧೋಽಪಿ ನ ಪ್ರಸಜ್ಯೇತ ವಿಸ್ತರೇ ॥

೧೦. ದೇವಪೂಜಾಸು ನಿರತಂ ಪಂಚಯಜ್ಞಪರಾಯಣಂ
ಪುರಾಣ ವೇದ ಶಾಸ್ತ್ರಜ್ಞಂ ಶ್ರಾದ್ಧಾರ್ಥೇ ತು ನಿಮಂತ್ರಯೇತ್ ॥
ಅಧ್ಯಾತ್ಮಶಾಸ್ತ್ರಸಂಪನ್ನಂ ಶಾಂತಂ ವೈ ಮೃದುಭಾಷಿತಂ ।
ತಥಾ ಮೃದುತರಂ ದಾಂತಂ ಶ್ರಾದ್ಧಾರ್ಥೇ ತು ನಿಮಂತ್ರಯೇತ್ ॥

೧೧. ಯೇಷಾಂ ಭುಂಕ್ತೇ ಗೃಹೇ ಶ್ರಾದ್ಧೇ ಪಿತೃಕರ್ಮಣಿ ಭಿಕ್ಷುಕಃ ॥
ಆಕಲ್ಪಕಾಲಿಕಾತೃಪ್ತಿಃ ಪಿತೄಣಾಮುಪಜಾಯತೇ ॥

೧೨. ದಂತಧಾವನ ತಾಂಬೂಲಂ ತೈಲಾಭ್ಯಂಗಂ ದ್ವಿಭೋಜನಂ
ರತ್ಯೌಷಧಿ ಪರಾನ್ನಂಚ ಶ್ರಾದ್ಧಕರ್ತಾ ವಿವರ್ಜಯೇತ್ ॥

* * *

Rarest Archiver

೧೩

ಶ್ರೀಹರಿವಂಶದಲ್ಲಿ ಶ್ರಾದ್ಧದ ಕುರಿತಂತೆ ಪ್ರಮಾಣಗಳು

ಭೀಷ್ಮಾಚಾರ್ಯರು ಧರ್ಮರಾಜನನ್ನು ಕುರಿತು ಹೇಳುತ್ತಾರೆ-

ಸರ್ವಕಾಮನೆಗಳನ್ನು ಪೂರ್ತಿಗೊಳಿಸುವ ಶ್ರಾದ್ಧಗಳ ಮೂಲಕವಾಗಿ ಯಾವನು ಪಿತೃಗಳನ್ನು ತೃಪ್ತಿಗೊಳಿಸುವನೋ, ಅಂತಹ ಶ್ರಾದ್ಧತತ್ಪರನಾದ ಮತ್ತು ವಿನೀತನಾದ ಶ್ರಾದ್ಧಕರ್ತೃವು ಈ ಲೋಕದಲ್ಲಿಯೂ ಆನಂದಪಡುತ್ತಾನೆ. ಮರಣಾನಂತರದಲ್ಲಿ ಪರಲೋಕ ದಲ್ಲಿಯೂ ಸುಖವನ್ನು ಅನುಭವಿಸುತ್ತಾನೆ.[೧]

ಶ್ರಾದ್ಧದಿಂದ ಸುಪ್ರೀತರಾದ ಪಿತೃಗಳು ಧರ್ಮಕಾಮನಾದವನಿಗೆ ಧರ್ಮವನ್ನೂ, ಪ್ರಜಾಕಾಮನಿಗೆ ಸಂತಾನವನ್ನೂ, ಪುಷ್ಟಿಕಾಮನಿಗೆ ಪುಷ್ಟಿಯನ್ನೂ ಅನುಗ್ರಹಿಸುತ್ತಾರೆ.[೨]

ಪುಷ್ಟಿಕಾಮರಾಗಿ ಯಾರು ಶ್ರಾದ್ಧ ಮಾಡುವರೋ ಅವರಿಗೆ ಪಿತೃಗಳು ಪುಷ್ಟಿಯನ್ನು ಕೊಡುವರಲ್ಲದೇ ಸಂತಾನವನ್ನೂ ಅನುಗ್ರಹಿಸುತ್ತಾರೆ.[೩]

ಯಾವ ಪುರುಷನು ಎಲ್ಲ ಕಡೆಗಳಲ್ಲಿಯೂ ಇರುವ ಪಿತೃ ಪಿತಾಮಹ ಪ್ರಪಿತಾಮಹರಿಗೆ ಅವರ ನಾಮ ಗೋತ್ರಗಳನ್ನು ಹೇಳಿ ಮೂರು ಪಿಂಡಗಳನ್ನು ಪ್ರದಾನ ಮಾಡುವರೋ ಅಂತಹವನ ಈ ವಿಧವಾದ ಶ್ರಾದ್ಧದಾನದಿಂದ ಪಿತೃಗಳು ಸಂತುಷ್ಟರಾಗುತ್ತಾರೆ ಮತ್ತು ಅವನ ವಿಷಯದಲ್ಲಿ ಸತತವಾದ ಅನುರಾಗವುಳ್ಳವರಾಗಿರುತ್ತಾರೆ.[೪]

ಯಾವನು ಭಕ್ತಿಯಿಂದ ಪಿತೃಗಳನ್ನು ಸಂತೃಪ್ತಿಗೊಳಿಸುವನೋ ಅಂತಹವನನ್ನು ಪಿತೃಗಳೂ ಸುಪ್ರೀತನನ್ನಾಗಿ ಮಾಡುತ್ತಾರೆ.[೫]

ದೇವಕಾರ್ಯಕ್ಕಿಂತಲೂ ಪಿತೃಕಾರ್ಯವು ಶ್ರೇಷ್ಠವಾದುದೆಂದು ತಿಳಿಯಬೇಕಾದುದು ಅವಶ್ಯವಾಗಿದೆ.[೬]

ಯಾರು ಮೊದಲು ಪಿತೃಗಳನ್ನು ಶ್ರಾದ್ಧದಿಂದ ತೃಪ್ತಿಗೊಳಿಸದೇ ಇತರ ಕರ್ಮಗಳನ್ನು ಮಾಡುವರೋ, ಅಂತಹ ಕರ್ಮದ ಫಲವನ್ನು ರಾಕ್ಷಸರು, ದಾನವರು ಮತ್ತು ನಾಗರು ಪಡೆದುಕೊಳ್ಳುತ್ತಾರೆ.[೭]

Rarest Archiver

ಪಿತೃಗಳನ್ನು ಆರಾಧಿಸಿದರೆ ದೇವತೆಗಳಿಗಿಂತಲೂ ಮೊದಲು ಅವರು ಪ್ರಸನ್ನರಾಗುತ್ತಾರೆ. ಪಿತೃದೇವತೆಗಳು ಯಾವಾಗಲೂ ಶೀಘ್ರವಾಗಿ ಒಲಿದು ಫಲವನ್ನು ಕೊಡುತ್ತಾರೆ. ಏಕೆಂದರೆ ಕ್ರೋಧರಹಿತರು, ಯಾವಾಗಲೂ ಲೋಕದ ಜನರ ವಿಷಯದಲ್ಲಿ ವಿಶೇಷವಾದ ಪ್ರೀತಿಯುಳ್ಳವರು.[೮]

ಅಡಿಟಿಪ್ಪಣಿಗಳು

೧. ಶ್ರಾದ್ಧೈಃ ಪ್ರೀಣಾತಿ ಹಿ ಪಿತೄನ್ ಸರ್ವಕಾಮಫಲೈಸ್ತು ಯಃ ।
ತತ್ಪರಃ ಪ್ರಯತಃ ಶ್ರಾದ್ಧೀ ಪ್ರೇತ್ಯ ಚೇಹ ಚ ಮೋದತೇ ॥ (೧-೧೬-೧೦)

೨. ಪಿತರೋ ಧರ್ಮಕಾಮಸ್ಯ ಪ್ರಜಾಕಾಮಸ್ಯ ಚ ಪ್ರಜಾಮ್ ।
ಪುಷ್ಟಿ ಕಾಮಸ್ಯ ಪುಷ್ಟಿಂಚ ಪ್ರಯಚ್ಛಂತಿ ಯುಧಿಷ್ಠರ ॥ (೧-೧೬-೧೧)

೩. ಶ್ರಾದ್ಧಾನಿ ಪುಷ್ಟಿಕಾಮಾಶ್ಚ ಯೇ ಕರಿಷ್ಯಂತಿ ಮಾನವಾಃ ।
ತೇಭ್ಯಃ ಪುಷ್ಟಿಂ ಪ್ರಜಾಶ್ಚೈವ ದಾಸ್ಯಂತಿ ಪಿತರಃ ಸದಾ ॥ (೧-೧೭-೩೯)

೪. ಶ್ರಾದ್ಧೇ ಯೇ ಚ ಪ್ರದಾಸ್ಯಂತಿ ತ್ರೀನ್ ಪಿಂಡಾನ್ ನಾಮಗೋತ್ರತಃ ।
ಸರ್ವತ್ರ ವರ್ತಮಾನಾಂಸ್ತಾನ್ ಪಿತರಃ ಸಪಿತಾಮಹಾನ್
ಭಾವಯಿಷ್ಯಂತಿ ಸತತಂ ಶ್ರಾದ್ಧದಾನೇನ ತರ್ಪಿತಾಃ ॥ (೧-೧೭-೪೦)

೫. ಪಿತೄನ್ ಪ್ರೀಣಾತಿ ಯೋ ಭಕ್ತ್ಯಾ ಪಿತರಃ ಪ್ರೀಣಯಂತಿತಮ್ ॥ (೧-೧೮- ೭೩)

೬. ದೇವಕಾರ್ಯಾದಪಿ ಮುನೇ ಪಿತೃಕಾರ್ಯಂ ವಿಶಿಷ್ಯತೇ ॥ (೧-೧೮-೭೪)

೭. ಯೋಽನಿಷ್ಟ್ವಾತು ಪಿತೄನ್ ಶ್ರಾದ್ಧೈಃ ಕ್ರಿಯಾಃ ಕಾಶ್ಚಿತ್ಕರಿಷ್ಯತಿ
ರಾಕ್ಷಸಾ ದಾನವಾ ನಾಗಾಃ ಫಲಂ ಪ್ರಾಪ್ಸ್ಯಂತಿ ತಸ್ಯತತ್ ॥

೮. ದೇವತಾನಾಂ ಹಿ ಪಿತರಃ ಪೂರ್ವಮಾಪ್ಯಾಯನಂ ಸ್ಮೃತಮ್
ಶೀಘ್ರಪ್ರಸಾದಾ ಹ್ಯಕ್ರೋಧಾ ಲೋಕಸ್ಯಾಪ್ಯಾಯನಂ ಪರಮ್ ॥

* * *

Rarest Archives

೧೪

ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಶ್ರಾದ್ಧದ ಕುರಿತಂತೆ ಪ್ರಮಾಣಗಳು

ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಶ್ರಾದ್ಧದ ಕುರಿತಂತೆ ಅನೇಕ ವಿಷಯಗಳನ್ನು ತಿಳಿಸಿ ಕೊಟ್ಟಿದ್ದಾರೆ. ಮೊದಲು ಶ್ರಾದ್ಧಕಾಲದ ಬಗ್ಗೆ ತಿಳಿಸುತ್ತಾರೆ.

ಅಮಾವಾಸ್ಯೆಯು ಚತುರ್ದಶಿಯುಕ್ತವಾಗಿದ್ದರೆ "ಸಿನೀವಾಲಿ" ಎಂದೂ, ಪ್ರತಿಪದಾ ಯುಕ್ತವಾಗಿದ್ದರೆ "ಕುಹೂ" ಎಂದೂ ಹೇಳುತ್ತಾರೆ. ಅಮಾವಾಸ್ಯೆಯು ಎರಡು ದಿನವಿದ್ದರೆ, ಅಪರಾಹ್ನ ಕಾಲದಲ್ಲಿ ಅಮಾವಾಸ್ಯೆಯು ಇದ್ದ ತಿಥಿಯನ್ನು ಶ್ರಾದ್ಧಕ್ಕೆ ಉತ್ತಮ ವೆಂದು ತಿಳಿಯಬೇಕು. ಯಾಕೆಂದರೆ ಅಪರಾಹ್ನವು ಪಿತೃಗಳ ಕಾಲವಾಗಿದೆ. ಅಯನದ್ವಯ ವೆಂದರೆ ಮಾರ್ಗಶೀರ್ಷ, ಪುಷ್ಯ, ಮಾಘ, ಫಾಲ್ಗುಣ ಈ ನಾಲ್ಕು ತಿಂಗಳು. ಹೇಮಂತ, ಶಿಶಿರ ಋತುಗಳಿಗೆ ಎರಡು ಅಯನಗಳೆಂದು ಭಾವಿಸಲಾಗಿದೆ. ಈ ನಾಲ್ಕು ತಿಂಗಳಲ್ಲಿಯ ನಾಲ್ಕು ಅಷ್ಟಮಿಗಳಿಗೆ ಅಷ್ಟಕವೆನ್ನುತ್ತಾರೆ. ದಕ್ಷಿಣಾಯನ, ಉತ್ತರಾಯಣಗಳು, ವ್ಯತೀಪಾತ ಯೋಗ, ಗಜಚ್ಛಾಯಾಯೋಗ, ಸೂರ್ಯ ಚಂದ್ರ ಗ್ರಹಣ ಕಾಲ ಇವು ಶ್ರಾದ್ಧ ಕಾಲಗಳು. ಚಂದ್ರನು ಮಘಾ ನಕ್ಷತ್ರದಲ್ಲಿಯೂ, ಸೂರ್ಯನು ಹಸ್ತಾ ನಕ್ಷತ್ರದಲ್ಲಿಯೂ ಇದ್ದಾಗ ತ್ರಯೋದಶಿಯು ಬಂದರೆ ಅದಕ್ಕೆ "ಗಜಚ್ಛಾಯಾ" ಎನ್ನುತ್ತಾರೆ. ಸೂರ್ಯ ಚಂದ್ರ ಗ್ರಹಣ ಕಾಲದಲ್ಲಿ ಕರ್ತನಿಗೆ ಅಭಿರುಚಿ ಇದ್ದರೆ ಶ್ರಾದ್ಧ ಮಾಡಬೇಕು. ಯುಗಾದಿ, ಮನ್ವಾದಿ ತಿಥಿಗಳೂ ಶ್ರಾದ್ಧ ಕಾಲಗಳಾಗಿವೆ. ರಾತ್ರಿಯಲ್ಲಿ ಶ್ರಾದ್ಧ ಮಾಡಬಾರದೆಂದಿದ್ದರೂ ಗ್ರಹಣ ಸಮಯದಲ್ಲಿ ಪ್ರವೃತ್ತರಾಗಬಹುದು.[೧]

ಋಗ್ವೇದಾದಿ ನಾಲ್ಕು ವೇದಗಳ ಅಧ್ಯಯನ ಮಾಡುವವ, ಶಾಸ್ತ್ರಾರ್ಥಜ್ಞಾನವುಳ್ಳವ, ಬ್ರಹ್ಮಜ್ಞ, ತರುಣ, ವೇದಾರ್ಥಬಲ್ಲವ, ಮಂತ್ರ, ಬ್ರಾಹ್ಮಣ, ವೇದಗಳ ಅರ್ಥಗಳನ್ನು ತಿಳಿದವ, ಸಾಮವೇದ ಅಧ್ಯಯನ ಮಾಡುವವ, ತ್ರಿಮಧು ವ್ರತಮಾಡಿ, ತ್ರಿಮಧು ವೇದ ಭಾಗ ಅನ್ನುವ, ತ್ರಿಸುಪರ್ಣ, ಋಗ್ವೇದದ ಭಾಗವನ್ನು ಅಧ್ಯಯನ ಮಾಡುವವ, ಭಗಿನೀಪುತ್ರ, ಪೂಜ್ಯನಾದವ, ಶ್ವಶುರ, ಬಾಂಧವ, ಕರ್ಮನಿಷ್ಠ ತಪೋನಿಷ್ಠ, ಸಭ್ಯ, ಆವಸಥ, ಗಾರ್ಹಪತ್ಯ,

Rarest Archiver

ದಕ್ಷಿಣ, ಆವಹನೀಯ ಈ ಐದು ಅಗ್ನಿಗಳನ್ನು ಇಟ್ಟುಕೊಂಡವ, ಉಪಕುರ್ವಾಣ, ನೈಷ್ಠಿಕ ಇವೆರಡು ಪ್ರಕಾರದ ಬ್ರಹ್ಮಚಾರಿಗಳು, ಮಾತಾಪಿತೃಗಳ ಸೇವೆ ಮಾಡಿದವರು. ಜ್ಞಾನನಿಷ್ಠ ಬ್ರಾಹ್ಮಣರು ಇವರುಗಳು ಶ್ರಾದ್ಧದ ಅಕ್ಷಯ ಫಲಪ್ರಾಪ್ತಿಯ ಹೇತುಗಳಾಗಿದ್ದಾರೆಂದು ತಿಳಿಯಬೇಕು.[೨]

ಶ್ರಾದ್ಧದ ಪೂರ್ವದಿನದಲ್ಲಾಗಲೀ, ಶ್ರಾದ್ಧವಿದ್ದ ದಿನವಾಗಲಿ ಯೋಗ್ಯಬ್ರಾಹ್ಮಣನಿಗೆ ನಿಮಂತ್ರಣ ಕೊಡಬೇಕು. ಶ್ರಾದ್ಧಕರ್ತನು ಅಂದು ಶುಚಿಯಾಗಿರಬೇಕು. ಆಮಂತ್ರಣ ಸ್ವೀಕರಿಸಿದ ಬ್ರಾಹ್ಮಣನಾದರೂ ಮನೋವಾಕ್ಕಾಯಗಳಿಂದ ನಿಯಮಿತನಾಗಿರಬೇಕು.[೩]

ದೇವಸ್ಥಾನದಲ್ಲಿ ಇಬ್ಬರು ಬ್ರಾಹ್ಮಣರನ್ನು, ಪಿತೃಸ್ಥಾನದಲ್ಲಿ ಮೂರು ಬ್ರಾಹ್ಮಣರನ್ನು ಕುಳ್ಳಿರಿಸಬೇಕು. ಶ್ರಾದ್ಧಕರ್ಮ ಮಾಡುವ ಭೂಮಿಯನ್ನು ಗೋಮಯದಿಂದ ಸಾರಿಸಬೇಕು. ಪವಿತ್ರ ದರ್ಭಾದಿಗಳಿಂದ ಎಲ್ಲ ಕಡೆ ಆಚ್ಛಾದನ ಮಾಡಬೇಕು. ಹಾಗೂ ದಕ್ಷಿಣದ ಕಡೆಗೆ ಇಳಿಜಾರಾದ ಭೂಮಿಯಲ್ಲಿ ಮಾಡಬೇಕು.[೪]

ಪಿತೃಗಳಿಗೆ ಬೆಳ್ಳಿಯ, ದೇವತೆಗಳಿಗೆ ಸುವರ್ಣದ ದಕ್ಷಿಣೆಯನ್ನು ಯಥಾಶಕ್ತಿ ಕೊಡಬೇಕು. ತರುವಾಯ ಸ್ವಧಾಕಾರ ಹೇಳಿಸಬೇಕು. ಪಿತ್ರಾದಿಗಳಿಗೂ ಮತ್ತು ಮಾತಾ ಮಹಾದಿಗಳಿಗೂ ಸ್ವಧಾಕಾರವನ್ನು ಅನ್ನಬೇಕು. ಕರ್ತನು ಸ್ವಧಾಪಿತೃಭ್ಯಃ ಹೇಳಬೇಕು.[೫]

ಪಿತೃಕಾರ್ಯವನ್ನು ಮುಗಿಸಿದ ಮೇಲೆ, ಬ್ರಾಹ್ಮಣರ ಊಟವಾದ ಮೇಲೆ, ಬ್ರಾಹ್ಮಣರನ್ನು ಗೃಹದ ಸೀಮೆಯವರೆಗೆ ಅವರನ್ನು ಕಳಿಸಿ ಅವರಿಗೆ ಪ್ರದಕ್ಷಿಣೆ ಹಾಕಿ ಶ್ರಾದ್ಧಕರ್ತನು ಮನೆಗೆ ಬರಬೇಕು. ಪಿತೃಗಳು ಊಟಮಾಡಿ ಉಳಿದ ಅನ್ನವನ್ನು ಇಷ್ಟಮಿತ್ರರೊಡನೆ ಭೋಜನ ಮಾಡಬೇಕು. ಅಂದು ಶ್ರಾದ್ಧಮಾಡಿದವನು ಪುನಃ ಊಟ ಮಾಡಬಾರದು. ಅವನು ಆದಿನ ಬ್ರಹ್ಮಚಾರಿಯಾಗಿರಬೇಕು.[೬]

ಪಿತೃಗಳಿಗೆ ಕೊಟ್ಟ ಪಿಂಡವನ್ನು ಆಕಳಿಗೆ, ಆಡಿಗೆ, ಇಚ್ಛೆಪಡುವ ಬ್ರಾಹ್ಮಣನಿಗೆ ಕೊಡಬೇಕು. ಇಲ್ಲವೆ ಅಗ್ನಿಯಲ್ಲಿ ಅಥವಾ ಆಳವಾದ ನೀರಲ್ಲಿ ಹಾಕಬೇಕು. ಭೋಜನ ಸ್ಥಳದಲ್ಲಿ ಬ್ರಾಹ್ಮಣರಿದ್ದಾಗ ಉಚ್ಛಿಷ್ಟವನ್ನು ತೆಗೆಯಬಾರದು.[೭]

ಶ್ರಾದ್ಧಕರ್ಮಗಳಲ್ಲಿ ಮೃತಮನುಷ್ಯನ ಹೆಸರು ಉಚ್ಚರಿಸಿ ಪಿಂಡಗಳನ್ನು ಕೊಡುತ್ತಾರೆ. ಆ ಮನುಷ್ಯನೇ ಪಿತರಾದಿ ಶಬ್ದಗಳ ಮುಖ್ಯ ಅರ್ಥವೆಂದು ಭಾವಿಸಬಾರದು. ವಸು, ರುದ್ರ, ಆದಿತ್ಯ ಈ ಮೂವರು ಅಧಿಷ್ಠಾತೃದೇವತೆಗಳಿಂದ ಸಹಿತನಾದ ಮೃತ ಮನುಷ್ಯನು ಪಿತ್ರಾದಿ ಶಬ್ದಗಳ ಅರ್ಥವು. ಈ ಅಧಿಷ್ಠಾತೃ ದೇವತೆಗಳು ಪುತ್ರಾದಿಗಳು ಕೊಟ್ಟ ಅನ್ನ ಪಾನಾದಿಗಳಿಂದ ತೃಪ್ತರಾಗಿ ಮೃತಮನುಷ್ಯ ನನ್ನು ತೃಪ್ತಿಪಡಿಸುವರು. ವಸು, ರುದ್ರ, ಆದಿತ್ಯರು, ಪಿತೃ, ಪಿತಾಮಹ, ಪ್ರಪಿತಾಮಹ, ಉಚ್ಚಾರಿತರಾಗುವ ಪಿತೃಗಳು, ಅವರು ತೃಪ್ತರಾಗಿ ಶ್ರಾದ್ಧಕರ್ತನಿಗೆ ಆಯುರಾರೋಗ್ಯವನ್ನು, ಸಂತಾನವನ್ನೂ, ವಿದ್ಯೆಯನ್ನೂ, ರಾಜ್ಯವನ್ನೂ, ಸ್ವರ್ಗ ಮೋಕ್ಷಗಳ ಸುಖವನ್ನೂ ಕೊಡುವರು.[೮]

Rarest Archiver

ಅಡಿಟಿಪ್ಪಣಿಗಳು

೧. ಅಮಾವಾಸ್ಯಾಽಷ್ಟಕಾ ವೃದ್ಧಿಃ ಕೃಷ್ಣಪಕ್ಷೋಽಯನದ್ವಯಂ ।
ದ್ರವ್ಯಂ ಬ್ರಾಹ್ಮಣಸಂಪತ್ತಿರ್ವಿಷುವತ್ಸೂರ್ಯ ಸಂಕ್ರಮಃ ॥
ವ್ಯತೀಪಾತೋ ಗಜಚ್ಛಾಯಾ ಗ್ರಹಣಂ ಚಂದ್ರಸೂರ್ಯಯೋಃ ।
ಶ್ರಾದ್ಧಂ ಪ್ರತಿ ರುಚಿಶ್ಚೈವ ಶ್ರಾದ್ಧಕಾಲಾಃ ಪ್ರಕೀರ್ತಿತಾಃ ॥

೨. ಅಗ್ರ್ಯಾಃ ಸರ್ವೇಷು ವೇದೇಷು ಶ್ರೋತ್ರಿಯೋ ಬ್ರಹ್ಮವಿದ್ಯುವಾ ।
ವೇದಾರ್ಥವಿಜ್ಜ್ಯೇಷ್ಠ ಸಾಮಾ ತ್ರಿಮಧು ಸ್ತ್ರಿಸುಪರ್ಣಿಕಃ ॥
ಸ್ವಸ್ತ್ರೀಯ ಋತ್ವಿಗ್ಜಾಮಾತೃ ಯಾಜ್ಯಶ್ವಶುರ ಮಾತುಲಾಃ ।
ತ್ರಿಣಾಚಿಕೇತ ದೌಹಿತ್ರ ಶಿಷ್ಯ ಸಂಬಂಧಿ ಬಾಂಧವಾಃ ।
ಕರ್ಮನಿಷ್ಠಾಸ್ತಪೋನಿಷ್ಠಾ ಪಂಚಾಗ್ನಿರ್ಬ್ರಹ್ಮಚಾರಿಣಃ ।
ಪಿತೃಮಾತೃಪರಾಶ್ಚೈವ ಬ್ರಾಹ್ಮಣಾಃ ಶ್ರಾದ್ಧಸಂಪದಃ ।

೩. ನಿಮಂತ್ರಯೇತ ಪೂರ್ವೇದ್ಯುರ್ಬ್ರಾಹ್ಮಣಾನಾತ್ಮವಾನ್ ಶುಚಿಃ ।
ತೈಶ್ಚಾಪಿ ಸಂಯತೇರ್ಭಾವ್ಯಂ ಮನೋವಾಕ್ಕಾಯಕರ್ಮಭಿಃ ॥

೪. ಯುಗಾನ್‌ದೈವೇ ಯಥಾಶಕ್ತಿ ಪಿತ್ರೇಽಯುಗ್ಮಾಂಸ್ತಥೈವ ಚ ।
ಪರಿಸ್ತೃತೇ ಶುಚೌ ದೇಶೇ ದಕ್ಷಿಣಾಪ್ರವಣೇ ತಥಾ ॥

೫. ದತ್ವಾತು ದಕ್ಷಿಣಾಂ ಶಕ್ತ್ಯಾಸ್ವಧಾಕಾರಮುದಾಹರೇತ್
ವಾಚ್ಯತಾಮಿತ್ಯನುಜ್ಞಾತಃ ಪ್ರಕೃತೇಭ್ಯಃ ಸ್ವಧೋಚ್ಯತಾಂ ॥

೬. ಪ್ರದಕ್ಷಿಣಮನುವ್ರಜ್ಯ ಭುಂಜೀತ ಪಿತೃಸೇವಿತಂ ।
ಬ್ರಹ್ಮಚಾರೀ ಭವೇತ್ತಾಂ ತು ರಜನೀಂ ಬ್ರಾಹ್ಮಣೈಃಸಹ ॥

೭. ಪಿಂಡಾಂಸ್ತು ಗೋಽಜವಿಪ್ರೇಭ್ಯೋ ದದ್ಯಾದಗ್ನೌ ಜಲೇಽಪಿವಾ
ಪ್ರಕ್ಷಿಪೇತ್ ಸತ್ಸು ವಿಪ್ರೇಷು ದ್ವಿಜೋಚ್ಛಿಷ್ಟಂ ನ ಮಾರ್ಜಯೇತ್ ॥

೮. ವಸುರುದ್ರಾದಿತಿಸುತಾಃ ಪಿತರಃ ಶ್ರಾದ್ಧದೇವತಾಃ ।
ಪ್ರೀಣಯಂತಿ ಮನುಷ್ಯಾಣಾಂ ಪಿತೄನ್ ಶ್ರಾದ್ಧೇನ ತರ್ಪಿತಾಃ ॥
ಆಯುಃ ಪ್ರಜಾಂ ಧನಂ ವಿದ್ಯಾಂ ಸ್ವರ್ಗಂ ಮೋಕ್ಷಂ ಸುಖಾನಿ ಚ ।
ಪ್ರಯಚ್ಛಂತಿ ತಥಾ ರಾಜ್ಯಂ ಪ್ರೀತಾ ನೃಣಾಂ ಪಿತಾಮಹಾಃ ।

Rarest Archives

೧೫

ಮನುಸ್ಮೃತಿಯಲ್ಲಿ ಶ್ರಾದ್ಧದ ಕುರಿತಂತೆ ಪ್ರಮಾಣಗಳು

ಬ್ರಾಹ್ಮಣರಿಗೆ ದೇವ ಕಾರ್ಯಕ್ಕಿಂತಲೂ ಪಿತೃಕಾರ್ಯವು(ಶ್ರಾದ್ಧವು) ವಿಶಿಷ್ಟವಾದುದೆಂದು ತಿಳಿಯಬೇಕು.[೧]

ಶ್ರಾದ್ಧಕರ್ಮದಲ್ಲಿ ದೌಹಿತ್ರ(ಮಗಳಮಗ), ಕುತಪಕಾಲ, ಎಳ್ಳು ಈ ಮೂರು ವಸ್ತುಗಳು ಪವಿತ್ರಗಳೆಂದು ತಿಳಿಯಬೇಕು. ಹಾಗೆಯೇ ಶ್ರಾದ್ಧದಲ್ಲಿ ಶುದ್ಧಿ, ಸಿಟ್ಟು ಇಲ್ಲದಿರುವುದು, ಗಡಿಬಿಡಿ ಮಾಡದಿರುವುದು ಈ ಮೂರು ಪ್ರಶಸ್ತವೆಂದು ಹೇಳುತ್ತಾರೆ.[೨]

ಬ್ರಹ್ಮಚಾರಿ ವ್ರತಸ್ಥನಾಗಿದ್ದರೂ ಕೂಡ ಶ್ರಾದ್ಧಕರ್ಮದಲ್ಲಿ ಪ್ರಯತ್ನಪೂರ್ವಕವಾಗಿ ದೌಹಿತ್ರ(ಮಗಳಮಗ)ನಿಗೆ ಭೋಜನ ಮಾಡಿಸಬೇಕು.[೩]

ಶ್ರಾದ್ಧಭೋಜನವನ್ನು ಮಾಡಿ ಉಚ್ಛಿಷ್ಟವನ್ನು ಯಾವನು ಶೂದ್ರನಿಗೆ ಕೊಡುವನೋ ಅವನು ಮೂರ್ಖನು. ಅವನು ಕಾಲಸೂತ್ರ ನರಕದಲ್ಲಿ ಅಧೋಮುಖನಾಗಿ ಬೀಳುತ್ತಾನೆ.[೪]

ಪತಿವ್ರತೆಯಾದ, ಧರ್ಮಾರ್ಥಕಾಮಗಳಲ್ಲಿ ಮನೋವಾಕ್ಕಾಯಕರ್ಮಗಳಿಂದ ಪತಿಯ ಸೇವೆ ಮಾಡುವ ಧರ್ಮಪತ್ನಿಯು ಶ್ರಾದ್ಧಕರ್ಮದಲ್ಲಿ ಶ್ರದ್ಧೆಯುಳ್ಳ, ಅವಳು ಪುತ್ರಾರ್ಥಿಯಾಗಿ ಮೂರು ಪಿಂಡಗಳಲ್ಲಿ ಮಧ್ಯಮಪಿಂಡ(ಪಿತಾಮಹ ಪಿಂಡ ವನ್ನು)ವನ್ನು ಸ್ವೀಕರಿಸಬೇಕು.[೫]

ಶ್ರಾದ್ಧ ತಿಥಿಯು ಅಜ್ಞಾತವಾಗಿದ್ದರೆ ಕೃಷ್ಣಪಕ್ಷದಲ್ಲಿ ದಶಮೀ ಆರಂಭಿಸಿ ಚತುರ್ದಶಿಯನ್ನು ಬಿಟ್ಟು ಉಳಿದ ತಿಥಿಗಳು ಶ್ರಾದ್ಧಕರ್ಮದಲ್ಲಿ ಶ್ರೇಷ್ಠವೆಂದು ತಿಳಿಯಬೇಕು. ಉಳಿದ ತಿಥಿಗಳು ಅಷ್ಟು ಪ್ರಶಸ್ತವಲ್ಲ.[೬]

ರಾತ್ರಿಯಲ್ಲಿ ಶ್ರಾದ್ಧಕರ್ಮವನ್ನು ಮಾಡಕೂಡದು. ಅದು ಶ್ರಾದ್ಧವಿನಾಶನ ಗುಣವುಳ್ಳದ್ದರಿಂದ ಅದು "ರಾಕ್ಷಸೀ" ಎನಿಸಿಕೊಳ್ಳುತ್ತದೆ(ಗ್ರಹಣ ಕಾಲದಲ್ಲಿ ಈ ನಿಯಮ ಅನ್ವಯವಾಗುವುದಿಲ್ಲ).[೭]

ಶ್ರಾದ್ಧವಿಷಯದಲ್ಲಿ ಪೂರ್ವಪಕ್ಷಕ್ಕಿಂತ(ಶುಕ್ಲಪಕ್ಷಕ್ಕಿಂತ) ಅಪರಪಕ್ಷವು(ಕೃಷ್ಣಪಕ್ಷವು) ಶ್ರೇಷ್ಠವೆನಿಸಿದೆ. ಅದು ವಿಶಿಷ್ಟ ಫಲಕೊಡುತ್ತದೆ. ಹಾಗೆಯೇ ಶ್ರಾದ್ಧಕರ್ಮದಲ್ಲಿ ಪೂರ್ವಾಹ್ನಕ್ಕಿಂತ ಅಪರಾಹ್ನ ಕಾಲವು ವಿಶಿಷ್ಟವೆನಿಸಿದೆ.[೮]

Rarest Archiver

ಅಡಿಟಿಪ್ಪಣಿಗಳು

೧. ದೇವಕಾರ್ಯಾದ್ದ್ವಿಜಾತೀನಾಂ ಪಿತೃಕಾರ್ಯಂ ವಿಶಿಷ್ಯತೇ ॥ (೩–೨೦೩)

೨. ತ್ರೀಣಿ ಶ್ರಾದ್ಧೇ ಪವಿತ್ರಾಣಿ ದೌಹಿತ್ರಃ ಕುತಪಸ್ತಿಲಾಃ ।
ತ್ರೀಣಿ ಚಾತ್ರ ಪ್ರಶಂಸಂತಿ ಶೌಚಮಕ್ರೋಧಮತ್ವರಾಮ್ ॥ (೩–೨೩೫)

೩. ವ್ರತಸ್ಥೋಽಪಿ ದೌಹಿತ್ರಂ ಶ್ರಾದ್ಧೇ ಯತ್ನೇನ ಭೋಜಯೇತ್ (೩–೨೩೪)

೪. ಶ್ರಾದ್ಧಂ ಭುಕ್ತ್ವಾ ಯ ಉಚ್ಛಿಷ್ಟಂ ವೃಷಲಾಯ ಪ್ರಯಚ್ಛತಿ ।
ಸ ಮೂಢೋ ನರಕಂ ಯಾತಿ ಕಾಲಸೂತ್ರಮವಾಕ್‌ಶಿರಾ ॥ (೩–೨೪೯)

೫. ಪತಿವ್ರತಾ ಧರ್ಮಪತ್ನೀ ಪಿತೃಪೂಜನತತ್ಪರಾ ।
ಮಧ್ಯಮಂ ತು ತತಃ ಪಿಂಡಮದ್ಯಾತ್ ಸಮ್ಯಕ್ ಸುತಾರ್ಥಿನೀ ॥ (೩–೨೬೨)

೬. ಕೃಷ್ಣಪಕ್ಷೇ ದಶಮ್ಯಾದೌ ವರ್ಜಯಿತ್ವಾ ಚತುರ್ದಶೀಮ್ ।
ಶ್ರಾದ್ಧೇ ಪ್ರಶಸ್ತಾಸ್ತಿಥಯೋ ಯಥೈತಾ ನ ತಥೇತರಾಃ (೩–೨೭೬)

೭. ರಾತ್ರೌ ಶ್ರಾದ್ಧಂ ನ ಕುರ್ವೀತ ರಾಕ್ಷಸೀ ಕೀರ್ತಿತಾ ಹಿ ಸಾ । (೩–೨೮೦)

೮. ಯಥಾ ಚೈವಾಪರಃ ಪಕ್ಷಃ ಪೂರ್ವಪಕ್ಷಾದ್ವಿಶಿಷ್ಯತೇ ।
ತಥಾ ಶ್ರಾದ್ಧಸ್ಯ ಪೂರ್ವಾಹ್ಣಾದಪರಾಹ್ನೋ ವಿಶಿಷ್ಯತೇ ॥ (೩–೨೭೮)

* * *

Rarest Archive

ಹರಿಕಥಾಮೃತ ಸಾರದ ಜೀವನ ಪ್ರಕ್ರಿಯಾ ಸಂಧಿ
(ಪಿತೃಗಣಸಂಧಿ)

ಹರಿಕಥಾಮೃತಸಾರಗುರುಗಳ । ಕರುಣದಿಂದಾಪನಿತು ಪೇಳುವೆ ।
ಪರಮಭಗವದ್ಭಕ್ತರಿದನಾದರದಿ ಕೇಳುವದು ॥ ॥ಪ॥

ಕೃತಿರಮಣ ಪ್ರದ್ಯುಮ್ನ ವಸುದೇ । ವತೆಗಳಾಹಂಕಾರತ್ರಯದೊಳು ।
ಚತುರವಿಂಶತಿರೂಪದಿಂದಲಿ ಭೋಜ್ಯನೆನಿಸುವನು ॥
ಹುತವಹಾಕ್ಷಾಂತರ್ಗತ ಜಯಾ । ಪತಿಯು ತಾನೇ ಮೂರಧಿಕ ತ್ರಿಂ।
ಶತಿ ಸುರೂಪದಿ ಭೋಕ್ತೃಎನಿಸುವ ಭೋಕ್ತೃಗಳೊಳಿದ್ದು ॥೧॥

ಆರಧಿಕ ಮೂವತ್ತುರೂಪದಿ । ವಾರಿಜಾಪ್ತನೊಳಿರುತಿಹನು ಮಾ ।
ಯಾರಮಣ ಶ್ರೀವಾಸುದೇವನು ಕಾಲನಾಮದಲಿ ॥
ಮೂರುವಿಧ ಪಿತೃಗಳೊಳು ವಸು ತ್ರಿಪು । ರಾರಿ ಆದಿತ್ಯಗನಿರುದ್ಧನು ।
ತೋರಿಕೊಳ್ಳದೆ ಕರ್ತೃಕರ್ಮ ಕ್ರಿಯೆಗಳೊಳಗಿದ್ದು ॥೨॥

ಸ್ವವಶ ನಾರಾಯಣನು ತಾ ಷ । ಣ್ಣವತಿ ನಾಮದಿ ಕರೆಸುತಲಿ ವಸು ।
ಶಿವ ದಿವಾಕರ ಕರ್ತೃ ಕರ್ಮ ಕ್ರಿಯೆಗಳೊಳಗಿದ್ದು ॥
ನೆವನವಿಲ್ಲದೆ ನಿತ್ಯದಲ್ಲಿ ತ । ನ್ನವರು ಮಾಡುವ ಸೇವೆ ಕೈ ಕೊಂ ।
ಡವರಪಿತೃಗಳಿಗೀವನಂತಾನಂತ ಸುಖಗಳನು ॥೩॥

ತಂತುಪಟದಂದದಲಿ ಲಕುಮೀ । ಕಾಂತ ಪಂಚಾತ್ಮಕನೆನಿಸಿ ವಸು ।
ಕಂತುಹರ ರವಿ ಕರ್ತೃಗಳೊಳಗಿದ್ದನವರತ ತನ್ನ ॥
ಚಿಂತಿಸುವ ಸಂತರನು ಗುರುಮ । ಧ್ವಾಂತರಾತ್ಮಕ ಸಂತಯಿಸುವನು ।
ಸಂತತಖಿಳಾರ್ಥಗಳ ಪಾಲಿಸಿ ಇಹಪರಂಗಳಲಿ ॥೪॥

ತಂದೆತಾಯ್ಗಳ ಪ್ರೀತಿಗೋಸುಗ ನಿಂದ್ಯ ಕರ್ಮವ ತೊರೆದು ವಿಹಿತ ಗ ।
ಳೊಂದು ಮೀರದೆ ಸಾಂಗ ಕರ್ಮಗಳಾಚರಿಸುವವರು ।

Rarest Archiver

ವಂದನಿಯರಾಗಿಳೆಯೊಳಗೆ ದೈ । ನಂದಿನದಿ ದೈಶಿಕ ದಹಿಕ ಸುಖ ।
ದಿಂದ ಬಾಳ್ವರು ಬಹು ದಿವಸದಲಿ ಕೀರ್ತಿಯುತರಾಗಿ ॥೫॥

ಅಂಶಿ ಅಂಶಾಂತರ್ಗತ ತ್ರಯ । ಹಂಸವಾಹನ ಮುಖ್ಯದಿವಿಜರ ।
ಸಂಶಯದಿ ತಿಳದಂತರಾತ್ಮಕ ಶ್ರೀಜನಾರ್ದನನ ॥
ಸಂಸ್ಮರಣೆ ಪೂರ್ವಕದಿ ಷಡಧಿಕ । ತ್ರಿಂಶತಿ ತ್ರಯರೂಪವರಿತು ವಿ ।
ಪಾಂಸಗನ ಪೂಜಿಸುವರವರೆ ಕೃತಾರ್ಥರೆನಿಸುವರು ॥೬॥

ಮೂರುವರೆಸಾವಿರದ ಮೇಲರೆ । ನೂರಯಿದು ರೂಪದಿ ಜನಾರ್ದನ ।
ಸೂರಿಗಳು ಮಾಡುವ ಸಮಾರಾಧನೆಗೆ ವಿಘ್ನಗಳು ॥
ಬಾರದಂತೆ ಬಹುಪ್ರಕಾರ ಖ । ರಾರಿ ಕಾಪಾಡುವನು ಸರ್ವಶ ।
ರೀರಗಳೊಳಗಿದ್ದವರವರ ಪೆಸರಿಂದ ಕರೆಸುತಲಿ ॥೭॥

ಜಯ ಜಯ ಜಯಾಕಾಂತ ದತ್ತಾ । ತ್ರೇಯ ಕಪಿಲ ಮಹಿದಾಸ ಭಕ್ತ ।
ಪ್ರಿಯ ಪುರಾತನ ಪುರುಷ ಪೂರ್ಣಾನಂದ ಜ್ಞಾನಘನ ॥
ಹಯವದನ ಹರಿ ಹಂಸ ಲೋಕ । ತ್ರಯ ವಿಲಕ್ಷಣನಿಖಿಳಜಗದಾ।
ಶ್ರಯನಿರಾಮಯ ದಯದಿ ಸಂತೈಸೆಂದು ಪ್ರಾರ್ಥಿಪುದು ॥೮॥

ಷಣ್ಣವತಿಯೆಂಬಕ್ಷರೇಡ್ಯನು । ಷಣ್ಣವತಿನಾಮದಲಿ ಕರೆಸುತ ।
ತನ್ನವರು ಸದ್ಭಕ್ತಿಪೂರ್ವಕದಿಂದ ಮಾಡುತಿಹ ॥
ಪುಣ್ಯಕರ್ಮವ ಸ್ವೀಕರಿಸಿ ಕಾ । ರುಣ್ಯಸಾಗರ ಸಲಹುವನು ಬ್ರ ।
ಹ್ಮಣ್ಯದೇವ ಭವಾಬ್ಧಿಪೋತ ಬಹುಪ್ರಕಾರದಲಿ ॥೯॥

ದೇಹಗಳಕೊಡುವವನು ಅವರವ । ರಹರಗಳ ಕೊಡದಿಹನೆ ಸುಮನಸ ।
ಮಹಿತ ಮಂಗಳಚರಿತ ಸದ್ಗುಣಭರಿತನನವರತ ॥
ಅಹಿತ ಪಾರತ್ರಿಕ ಸುಖಪ್ರದ । ವೊಹಿಸಿ ಬೆನ್ನಲಿ ಬೆಟ್ಟವಮೃತವ ।
ದ್ರುಹಿಣ ಮೊದಲಾದಮರರಿಗುಣಿಸಿದ ಮುರಿದನಹಿತರನು ॥೧೦॥

ದ್ರುಹಿಣ ಮೊದಲಾದಮರರಿಗೆ ಸ । ನ್ಮಹಿತ ಮಾಯಾರಮಣ ತಾನೇ ।
ಸ್ವಹನೆನಿಸಿ ಸಂತೃಪ್ತಿಬಡಿಸುವ ಸರ್ವಕಾಲದಲಿ ॥
ಪ್ರಹಿತ ಸಂಕರ್ಷಣನು ಪಿತೃಗಳಿ । ಗಹರನೆನಿಪ ಸ್ವಧಾಖ್ಯರೂಪದಿ ।
ಮಹಿಜ ಫಲ ತೃಣ ಪೆಸರಿನಲಿ ಪ್ರದ್ಯುಮ್ನನನಿರುದ್ಧ ॥೧೧॥

ಅನ್ನನೆನಿಸುವ ನೃಪಶುಗಳಿಗೆ ಹಿ । ರಣ್ಯಗರ್ಭಾಂಡದೊಳು ಸಂತತ ।
ತನ್ನನೀಪರಿಯಿಂದುಪಾಸನೆ ಗೈವ ಭಕುತರನು ॥

Rarest Archives

ಬನ್ನಬಡಿಸದೆ ಭವಸಮುದ್ರ ಮ । ಹೋನ್ನತಿಯ ದಾಟಿಸಿ ಚತುರ್ವಿಧ ।
ಅನ್ನಮಯ ಆತ್ಮಪ್ರದರ್ಶನ ಸುಖವನೀವ ಹರೀ ॥೧೨॥

ಮನವಚನ ಕಾಯಗಳದೆಸೆಯಿಂ । ದನುದಿನದಿ ಬಿಡದಾಚರಿಸುತಿ ।
ಪ್ಪನುಚಿತೋಚಿತ ಕರ್ಮಗಳ ಸದ್ಭಕ್ತಿಪೂರ್ವಕದಿ ॥
ಅನಿಳದೇವನೊಳಿಪ್ಪ ನಾರಾ । ಯಣಗಿದನ್ನವು ಎಂದು ಕೃಷ್ಣಾ ।
ರ್ಪಣವೆನುತ ಕೊಡೆ ಸ್ವೀಕರಿಸಿ ಸಂತೈಪ ಕರುಣಾಳು ॥೧೩॥

ಏಳುವಿಧದನ್ನ ಪ್ರಕರಣವ । ಕೇಳಿ ಕೋವಿದರಾಸ್ಯದಿಂದಲಿ ।
ಆಲಸವ ಮಾಡದಲೆ ಅನಿರುದ್ಧಾದಿ ರೂಪಗಳ ॥
ಕಾಲಕಾಲದಿ ನೆನೆದು ಪೂಜಿಸು । ಸ್ಥೂಲಮತಿಗಳಿಗಿದನು ಪೇಳದೆ ।
ಶ್ರೀಲಕುಮಿವಲ್ಲಭನೆ ಅನ್ನಾದನ್ನ ಅನ್ನದನು ॥೧೪॥

ಎಂದರಿದು ಸಪ್ತಾನ್ನಗಳ ದೈ । ನಂದಿನದಿ ಮರೆಯದೆ ಸದಾ ಗೋ ।
ವಿಂದಗರ್ಪಿಸು ನಿರ್ಭಯದಿ ಮಹಯಜ್ಞವಿದು ಎಂದು ॥
ಇಂದಿರೇಶನು ಸ್ವೀಕರಿಸಿ ದಯ । ದಿಂದ ಬೇಡಿಸಿಕೊಳದೆ ತವಕದಿ ।
ತಂದು ಕೊಡುವನು ಪರಮ ಸುಖಗಳ ತನ್ನ ದಾಸರಿಗೆ ॥೧೫॥

ಸೂಜಿ ಕರದಲಿ ಪಿಡಿದು ಸಮರವ । ನಾ ಜಯಿಸುವೆನೆಂಬ ನರನಂ।
ತೀ ಜಗತ್ತಿನೊಳುಳ್ಳ ಅಜ್ಞಾನಿಗಳು ನಿತ್ಯದಲಿ ॥
ಶ್ರೀಜಗತ್ಪತಿ ಚರಣಯುಗಳ ಸ । ರೋಜ ಭಕ್ತಿಜ್ಞಾನಪೂರ್ವಕ ।
ಪೂಜಿಸದೆ ಧರ್ಮಾರ್ಥಕಾಮವ ಬಯಸಿ ಬಳಲುವರು ॥೧೬॥

ಶಕಟಭಂಜನ ಸಕಲ ಜೀವರ । ನಿಕಟಿಗನು ತಾನಾಗಿ ಲೋಕಕೆ ।
ಪ್ರಕಟನಾಗದೆ ಸಕಲ ಕರ್ಮವ ಮಾಡಿ ಮಾಡಿಸುತ ॥
ಅಕುಟಿಲಾತ್ಮಕ ಭಕುತ ಜನರಿಗೆ । ಸುಖದ ನೆನಿಸುವ ಸರ್ವಕಾಲದಿ ।
ಅಕಟಕಟ ಈತನ ಮಹಾಮಹಿಮೆಗಳಿಗೇನೆಂಬೆ ॥೧೭॥

ಶ್ರೀಲಕುಮಿವಲ್ಲಭನು ವೈಕುಂ । ಠಾಲಯದಿ ಪ್ರಣವ ಪ್ರಕೃತಿ ಕೀ ।
ಲಾಲಜಾಸನ ಮುಖ್ಯ ಚೇತನರೊಳಗೆ ನೆಲೆಸಿದ್ದು ॥
ಮೂಲಕಾರಣ ಅಂಶಿನಾಮದಿ । ಲೀಲೆಗೈಸುತ ತೋರಿಕೊಳ್ಳದೆ ।
ಪಾಲಿನೊಳು ಘೃತವಿದ್ದ ತೆರದಂತಿಪ್ಪ ತ್ರಿಸ್ಥಳದಿ ॥೧೮॥

ಮೂರುಯುಗದಲಿ ಮೂಲರೂಪನು । ಸೂರಿಗಳ ಸಂತೈಸಿ ದಿತಿಯ ಕು ।
ಮಾರಕರ ಸಂಹರಿಸಿ ಧರ್ಮವನುಳುಹಬೇಕೆಂದು ॥

Rarest Archiver

ಕಾರುಣಿಕ ಭೂಮಿಯೊಳು ನಿಜಪರಿ । ವಾರಸಹಿತವತರಿಸಿ ಬಹುವಿಧ ।
ತೋರಿದನು ನರವತ್ಪ್ರ ವೃತ್ತಿಯ ಸಕಲ ಚೇತನಕೆ ॥೧೯॥

ಕಾರಣಾಹ್ವಯ ಪ್ರಕೃತಿಯೊಳಗಿ । ದ್ದಾರಧಿಕ ಹದಿನೆಂಟು ತತ್ವವ ।
ತಾರಚಿಸಿ ತದ್ರೂಪ ತನ್ನಾಮಂಗಳನೆ ಧರಿಸಿ ॥
ನೀರಜಭವಾಂಡವನು ನಿರ್ಮಿಸಿ । ಕಾರುಣಿಕ ಕಾರ್ಯಾಖ್ಯರೂಪದಿ।
ತೋರುವನು ಸಹಜಾಹಿತಾಚಲಗಳಲಿ ಪ್ರತಿದಿನದಿ ॥೨೦॥

ಜೀವರಂತರ್ಯಾಮಿ ಅಂಶಿ ಕ । ಳೇವರಗಳೊಳಗಿಂದ್ರಿಯಗಳಲಿ ।
ತಾ ವಿಹಾರವಗೈಯುತನುದಿನ ಅಂಶನಾಮದಲಿ ॥
ಈ ವಿಷಯಗಳನುಂಡು ಸುಖಮಯ । ಈವ ಸುಖ ಸಂಸಾರ ದುಃಖವ ।
ದೇವದಾನವ ಮಾನವರಿಗವಿರತ ಸುದಾಮಸಖ ॥೨೧॥

ದೇಶದೇಶವ ಸುತ್ತಿ ದೇಹಾ । ಯಾಸ ಗೊಳಿಸದೆ ಕಾಮ್ಯಕರ್ಮ ದು ।
ರಾಶೆಗೊಳಗಾಗದಲೆ ಬ್ರಹ್ಮಾದ್ಯಖಿಳ ಚೇತನರು ॥
ಭೂಸಲಿಲ ಪಾವಕ ಸಮೀರಾ । ಕಾಶ ಮೊದಲಾದಖಿಳ ತತ್ವ ಪ ।
ರೇಶಗಿವಧಿಷ್ಠಾನವೆಂದರಿದರ್ಚಿಸನವರತ ॥೨೨॥

ಎರಡುವಿಧದಲಿ ಲೋಕದೊಳು ಜೀ । ವರುಗಳಿಪ್ಪರು ಸಂತತ ಕ್ಷರಾ ।
ಕ್ಷರ ವಿಲಿಂಗ ಸಲಿಂಗ ಸೃಜ್ಯಾಸೃಜ್ಯಭೇದದಲಿ ।
ಕರೆಸುವದು ಜಡಪ್ರಕೃತಿ ಪ್ರಣವಾ । ಕ್ಷರ ಮಹಾಅಣುಕಾಲ ನಾಮದಿ ।
ಹರಿಸಹಿತ ಭೇದಗಳ ಪಂಚಕ ಸ್ಮರಿಸು ಸರ್ವತ್ರ ॥೨೩॥

ಜೀವ ಜೀವರ ಭೇದ ಜಡ ಜಡ । ಜೀವ ಜಡಗಳ ಭೇದ ಪರಮನು ।
ಜೀವ ಜಡ ಸುವಿಲಕ್ಷಣನುಯೆಂದರಿದು ನಿತ್ಯದಲಿ ॥
ಈ ವಿರಿಂಚಾಂಡದೊಳು ಎಲ್ಲಾ । ಠಾವಿನಲಿ ತಿಳಿದೈದು ಭೇದ ಕ।
ಳೇವರದೊಳರಿತಚ್ಯುತನ ಪದವೈದು ಶೀಘ್ರದಲಿ ॥೨೪॥

ಆದಿಯಲ್ಲಿ ಕ್ಷರಾಕ್ಷರಾಖ್ಯ । ದ್ವೇಧ ಅಕ್ಷರದೊಳು ರಮಾ ಮಧು ।
ಸೂದನರು ಕ್ಷರಗಳೊಳು ಪ್ರಕೃತಿ ಪ್ರಣವ ಕಾಲಗಳು ॥
ವೇದ ಮುಖ್ಯ ತೃಣಾಂತ ಜೀವರ । ಭೇದಗಳನರಿತೀ ರಹಸ್ಯವ ।
ಬೋಧಿಸದೆ ಮಂದರಿಗೆ ಸರ್ವತ್ರದಲಿ ಚಿಂತಿಪುದು ॥೨೫॥

ದೀಪದಿಂ ದೀಪಗಳು ಪೊರಮ । ಟ್ಟಾಪಣಾಲಯಗತ ತಿಮಿರಗಳ ।
ತಾಪರಿಹರಿಸಿ ತದ್ಗತ ಪದಾರ್ಥ ತೋರ್ಪಂತೆ ॥

Rarest Archiver

ಸೌಪರಣಿವರವಹನ ತಾ ಬಹು । ರೂಪ ನಾಮದಿ ಎಲ್ಲ ಕಡೆಯಲಿ ।
ವ್ಯಾಪಿಸಿರ್ದು ಯಥೇಷ್ಟ ಮಹಿಮೆಯ ತೋರ್ಪತಿಳಿಸದಲೆ ॥೨೬॥

ನಳಿನಮಿತ್ರಗೆ ಇಂದ್ರಧನು ಪ್ರತಿ । ಫಲಿಸುವಂತೆ ಜಗತ್ರಯವು ಕಂ ।
ಗೊಳಿಪದನುಪಾಧಿಯಲಿ ಪ್ರತಿಬಿಂಬಾಹ್ವಯದಿ ಹರಿಗೆ ॥
ತಿಳಿಯೆ ತ್ರಿಕಕುದ್ಧಾಮನತಿ ಮಂ । ಗಳಸುರೂಪವ ಸರ್ವ ಠಾವಿಲಿ ।
ಪೊಳೆವ ಹೃದಯಕೆ ಪ್ರತಿದಿವಸ ಪ್ರಲ್ಹಾದ ಪೋಷಕನು ॥೨೭॥

ರಸವಿಶೇಷದೊಳತಿವಿಮಲ ಸಿತ । ವಸನ ತೋಯಿಸಿ ಅಗ್ನಿಯೊಳಗಿಡೆ ।
ಪಸರಿಸುವದು ಪ್ರಕಾಶ ನಸುಗುಂದದಲೆ ಸರ್ವತ್ರ ॥
ತ್ರಿಶಿರದೂಷಣ ವೈರಿ ಭಕ್ತಿ ಸು । ರಸದಿ ತೋಯ್ದು ಮಹಾತ್ಮರನು ಬಾ ।
ಧಿಸವು ಭವದೊಳಗಿದ್ದರಿಯು ಸರಿ ದುರಿತರಾಶಿಗಳು ॥೨೮॥

ವಾರಿನಿಧಿಯೊಳಗಖಿಳ ನದಿಗಳು । ಬೇರೆ ಬೇರೆ ನಿರಂತರದಲಿ ವಿ।
ಹಾರಗೈಯುತ ಪರಮ ಮೋದದಲಿಪ್ಪ ತೆರದಂತೆ ॥
ಮೂರುಗುಣಗಳ ಮಾನಿಯೆನಿಸುವ । ಶ್ರೀರಮಾರೂಪಗಳು ಹರಿಯಲಿ ।
ತೋರುತಿಪ್ಪವು ಸರ್ವಕಾಲದಿ ಸಮರಹಿತವೆನಿಸಿ ॥೨೯॥

ಕೋಕನದ ಸಖನುದಯ ಘೂಕಾ । ಲೋಕನಕೆ ಸೊಗಸದಿರೆ ಭಾಸ್ಕರ ।
ತಾ ಕಳಂಕನೆ ಈ ಕೃತಿಪತಿ ಜಗನ್ನಾಥನಿರೆ ॥
ಸ್ವೀಕರಿಸಿ ಸುಖಬಡಲರಿಯದವಿ । ವೇಕಿಗಳು ನಿಂದಿಸಿದರೇನಹು ।
ದೀಕವಿತ್ವವ ಕೇಳಿ ಸುಖ ಬಡದಿಹರೆ ಕೋವಿದರು ॥೩೦॥

ಚೇತನಾಚೇತನಗಳಲಿ ಗುರು । ಮಾತರಿಶ್ವಾಂತರ್ಗತ ಜಗ ।
ನ್ನಾಥವಿಠಲ ನಿರಂತರದಿ ವ್ಯಾಪಿಸಿ ತಿಳಿಸಿಕೊಳದೆ ॥
ಕಾತರವ ಪುಟ್ಟಿಸಿ ವಿಷಯದಲಿ । ಯಾತುಧಾನರ ಮೋಹಿಸುವ ನಿ ।
ರ್ಭೀತ ನಿತ್ಯಾನಂದಮಯ ನಿರ್ದೋಷ ನಿರವದ್ಯ ॥೩೧॥

॥ ಶ್ರೀಗುರು ಶ್ರೀಮಧ್ವೇಶಾರ್ಪಿತಮಸ್ತು ॥

Rarest Archiver

ಶ್ರೀಹರಿಕಥಾಮೃತಸಾರ-ಪಿತೃಗಣಸಂಧಿ
ಪರಿಚಯ

ಪೀಠಿಕೆ

ಇಲ್ಲಿ ಮೊದಲು ಪಿತೃಗಳು ಮತ್ತು ಪಿತೃಗಣಗಳ ಪರಿಚಯವನ್ನು ಮಾಡಿಕೊಡಲಾಗುವುದು.

ಪಿತೃಗಳು ಎಂಬ ಹೆಸರಿನ ಒಂದು ಗಣವಿರುತ್ತದೆ. ಅವರು ಬ್ರಹ್ಮದೇವರ ಮಕ್ಕಳು. ಅವರನ್ನು ದೇವತೆಗಳು, ಮನುಷ್ಯರು ಎಲ್ಲರೂ ಪೂಜಿಸುತ್ತಾರೆ. ಇವರನ್ನು ಕುರಿತು ಶ್ರಾದ್ಧ ಮಾಡಿದರೆ ಮೃತರಾದ ಜೀವರು ಎಲ್ಲಿದ್ದರೂ ಅವರಿಗೆ ತೃಪ್ತಿಯುಂಟಾಗುವಂತೆ ಮಾಡುತ್ತಾರೆ. ಅದು ಹೇಗೆ? ಎಂದರೆ ಮೃತರಾದವರ ನಾಮ, ಗೋತ್ರಗಳನ್ನು ಹೇಳಿ ಪಿಂಡಪ್ರದಾನ ಮಾಡಿದರೆ ಪಿತೃದೇವತೆಗಳು, ಆ ಮೃತರಾದ ಜೀವರು ಯಾವ ಯೋನಿಯಲ್ಲಿದ್ದರೂ ಅವರಿಗೆ ಯೋಗ್ಯವಾದ ಆಹಾರವನ್ನು ತಲುಪಿಸಿ ತೃಪ್ತಿಪಡಿಸುತ್ತಾರೆ. ಹೇಗೆಂದರೆ ಪಿತೃಗಳು ದೇವಲೋಕದಲ್ಲಿದ್ದರೆ ಅವರಿಗೆ 'ಅಮೃತ' ರೂಪದಲ್ಲಿ ಮುಟ್ಟಿಸುತ್ತಾರೆ. ಪಿತೃಗಳು ಮನುಷ್ಯರಾಗಿ ಹುಟ್ಟಿದ್ದರೆ ಒಳ್ಳೆಯ 'ಅನ್ನ'ದ ರೂಪದಲ್ಲಿ, ಪಶುರೂಪದಲ್ಲಿದ್ದರೆ ಹುಲ್ಲಾಗಿ, 'ಪಕಿ' ರೂಪದಲ್ಲಿದ್ದರೆ 'ಕಾಳಿನ' ರೂಪದಲ್ಲಿ, ಸರ್ಪವಾಗಿದ್ದರೆ 'ವಾಯು' ರೂಪದಲ್ಲಿ ಅದನ್ನು ಮುಟ್ಟಿಸುತ್ತಾರೆ. ಇದರಿಂದ ಶ್ರಾದ್ಧ ಮಾಡಿದವರಿಗೆ ಆ ಪಿತೃಗಳು ಹರಸುತ್ತಾರೆ. ಶ್ರಾದ್ಧಕರ್ತೃವಿಗೆ ಮಕ್ಕಳು, ಸಂಪತ್ತು ಇತ್ಯಾದಿಗಳು ಲಭ್ಯವಾಗುತ್ತವೆ.

ಶ್ರೀಹರಿವಂಶದಲ್ಲಿ ಪಿತೃದೇವತೆಗಳ ಕಥೆ ಬಂದಿದೆ.

ಪೂರ್ವದಲ್ಲಿ ಬ್ರಹ್ಮದೇವರು ದೇವತೆಗಳನ್ನು ಸೃಷ್ಟಿಮಾಡಿದರು. ದೇವತೆಗಳೆಲ್ಲರೂ ತಮ್ಮನ್ನು ಪೂಜಿಸುವರೆಂಬ ಭಾವನೆ ಅವರಿಗಿತ್ತು. ಆದರೆ ದೇವತೆಗಳು ಬ್ರಹ್ಮದೇವರನ್ನು ಪೂಜಿಸುವುದನ್ನು ಬಿಟ್ಟು ಇಂದ್ರಿಯಸುಖದಲ್ಲಿ ಆಸಕ್ತರಾಗಿ ಇದ್ದುಬಿಟ್ಟರು. ಆಗ ಬ್ರಹ್ಮದೇವರು ಅವರಿಗೆ ಶಾಪ ಕೊಟ್ಟರು. ಶಾಪದ ಫಲವಾಗಿ ದೇವತೆಗಳು ಜ್ಞಾನಹೀನರಾದರು. ದೇವತೆಗಳು ಜ್ಞಾನಹೀನರಾಗಲು ಅವರನ್ನು ಅನುಸರಿಸಿ ಇದ್ದವರೆಲ್ಲರೂ ಜ್ಞಾನಹೀನರಾಗಿಬಿಟ್ಟರು. ತರುವಾಯ ದೇವತೆಗಳು ಬ್ರಹ್ಮದೇವರನ್ನು ನಮಸ್ಕರಿಸಿ ಕ್ಷಮೆಯಾಚನೆ ಮಾಡಿದರು. ಮತ್ತು ಜ್ಞಾನವನ್ನು ಅನುಗ್ರಹಿಸಲು ಬೇಡಿಕೊಂಡರು. ಆಗ ಬ್ರಹ್ಮದೇವರು ದೇವತೆಗಳಿರಾ! ನೀವು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.

Rarest Archiver

"ನಿಮ್ಮ ಮಕ್ಕಳ ಹತ್ತಿರ ಹೋಗಿ ಕೇಳಿರಿ. ಅವರು ಹೇಳಿದಂತೆ ಪ್ರಾಯಶ್ಚಿತ್ತ ಮಾಡಿಕೊಂಡು ಜ್ಞಾನವನ್ನು ಪಡೆಯಿರಿ" ಎಂದರು.

ದೇವತೆಗಳು ತಮ್ಮ ಮಕ್ಕಳ ಹತ್ತಿರ ಹೋದರು. ಆ ದೇವತೆಗಳ ಮಕ್ಕಳು ತಮ್ಮ ತಂದೆಗಳಾದ ದೇವತೆಗಳಿಗೆ ಪ್ರಾಯಶ್ಚಿತ್ತವನ್ನು ಹೇಳಿ ವಿಸ್ತಾರವಾಗಿ ಉಪದೇಶಿಸಿ "ಮಕ್ಕಳೇ ಹೋಗಿ ಬನ್ನಿರಿ" ಎಂದರು. ಇದನ್ನು ಕೇಳಿ ದೇವತೆಗಳಿಗೆ ಅವಮಾನ ವೆನಿಸಿತು. ಕೋಪವೂ ಬಂದಿತು. ನಮಗೆ ಮಕ್ಕಳಾಗಿ ಹುಟ್ಟಿ ತಂದೆಗಳಾದ ನಮ್ಮನ್ನು ಮಕ್ಕಳೇ! ಎಂದು ಸಂಬೋಧನೆ ಮಾಡಿದಿರಲ್ಲ, ಇದು ಸರಿಯಲ್ಲ ಎಂದುಕೊಂಡು ಮನಸ್ಸಿನಲ್ಲಿ ನೊಂದುಕೊಂಡವರಾಗಿ ಬ್ರಹ್ಮದೇವರ ಹತ್ತಿರ ಬಂದು ನಡೆದ ವೃತ್ತಾಂತವನ್ನು ತಿಳಿಸಿದರು. ಆಗ ಬ್ರಹ್ಮದೇವರು "ದೇವತೆಗಳೇ! ಜ್ಞಾನವನ್ನು ಯಾರು ಉಪದೇಶಿಸುವರೋ ಅವರು ತಂದೆ ಎನಿಸುತ್ತಾರೆ. ನಿಮ್ಮ ಮಕ್ಕಳು ಪ್ರಾಯಶ್ಚಿತ್ತವನ್ನು ಉಪದೇಶಿಸಿ ನಿಮಗೆ ಜ್ಞಾನವನ್ನು ನೀಡಿದ್ದಾರೆ. ಆದ್ದರಿಂದ ಅವರು ನಿಮಗೆ ತಂದೆಗಳಾಗುತ್ತಾರೆ" ಎಂದು ಹೇಳಿದರು.

ಜನಿತಾ ಚೋಪನೇತಾ ಚ ಯಸ್ತು ವಿದ್ಯಾಂ ಪ್ರಯಚ್ಛತಿ।
ಅನ್ನದಾತಾ ಭಯತ್ರಾತಾ ಪಂಚೈತೇ ಪಿತರಃ ಸ್ಮೃತಾಃ ॥

ಈ ಕಾರಣದಿಂದ ಅವರು ನಿಮ್ಮನ್ನು 'ಮಕ್ಕಳೇ' ಎಂದು ಸಂಬೋಧಿಸಿರುವುದು ಸರಿಯೇ. ನಿಮ್ಮ ಮಕ್ಕಳು ನಿಮಗೆ ಉಪದೇಶಿಸಿ ವಿದ್ಯೆ ನೀಡಿದ ಕಾರಣ ಅವರು 'ಪಿತೃಗಳು' ಎಂದು ಕರೆಯಲ್ಪಡುತ್ತಾರೆ.

ದೇವತೆಗಳು ಬ್ರಹ್ಮದೇವರ ಮಾತನ್ನು ಕೇಳಿ ಅವರಿಗೆ ನಮಸ್ಕರಿಸಿ ತಮ್ಮ ಮಕ್ಕಳ ಹತ್ತಿರ ಬಂದು ನಡೆದ ವಿಷಯವನ್ನು ತಿಳಿಸಿ ಅವರಿಗೆ "ನೀವು ಇನ್ನು ಮುಂದೆ ಪಿತೃದೇವತೆಗಳು" ಎಂದು ಪ್ರಸಿದ್ಧರಾಗಿರೆಂದು ಹೇಳಿ ಅಲ್ಲಿಂದ ಹೊರಟು ಹೋದರು.

ಈ ಪಿತೃದೇವತೆಗಳನ್ನು ಉದ್ದೇಶಿಸಿ ಶ್ರಾದ್ಧ ಮಾಡುವುದರಿಂದ ಮಾನವರು ಉತ್ತಮ ಫಲಗಳನ್ನು ಹೊಂದುತ್ತಾರೆ.

ಪಿತೃಗಣಗಳು–ಪರಿಚಯ

ಪಿತೃಗಳು ಏಳುಗಣದವರು ಇರುತ್ತಾರೆ. ವೈರಾಜ, ಅಗ್ನಿಷ್ವಾತ್ತ, ಬರ್ಹಿಷದ ಹೆಸರುಳ್ಳ ಮೂರುಗಣದ ಪಿತೃಗಳು ಸೂಕ್ಷ್ಮದೇಹವುಳ್ಳವರು. ಸುಕಾಲ, ಅಂಗಿರಸ, ಸುಸ್ವಧಾ ಮತ್ತು ಸೋಮಪಾ ಹೆಸರುಳ್ಳ ನಾಲ್ಕುಗಣದ ಪಿತೃಗಳು ಸ್ಥೂಲದೇಹ ವುಳ್ಳವರು.

'ವೈರಾಜ' ಹೆಸರಿನ ಪಿತೃಗಳು ಮೊದಲಗಣದವರು. ಇವರು ವಿರಾಜ ಎಂಬ ಪ್ರಜಾಪತಿಯ ಮಾನಸಪುತ್ರರು. ಇವರಿಗೆ 'ಮೇನಾ' ಎಂಬ ಮಾನಸಕನ್ಯೆ ಹುಟ್ಟಿದಳು. ಇವಳು ಹಿಮವಂತನಿಗೆ ಪತ್ನಿಯಾದಳು. ಇವಳ ಮಗನೇ ಮೈನಾಕ. ಮೇನೆಯಲ್ಲಿ ಹಿಮವಂತನಿಂದ ಅಪರ್ಣಾ, ಏಕಪರ್ಣಾ ಮತ್ತು ಏಕಪಾಟಲಾ ಎಂಬ ಮೂರು

Rarest Archiver

ಕನ್ಯೆಯರು ಜನಿಸಿದರು. ಈ ಮೂವರು ಕನ್ಯೆಯರು ದೇವದಾನವರಿಂದ ಅಸಾಧ್ಯವಾದ ಕಠಿಣ ತಪಸ್ಸನ್ನು ಆಚರಿಸುತ್ತಿದ್ದರು. ಏಕಪರ್ಣೆಯು ಒಂದೇ ಎಲೆಯನ್ನು ತಿಂದು ತಪಸ್ಸು ಮಾಡುತ್ತಿದ್ದಳು. ಏಕಪಾಟಲೆಯು ಒಂದೇ ಒಂದು ಪುಷ್ಪವನ್ನು ತಿಂದು ತಪಸ್ಸು ಮಾಡುತಿದ್ದಳು. ಅಪರ್ಣೆಯು ಉಪವಾಸದಿಂದ ತಪಸ್ಸು ಮಾಡುತ್ತಿದ್ದಳು. ಇವಳನ್ನು ನೋಡಿ ತಾಯಿಯು ಅತಿದುಃಖದಿಂದ ಉಮಾ ಎಂದು ತಡೆದಳು. ಉ=ಎಲೇಮಗಳೇ, ಮಾ=ತಪಸ್ಸು ಮಾಡಬೇಡ. ಈ ರೀತಿಯಾಗಿ ಅವಳನ್ನು ಸಂಬೋಧಿಸಿದ ಪ್ರಯುಕ್ತ ಅಪರ್ಣೆಗೆ 'ಉಮಾ' ಎಂದು ಹೆಸರಾಯಿತು. ಈ ಮೂವರು ಪುತ್ರಿಯರಲ್ಲಿ 'ಉಮಾ' ಶ್ರೇಷ್ಠಳು. ಇವಳು ರುದ್ರ(ಶಿವ) ದೇವರಿಗೆ ಪತ್ನಿಯಾದಳು. ಏಕಪರ್ಣೆಯು ದೇವಲರ ಪತ್ನಿಯಾದಳು. ಏಕಪಾಟಲೆಯು ಜೈಗೀಷವ್ಯರ ಪತ್ನಿಯಾದಳು.

'ಅಗ್ನಿಷ್ವಾತ್ತ' ಹೆಸರಿನ ಪಿತೃಗಳು ಎರಡನೆಯ ಗಣದವರು. ಇವರು 'ಸೋಮಪದ' ಎಂಬ ಲೋಕದಲ್ಲಿರುತ್ತಾರೆ. ಇವರು ಮರೀಚಿ ಋಷಿಗಳ ಮಕ್ಕಳು. ಇವರನ್ನು ದೇವತೆಗಳೂ ಪೂಜಿಸುತ್ತಾರೆ. ಇವರಿಗೆ 'ಅಚ್ಛೋದಾ' ಎಂಬ ಮಗಳು ಹುಟ್ಟಿದಳು. ಇವಳು ನದೀದೇವತೆಯು. ಇವಳಿಂದ ಅಚ್ಛೋದಾ ಎಂಬ ಸರೋವರವು ನಿರ್ಮಾಣವಾಯಿತು. ಹುಟ್ಟಿದಾರಭ್ಯ ಇವಳು ತಂದೆಯನ್ನು ತಿಳಿದಿರಲಿಲ್ಲ. ಒಂದು ದಿನ ಆಕಾಶದಲ್ಲಿ ವಿಮಾನ ವೊಂದನ್ನು ನೋಡಿದಳು. ಆ ವಿಮಾನದಲ್ಲಿ ಅದ್ರಿಕಾ ಎಂಬ ಅಪ್ಸರಾಸ್ತ್ರೀಯು ಕುಳಿತಿದ್ದಳು. ಅವಳ ಜೊತೆ ಉಪರಿಚರ ಎಂಬ ವಸುರಾಜ ಕುಳಿತಿದ್ದನು. ಹೀಗೆ ವಿಮಾನದಲ್ಲಿ ಕುಳಿತು ಹೋಗುತ್ತಿದ್ದ ವಸುರಾಜನನ್ನು ನೋಡಿ 'ಇವನೇ ನನ್ನ ತಂದೆ' ಎಂದು ತಿಳಿದಳು. ಇನ್ನೊಬ್ಬ ಪುರುಷನನ್ನು ತಪ್ಪಾಗಿ ತನ್ನ ತಂದೆಯೆಂದು ತಿಳಿದ ಪ್ರಯುಕ್ತ ಯೋಗಭ್ರಷ್ಟಳಾಗಿ ಕೆಳಗೆ ಬಿದ್ದಳು. ಹೀಗೆ ಅವಳು ಕೆಳಗೆ ಬೀಳುತ್ತಿರುವಾಗ ಅತಿಸೂಕ್ಷ್ಮವಾದ ಮೂರು ವಿಮಾನಗಳನ್ನು ನೋಡಿದಳು. ಆ ವಿಮಾನಗಳಲ್ಲಿ ಕುಳಿತಿರುವ ತನ್ನ ಪಿತೃಗಳನ್ನು ನೋಡಿ ಕೂಡಲೇ ಕೈಯೆತ್ತಿ ಸ್ವಾಮೀ! ನನ್ನನ್ನು ರಕ್ಷಿಸಿರಿ, ರಕ್ಷಿಸಿರಿ ಎಂದು ಬೇಡಿಕೊಂಡಳು. ಅವರು 'ಮಗಳೇ ಹೆದರಬೇಡ' ಎಂದು ಸಂತೈಸಿದರು. ಅವಳು ಆಕಾಶದಲ್ಲೇ ನಿಂತಳು. ನಂತರ ಇವರೇ ತನ್ನ ಪಿತೃಗಳೆಂದು ಖಾತ್ರಿಯಾಯಿತು. ಆ ಪಿತೃಗಳು ಮಗಳೇ! ನೀನು ಅಜ್ಞಾನ ಮೂಲಕ ಒಬ್ಬ ಸಾಮಾನ್ಯ ಮನುಷ್ಯನನ್ನು ತಂದೆಯೆಂದು ಭಾವಿಸಿರುವ ಪ್ರಯುಕ್ತ ನೀನು ಯೋಗಭ್ರಷ್ಟಳಾಗಿ ಬೀಳುತ್ತಿರುವಿ ಹೆದರಬೇಡ. "ನೀನು ಯಾರನ್ನು ತಂದೆಯೆಂದು ಭಾವಿಸಿದೆಯೋ ಆ ವಸುರಾಜನಿಗೆ ಮಗಳಾಗಿ ಹುಟ್ಟುವಿ. ಈ ಅದ್ರಿಕೆಯು ಮೀನಾಗಿ ಹುಟ್ಟಲಿದ್ದಾಳೆ. ಮೀನಿನ ಹೊಟ್ಟೆಯಿಂದ ನೀನು ಹುಟ್ಟಿಬರುವಿ. ನಂತರ ಭೂಮಿಯಲ್ಲಿ ಪರಾಶರರನ್ನು ಹೊಂದಿ ಸಾಕ್ಷಾತ್ ಭಗವಂತನನ್ನು 'ವೇದವ್ಯಾಸ' ರೂಪದಿಂದ ಮಗನನ್ನಾಗಿ ಪಡೆಯುವಿ ಮತ್ತು ಶಂತನುರಾಜನನ್ನು ವಿವಾಹ ಮಾಡಿಕೊಂಡು ಚಿತ್ರಾಂಗದ ಮತ್ತು ವಿಚಿತ್ರವೀರ್ಯ ಎಂಬ ಇಬ್ಬರು ಮಕ್ಕಳನ್ನು ಪಡೆಯುವಿ. ನಂತರ ನೀನು ಉತ್ತಮ ಲೋಕಗಳನ್ನು ಹೊಂದುವಿ" ಎಂದು ಹೇಳಿ ಸಂತೈಸಿದರು.

Rarest Archiver

ಅದೇ ರೀತಿಯಾಗಿ ಅಚ್ಛೋದೆಯು ಸತ್ಯವತಿಯಾಗಿ ಹುಟ್ಟಿ ಪರಾಶರರಿಂದ ವೇದವ್ಯಾಸರನ್ನು ಮಗನಾಗಿ ಪಡೆದು, ನಂತರ ಶಂತನು ಮಹಾರಾಜರನ್ನು ಮದುವೆಯಾಗಿ ಇಬ್ಬರು ಮಕ್ಕಳನ್ನು ಪಡೆದವಳಾಗಿ ಉತ್ತಮ ಲೋಕವನ್ನು ಹೊಂದಿದಳು.

'ಬರ್ಹಿಷದ' ಹೆಸರಿನ ಪಿತೃಗಳು ಮೂರನೆಯ ಗಣದವರು. ಇವರು ವೈಭ್ರಾಜ ಎಂಬ ಲೋಕದಲ್ಲಿರುವವರು. ಇವರನ್ನು ದೇವತೆಗಳು, ಯಕ್ಷಗಂಧರ್ವ ಮೊದಲಾದ ವರೆಲ್ಲರೂ ಪೂಜಿಸುತ್ತಾರೆ. ಇವರು 'ಪುಲಸ್ತ್ಯ' ಎಂಬ ಪ್ರಜೇಶ್ವರರ ಮಕ್ಕಳು. ಇವರಿಗೆ 'ಪೀವರಿ' ಎಂಬ ಮಾನಸ ಪುತ್ರಿ ಇದ್ದಳು. ಇವಳು ದ್ವಾಪರಯುಗದಲ್ಲಿ ಜನ್ಮತಾಳಿ ಶ್ರೀವೇದವ್ಯಾಸರ ಮಕ್ಕಳಾದ ಶುಕಾಚಾರ್ಯರಿಗೆ ಪತ್ನಿಯಾದಳು. ಮಹಾತಪಸ್ವಿಗಳಾದ ಶುಕಾಚಾರ್ಯರು ಇವಳಲ್ಲಿ ಕೃಷ್ಣ, ಗೌರ, ಪ್ರಭು, ಶಂಭು ಎಂಬ ನಾಲ್ಕು ಗಂಡು ಮಕ್ಕಳನ್ನು ಕೃತ್ವೀ ಎಂಬ ಹೆಣ್ಣುಮಗಳನ್ನು ಪಡೆದು ತಂದೆಯಾದ ಶ್ರೀವೇದವ್ಯಾಸರಿಂದ ತತ್ವೋಪದೇಶ ವನ್ನು ಕೇಳಿ ಉತ್ತಮ ಗತಿಯನ್ನು ಹೊಂದಿದರು. ಕೃತ್ವಿಯು ಅಣುಹ ಎಂಬ ರಾಜನನ್ನು ಮದುವೆಯಾಗಿ ಬ್ರಹ್ಮದತ್ತನೆಂಬ ಪುತ್ರನನ್ನು ಪಡೆದಳು.

'ಸುಕಾಲ' ಎಂಬ ಹೆಸರಿನ ಪಿತೃಗಳು ನಾಲ್ಕನೆಯ ಗಣದವರು.ಇವರು ವಸಿಷ್ಠ ಪ್ರಜಾಪತಿಯ ಮಕ್ಕಳು. ಸ್ವರ್ಗದಲ್ಲಿ ಪ್ರಕಾಶಮಾನವಾದ ಲೋಕದಲ್ಲಿ ಇರುವವರು. ಇವರನ್ನು ಬ್ರಾಹ್ಮಣರು ಪೂಜಿಸುವರು. ಇವರಿಗೆ 'ಗೌಃ' ಎಂಬ ಪ್ರಸಿದ್ಧಳಾದ ಹೆಣ್ಣುಮಗಳಿದ್ದಳು. ಇವಳು ಮಾನಸಪುತ್ರಿಯಾಗಿದ್ದಳು. ಇವಳು ಭೂಮಿಯಲ್ಲಿ ಏಕಶೃಂಗಾ ಎಂಬ ಹೆಸರಿನಿಂದ ಹುಟ್ಟಿಬಂದಳು. ಶುಕನೆಂಬ ರಾಜನಿಗೆ ಭಾರ್ಯೆ ಯಾದಳು.

'ಅಂಗಿರಸ' ಹೆಸರಿನ ಪಿತೃಗಳು ಐದನೆಯ ಗಣದವರು. ಕ್ಷತ್ರಿಯರು ಇವರನ್ನು ಪೂಜಿಸುತ್ತಾರೆ. 'ಯಶೋದಾ' ಎಂಬುವಳು ಇವರ ಮಾನಸ ಪುತ್ರಿಯು. ಇವಳು 'ವಿಶ್ವಮಹಾನ್' ಎಂಬುವನ ಪತ್ನಿಯಾಗಿದ್ದಳು. ವೃದ್ಧ ಶರ್ಮನ ಸೊಸೆಯು, ದಿಲೀಪರಾಜನ ತಾಯಿಯು. ದಿಲೀಪರಾಜನು ಲೋಕದಲ್ಲಿ ಪ್ರಖ್ಯಾತಿ ಪಡೆದ ರಾಜನಾಗಿದ್ದನು.

'ಸುಸ್ವಧಾ' ಹೆಸರಿನ ಪಿತೃಗಳು ಆರನೆಯ ಗಣದವರು. ಇವರು ಕರ್ದಮ ಪ್ರಜಾಪತಿಯ ಪಿತೃಗಳಾಗಿದ್ದಾರೆ. ಇವರು 'ಪುಲಹ' ಮಹರ್ಷಿಗಳಿಂದ ಹುಟ್ಟಿದವರು. ಇವರನ್ನು ವೈಶ್ಯರು ಪೂಜಿಸುತ್ತಾರೆ. ವಿರಜಾ ಎಂಬುವಳು ಇವರ ಮಾನಸ ಪುತ್ರಿಯು ಇವಳು ನಹುಷರಾಜನ ಭಾರ್ಯೆ. ಇವಳ ಮಗನೇ ಯಯಾತಿ ರಾಜನು.

'ಸೋಮಪಾ' ಹೆಸರಿನ ಪಿತೃಗಳು ಏಳನೆಯ ಗಣದವರು. ಇವರು ಕವಿಯ ಮಗಳಾದ 'ಸ್ವಧಾ' ದೇವಿಯಲ್ಲಿ ಅಗ್ನಿಯಿಂದ ಹುಟ್ಟಿದ ಮಕ್ಕಳು. ಇವರನ್ನು ಶೂದ್ರರು ಪೂಜಿಸುತ್ತಾರೆ. ಇವರು 'ಮಾನಸ' ಎಂಬ ಲೋಕದಲ್ಲಿರುವವರು. ಇವರ ಮಾನಸಪುತ್ರಿಯು ನರ್ಮದೆ. ಇವಳು ನದೀ ಶ್ರೇಷ್ಠಳು. ಪುರುಕುತ್ಸರಾಜನ ಹೆಂಡತಿಯು, ತ್ರಸದಸ್ಯುವಿನ ತಾಯಿಯು.

Rarest Archiver

ಮನುಪ್ರಜಾಪತಿಯು ಪ್ರತಿಯುಗದ ಆರಂಭದಲ್ಲಿ ಅಗ್ನಿಷ್ವಾತ್ತಾದಿ ಪಿತೃಗಳನ್ನು ಪೂಜ್ಯರೆಂದು ಭಾವಿಸಿ ಲುಪ್ತವಾದ ಶ್ರಾದ್ಧಧರ್ಮಗಳನ್ನು ಉದ್ಧಾರ ಮಾಡುವ ಸಲುವಾಗಿ ಶ್ರಾದ್ಧಗಳನ್ನು ಪ್ರಚುರಗೊಳಿಸುತ್ತಾನೆ.

ಯಮನು ಈ ಏಳು ಬಗೆಯ ಪಿತೃಗಣಗಳಿಗಿಂತ ಮೊದಲು ಹುಟ್ಟಿದವನು ಮತ್ತು ಈ ಧರ್ಮಪ್ರವರ್ತಕನು. ಆದ್ದರಿಂದ ಯಮನನ್ನು 'ಶ್ರಾದ್ಧದೇವ' ಎಂದು ಕರೆಯುತ್ತಾರೆ.

ಈ ಎಲ್ಲಾ ಪಿತೃಗಳ ಪ್ರೀತ್ಯರ್ಥವಾಗಿ ಬೆಳ್ಳಿಯ ಪಾತ್ರೆ, ಅಥವಾ ಬೆಳ್ಳಿ ಮಿಶ್ರಿತವಾದ ಪಾತ್ರೆಯಲ್ಲಿ 'ಸ್ವಧಾ ಪಿತೃಭ್ಯಃ' ಎಂದು ಹೇಳಿ ಮಾಡಲ್ಪಡುವ ಶ್ರಾದ್ಧವು ಪಿತೃಗಳಿಗೆ ತೃಪ್ತಿ, ಪ್ರಸನ್ನತೆಯನ್ನು ಉಂಟುಮಾಡುತ್ತದೆ.

ಸರ್ವೇಷಾಂ ರಾಜತಂ ಪಾತ್ರಮಥವಾ ರಜತಾನ್ವಿತಮ್ ।
ದತ್ತಂ ಸ್ವಧಾಂ ಪುರೋಧಾಮ ಶ್ರಾದ್ಧಂ ಪ್ರೀಣಾತಿವೈ ಪಿತೄನ್॥
(ಹರಿವಂಶ ೧೮ ಅ. ೨೨ನೇ ಶ್ಲೋಕ)

ಮೇಲಿನ ಎಲ್ಲ ವಿಷಯವನ್ನು ಒಂದೇ ಸಾರಿ ಹೀಗೆ ತಿಳಿಯಬಹುದು.

ಪಿತೃಗಳು	ತಂದೆ	ಮಾನಸೀ(ಕನ್ಯಾ)	ಪೂಜಕರು
೧. ವೈರಾಜರು	ವಿರಾಜ	ಮೇನಾ	ದೇವಗಣದವರು
೨. ಅಗ್ನಿಷ್ವಾತ್ತರು	ಮರೀಚಿ	ಅಚ್ಛೋದಾ	ದೇವತೆಗಳು
೩. ಬರ್ಹಿಷದರು	ಪುಲಸ್ತ್ಯ	ಪೀವರೀ	ಯಕ್ಷಗಂಧರ್ವರು
೪. ಸುಕಾಲರು	ವಸಿಷ್ಠ	ಏಕಶೃಂಗಾ	ಬ್ರಾಹ್ಮಣರು
೫. ಅಂಗೀರಸರು	ಅಂಗಿರಾ	ಯಶೋದಾ	ಕ್ಷತ್ರಿಯರು
೬. ಸುಸ್ವಧರು	ಪುಲಹ	ವಿರಜಾ	ವೈಶ್ಯರು
೭. ಸೋಮಪರು	ಹಿರಣ್ಯಗರ್ಭ	ನರ್ಮದಾ	ಶೂದ್ರರು

ಇನ್ನು ಶ್ರೀಹರಿಕಥಾಮೃತಸಾರದ 'ಪಿತೃಗಣ' ಸಂಧಿಯ ಕುರಿತು ಇಲ್ಲಿ ವಿವೇಚಿಸಲಾಗುವುದು.

ಈ ಮೇಲೆ ಹೇಳಿದ ಪಿತೃಗಳ ತೃಪ್ತಿಗಾಗಿ ಪ್ರತಿಯೊಬ್ಬರೂ 'ಶ್ರಾದ್ಧಕರ್ಮ'ವನ್ನು ಆಚರಿಸುವುದು ಬಹಳ ಅವಶ್ಯವಾಗಿದೆ.

ಪಿತೃಯಜ್ಞರೂಪವಾದ ಪ್ರತಿ ಸಾಂವತ್ಸರಿಕ ಶ್ರಾದ್ಧಕರ್ಮದಲ್ಲಿ ಕೃತಿಪತಿಪ್ರದ್ಯುಮ್ನ ನಾಮಕ ಭಗವಂತನು ಭೋಜ್ಯವಸ್ತುಗಳಲ್ಲಿದ್ದು ಭೋಜ್ಯನಾಮಕನಾಗಿದ್ದಾನೆ. ಜಯಾಪತಿ ಸಂಕರ್ಷಣನು ಭೋಕ್ತೃಗಳಲ್ಲಿ ಅಂತರ್ಯಾಮಿ ರೂಪದಿಂದ ಇದ್ದು ಭೋಕ್ತೃ ಎಂದೆನಿಸುತ್ತಾನೆ. ಈ ವಿಷಯವನ್ನು ಮೊದಲನೆಯ ಪದ್ಯದಲ್ಲಿ ವಿವರಿಸುತ್ತಾರೆ.

Rarest Archiver

ಕೃತಿರಮಣನಾದ ಶ್ರೀಪ್ರದ್ಯುಮ್ನರೂಪೀ ಶ್ರೀಹರಿಯು ವಸುದೇವತೆಗಳ ಒಳಗೆ ಮತ್ತು ಮೂರು ಅಹಂಕಾರಗಳೊಳಗೆ(೮x೩=೨೪) ಇಪ್ಪತ್ನಾಲ್ಕು ರೂಪಗಳಿಂದ ಇದ್ದು ಭೋಜ್ಯ ಎನಿಸುತ್ತಾನೆ. ಅಗ್ನಿನೇತ್ರನಾದ ಶಿವನ ಅಂತರ್ಯಾಮಿಯಾದ ಜಯಾಪತಿ ಸಂಕರ್ಷಣನು ತಾನೇ ಮೂವತ್ತಮೂರು ರೂಪಗಳಿಂದ (೧೧x೩=೩೩) ಭೋಕ್ತೃಗಳ ಒಳಗೆ ಇದ್ದು ಭೋಕ್ತೃ ಎನಿಸುತ್ತಾನೆ.[೧]

ಮಾಯಾವತಿ ಶ್ರೀವಾಸುದೇವನು ಮೂವತ್ತಾರುರೂಪಗಳಿಂದ ಕಾಲನೆಂಬ ಹೆಸರಿನಿಂದ ಸೂರ್ಯನೊಳಗಿರುವನು(೧೨x೩=೩೬) ಮೂರುವಿಧ ಪಿತೃಗಳೊಳಗೆ ವಸು, ರುದ್ರ, ಮತ್ತು ಆದಿತ್ಯಾಂತರ್ಯಾಮಿಯಾಗಿ ಅನಿರುದ್ಧನು ಅವ್ಯಕ್ತನಾಗಿದ್ದು, ಕರ್ತೃ, ಕರ್ಮ, ಕ್ರಿಯೆ ಎಂಬುದಾಗಿ ಕರೆಸಿಕೊಳ್ಳುತ್ತಾನೆ.[೨]

ಸ್ವತಂತ್ರನಾದ ನಾರಾಯಣನು ತಾನು ಷಣ್ಣವತಿ ಎಂಬ ನಾಮದಿಂದ ಕರೆಸುತ್ತ ವಸು, ರುದ್ರ, ಆದಿತ್ಯ, ಕರ್ತೃ, ಕರ್ಮ, ಕ್ರಿಯೆಗಳ ಒಳಗೆ ಇದ್ದು ಇತರ ಫಲಗಳ ಅಪೇಕ್ಷೆ ಇಲ್ಲದೆ ನಿಷ್ಕಾಮವಾಗಿ ನಿತ್ಯದಲ್ಲಿ ತನ್ನ ಭಕ್ತರು ಮಾಡುವ ಸೇವೆಯನ್ನು ಸ್ವೀಕರಿಸಿ ಅವರ ಪಿತೃಗಳಿಗೆ ಅನಂತಾನಂತ ಸುಖಗಳನ್ನು ನೀಡುತ್ತಾನೆ.[೩]

---

೧. ಕೃತಿರಮಣ ಪ್ರದ್ಯುಮ್ನ ವಸುದೇ
ವತೆಗಳಾಹಂಕಾರ ತ್ರಯದೊಳು
ಚತುರವಿಂಶತಿ ರೂಪದಿಂದಲಿ ಭೋಜ್ಯನೆನಿಸುವನು ।
ಹುತವಹಾಕ್ಷಾಂತರ್ಗತ ಜಯಾ
ಪತಿಯು ತಾನೇ ಮೂರಧಿಕ ತ್ರಿಂ
ಶತಿ ಸುರೂಪದಿ ಭೋಕ್ತೃ ಎನಿಸುವ ಭೋಕ್ತೃಗಳೊಳಿರ್ದು ॥ (೧೪-೧)

೨. ಆರಧಿಕಮೂವತ್ತು ರೂಪದಿ
ವಾರಿಜಾಪ್ತನೊಳಿರುತಿಹನು ಮಾ
ಯಾರಮಣ ಶ್ರೀವಾಸುದೇವನು ಕಾಲನಾಮದಲಿ।
ಮೂರುವಿಧ ಪಿತೃಗಳೊಳು ವಸು ತ್ರಿಪು
ರಾರಿ ಆದಿತ್ಯ ಗನಿರುದ್ಧನು
ತೋರಿಕೊಳ್ಳದೆ ಕರ್ತೃ ಕರ್ಮ ಕ್ರಿಯನೆನಿಸಿಕೊಂಬ॥ (೧೪-೨)

೩. ಸ್ವವಶನಾರಾಯಣನು ತಾ ಷ
ಣ್ಣವತಿ ನಾಮದಿ ಕರೆಸುತಲಿ ವಸು
ಶಿವ ದಿವಾಕರ ಕರ್ತೃ ಕರ್ಮ ಕ್ರಿಯೆಗಳೊಳಗಿರ್ದು ।
ನೆವನವಿಲ್ಲದೆ ನಿತ್ಯದಲಿ ತ
ನ್ನವರು ಮಾಡುವ ಸೇವೆ ಕೈಕೊಂ
ಡವರ ಪಿತೃಗಳಿಗೀವನಂತಾನಂತ ಸುಖಗಳನು ॥ (೧೪-೨)

Rarest Archiver

ವಸುಗಳಲ್ಲಿ–	೮x೩ = ೨೪	ಪ್ರದ್ಯುಮ್ನ ರೂಪಗಳು
ರುದ್ರರಲ್ಲಿ	೧೧x೩ = ೩೩	ಸಂಕರ್ಷಣರೂಪಗಳು
ಆದಿತ್ಯರಲ್ಲಿ	೧೨x೩ = ೩೬	ವಾಸುದೇವರೂಪಗಳು
ಕರ್ತೃ, ಕರ್ಮ, ಕ್ರಿಯೆ	= ೦೩	ಅನಿರುದ್ಧರೂಪಗಳು
ಒಟ್ಟು	**= ೯೬**	**ರೂಪಗಳು**

ಇವುಗಳಿಗೆ 'ಷಣ್ಣವತಿ' ರೂಪಗಳು ಎನ್ನುತ್ತಾರೆ.

ನಾರಾಯಣನ– ಷಣ್ಣವತಿರೂಪಗಳು

ಶ್ರೀಹರಿರೂಪಗಳು	ದೇವತೆಗಳು	ಸಂಖ್ಯೆ	ಅಹಂಕಾರ ತ್ರಯರೂಪ	ಒಟ್ಟು ರೂಪಗಳು	ಹರಿಯನಾಮ
೧. ಪ್ರದ್ಯುಮ್ನ	ವಸು	೮	೧. ವೈಕಾರಿಕ ೨. ತೈಜಸ ೩. ತಾಮಸ	೮x೩=೨೪	ಭೋಜ್ಯ
೨. ಸಂಕರ್ಷಣ	ರುದ್ರ	೧೧	೧. ವೈಕಾರಿಕ ೨. ತೈಜಸ ೩. ತಾಮಸ	೧೧x೩=೩೩	ಭೋಕ್ತೃ
೩. ವಾಸುದೇವ	ಆದಿತ್ಯ	೧೨	೧. ವೈಕಾರಿಕ ೨. ತೈಜಸ ೩. ತಾಮಸ	೧೨x೩=೩೬	ಕಾಲ

೪. ಅನಿರುದ್ಧ ವಸು ೧

ರುದ್ರ ೧

ಆದಿತ್ಯ ೧ = ೩ ಕರ್ತೃ ಕರ್ಮ, ಕ್ರಿಯಾ

ಒಟ್ಟು = ೯೬

ಒಂದು ವರ್ಷದಲ್ಲಿ ಮಾಡಬೇಕಾದ ಶ್ರಾದ್ಧಗಳು ಒಟ್ಟು ೯೬ ಇವೆ ಅವುಗಳ ವಿವರ ಹೀಗಿದೆ

೧. ಅಮಾವಾಸ್ಯ ಶ್ರಾದ್ಧಗಳು– ೧೨

೨. ಸಂಕ್ರಮಣ ಶ್ರಾದ್ಧಗಳು – ೧೨

Rarest Archiver

೩. ಯುಗಾದಿ ಶ್ರಾದ್ಧಗಳು - ೪

(ಮಾಘ ಅಮಾವಾಸ್ಯೆ,
ಭಾದ್ರಪದಕೃಷ್ಣ ತ್ರಯೋದಶಿ,
ವೈಶಾಖ ಶುಕ್ಲ ತೃತೀಯಾ,
ಕಾರ್ತಿಕ ಶುಕ್ಲನವಮಿ.)

೪. ವೈಧೃತಿಗಳು - ೧೩

೫. ವ್ಯತೀಪಾತಗಳು- ೧೩

೬. ಮಹಾಲಯಗಳು- ೧೬

೭. ಅಷ್ಟಕಶ್ರಾದ್ಧಗಳು- ೧೨

೮. ಮನ್ವಾದಿ ಶ್ರಾದ್ಧಗಳು- ೧೪

ಒಟ್ಟು ೯೬

ಪಿತೃಗಳಿಗೆ ಪ್ರಿಯವಾದ ಈ ತೊಂಬತ್ತಾರು ಶ್ರಾದ್ಧಗಳಿಗೆ ನಿಯಾಮಕ ರೂಪಗಳೇ ಭಗವಂತನ 'ಷಣ್ಣವತಿ' ರೂಪಗಳು ಎಂದು ತಿಳಿಯಬೇಕು.

ಷಣ್ಣವತಿ ನಾಮಕನಾದ ಶ್ರೀಹರಿಯು ವಸುಗಳು, ರುದ್ರರು ಮತ್ತು ಆದಿತ್ಯರು ಇವರೊಳಗೆ ನೆಲೆಸಿ ತನ್ನ ಭಕ್ತರು ಪ್ರತಿದಿನ ನಿಷ್ಕಪಟವಾದ ಉತ್ತಮ ಭಕ್ತಿಯಿಂದ ಮಾಡುವ ಪುಣ್ಯಕರ್ಮಗಳನ್ನು ಸ್ವೀಕರಿಸುತ್ತಾನೆ. ಕರುಣಾಸಾಗರನಾದ ಭಗವಂತನು ಪಿತೃಗಳಿಗೆ ಅಗಣಿತ ಸುಖವನ್ನು ನೀಡಿ ಅವರನ್ನು ಎಲ್ಲ ಕಾಲದಲ್ಲಿಯೂ ಪಾಲಿಸುವನು"(ಭೋಜನಸಂಧಿ).

ಶ್ರೀಹರಿಯ ಷಣ್ಣವತಿರೂಪಗಳು ಪಿತೃಗಳಿಗೆ ತೃಪ್ತಿಯನ್ನು ತಂದು ಕೊಡುತ್ತವೆ ಯೆಂಬುದನ್ನು ಶ್ರೀಜಗನ್ನಾಥದಾಸರೇ ಪಂಚಮಹಾಯಜ್ಞಸಂಧಿಯಲ್ಲಿ ತಿಳಿಸಿರು ವುದನ್ನು ಇಲ್ಲಿ ನೆನೆಸಿಕೊಳ್ಳಬಹುದು.

ಲಕ್ಷ್ಮೀಕಾಂತನೂ, ಗುರುಮಧ್ವರ ಅಂತರ್ಯಾಮಿಯೂ ಆದ ಶ್ರೀಹರಿಯು ಪಂಚರೂಪಾತ್ಮಕನೆನಿಸಿ ವಸು, ರುದ್ರ, ಆದಿತ್ಯ ಹಾಗೂ ಶ್ರಾದ್ಧ ಕರ್ತೃಗಳೊಳಗೆ ತಂತು ಪಟದಂತೆ ಇದ್ದು ಸದಾಕಾಲದಲ್ಲಿ ತನ್ನನ್ನು ಸ್ಮರಿಸುವ ಸಜ್ಜನರನ್ನು ಸಂತೈಸಿ, ಇಹಪರಗಳಲ್ಲಿ ಸಂತತ ಅಖಿಲಾರ್ಥಗಳನ್ನಿತ್ತು ಪಾಲಿಸುತ್ತಾನೆ.

ಅಂಶಿ, ಅಂಶ ಮತ್ತು ಅಂತರ್ಗತ ಎಂಬ ಮೂರು ವಿಧವಾದ ರೂಪಗಳೊಂದಿಗೆ ಹಂಸವಾಹನನಾದ ಬ್ರಹ್ಮ ಮೊದಲಾದ ದೇವತೆಗಳು ದೇಹದಲ್ಲಿ ನೆಲೆಸಿರುತ್ತಾರೆಂದು ತಿಳಿದು ಅಂತರ್ಯಾಮಿಯಾದ ಶ್ರೀಜನಾರ್ದನನ ಸಂಸ್ಮರಣೆ ಪೂರ್ವಕವಾಗಿ ಷಣ್ಣವತಿ

Rarest Archiver

(೯೬) ರೂಪಗಳನ್ನು ಅರಿತು, ಗರುಡವಾಹನನಾದ ಶ್ರೀಹರಿಯನ್ನು ನಿತ್ಯದಲ್ಲಿ ಪೂಜಿಸುವವರು ಕೃತಾರ್ಥರೆನಿಸುತ್ತಾರೆ.

ಶ್ರಾದ್ಧಕಾಲೇ ಜನಾರ್ದನಂ ಧ್ಯಾಯೇತ್ ಉಕ್ತಿಯಂತೆ ಜನಾರ್ದನನನ್ನು ಸ್ಮರಿಸಿದಾಗ ಖರನೆಂಬ ದೈತ್ಯನನ್ನು ಸಂಹರಿಸಿದ ಶ್ರೀರಾಮನು, ಜನಾರ್ದನ ರೂಪದಿಂದ ಸಕಲ ಶರೀರಗಳೊಳಗಿದ್ದು ಅವರವರ ಹೆಸರಿನಿಂದ ಕರೆಸುತ್ತ ೩೫೫೫ ರೂಪಗಳಿಂದ ಜ್ಞಾನಿಗಳು ಮಾಡುವ ಪಿತೃಯಜ್ಞಕ್ಕೆ ವಿಘ್ನಗಳು ಬರದಂತೆ ಅನೇಕ ರೀತಿಯಾಗಿ ಕಾಪಾಡುತ್ತಾನೆ.

ಇಲ್ಲಿ ಜನಾರ್ದನ – ಶಬ್ದವೇ ೩೫೫೫ ರೂಪಗಳನ್ನು ತಿಳಿಸುತ್ತದೆ.

(ಜ–೩, ನಾ–೫, ರ್ದ–೫, ನ–೫ = ೩೫೫೫)

ಪಿತೃಯಜ್ಞಕಾಲದಲ್ಲಿ ಶ್ರೀಹರಿಯನ್ನು ಪ್ರಾರ್ಥಿಸುವ ರೀತಿಯನ್ನು ಇಲ್ಲಿ ತಿಳಿಸುತ್ತಾರೆ.

ಜಯಾಪತಿಯಾದ ಸಂಕರ್ಷಣನೇ ಜಯಜಯ, ದತ್ತಾತ್ರೇಯ, ಕಪಿಲ, ಮಹಿದಾಸನಾದ ಐತರೇಯ, ಹಯವದನ, ಹರಿ ಹಂಸ ನಿಮಗೆ ಜಯಜಯ, ಭಗವಂತನೇ ನೀನು ಭಕ್ತ ಪ್ರಿಯ, ಪುರಾತನ ಪುರುಷ, ಜ್ಞಾನಘನ, ಲೋಕತ್ರಯ ವಿಲಕ್ಷಣ, ಸಕಲಜಗತ್ತಿಗೆ ಆಶ್ರಯ, ನಿರ್ದೋಷ, ನೀನು ದಯದಿಂದ ನಮ್ಮನ್ನು ಪಾಲಿಸು ಎಂಬುದಾಗಿ ಪ್ರಾರ್ಥಿಸಬೇಕು.

ಶ್ರೀಹರಿಯು 'ಷಣ್ಣವತಿ' ನಾಮದ ಅಕ್ಷರಗಳಿಂದ ಪ್ರತಿಪಾದ್ಯನು ಎಂಬುದಾಗಿ ಶ್ರೀದಾಸರು ಇಲ್ಲಿ ಹೇಳುತ್ತಾರೆ.

ಷಣ್ಣವತಿ ಎಂಬ ಪದದಲ್ಲಿಯ ಅಕ್ಷರಗಳಿಂದ ಪ್ರತಿಪಾದ್ಯನೂ, ಕರುಣಾಸಾಗರನೂ, ಬ್ರಹ್ಮಣ್ಯದೇವನೂ, ಭವಸಮುದ್ರಕ್ಕೆ ನೌಕೆಯಂತೆ ಇರುವವನೂ, ಆದ ಶ್ರೀಹರಿಯು 'ಷಣ್ಣವತಿ' ಹೆಸರಿನಿಂದ ಕರೆಸುತ್ತ, ತನ್ನ ಭಕ್ತರು ಮಾಡುವ ಪುಣ್ಯ ಕರ್ಮವನ್ನು ಸ್ವೀಕರಿಸಿ, ಅನೇಕ ಬಗೆಯಿಂದ ಸಂರಕ್ಷಣೆ ಮಾಡುತ್ತಾನೆ.

ಷ – ಎಂದರೆ ಷಡ್ಗುಣ ಪೂರ್ಣ

ಣ – ಎಂದರೆ ಆನಂದ ಪೂರ್ಣ(ಸುಖಪೂರ್ಣ)

ವ – ಎಂದರೆ ವರಣೀಯ

ತಿ – ಎಂದರೆ ತಿರೋಧಾನ ಕರ್ತಾ

ವಾಯುದೇವರಿಂದ ಪೂಜಿತನಾದ ಮಾಯಾಪತಿ ಶ್ರೀವಾಸುದೇವನು, ತಾನೇ 'ಸ್ವಾಹಾ' ಎನಿಸಿ ಬ್ರಹ್ಮ ಮೊದಲಾದ ದೇವತೆಗಳಿಗೆ ಸರ್ವಕಾಲದಲ್ಲಿ ಸಂತೃಪ್ತಿ ನೀಡುತ್ತಾನೆ. ಅತ್ಯಂತ ಹಿತಕರನಾದ ಸಂಕರ್ಷಣರೂಪೀ ಶ್ರೀಹರಿಯು 'ಸ್ವಧಾ' ಎಂಬ ರೂಪದಿಂದ

Rarest Archiver

ಪಿತೃಗಳಿಗೆ ಆಹಾರ ನೀಡುತ್ತಾನೆ. ಮನುಷ್ಯರಿಗೆ ಪ್ರದ್ಯುಮ್ನ ರೂಪದಿಂದ ಅನ್ನವನ್ನು, ಅನಿರುದ್ಧ ರೂಪದಿಂದ ಪಶುಗಳಿಗೆ ತೃಣಾದಿರೂಪ ಅನ್ನವನ್ನು ನೀಡುತ್ತಾನೆ.

ಬ್ರಹ್ಮಾಂಡದಲ್ಲಿ ಈ ರೀತಿಯಾಗಿ ತನ್ನನ್ನು ಉಪಾಸನೆ ಮಾಡುವ ಭಕ್ತರನ್ನು ಕ್ಲೇಶಪಡಿಸದೇ ತುಂಬಾ ದೊಡ್ಡದಾದ ಸಂಸಾರ ಸಮುದ್ರವನ್ನು ದಾಟಿಸಿ ಚತುರ್ವಿಧ ಅನ್ನಮಯನಾದ ಈ ಹರಿಯು ತನ್ನ ಸಂದರ್ಶನ ಸುಖವನ್ನು ನೀಡುತ್ತಾನೆ.

Rarest Archiver

ಪೈತೃಕವಾರದ ಸುಳಾದಿ

ರಾಗ ಶಂಕರಾಭರಣ ಧ್ರುವತಾಳ

ಪೈತ್ರಿಕವಾರದಲ್ಲಿ ದೇವಾಂಶಿ ಅಂಶಿಗಳ ।
ಸ್ತೋತ್ರವ ನಾಲಕು ಯುಗದವರ ಸೇವಾ ।
ಸೂತ್ರನಾಮಕ ಪ್ರಾಣ ಮೊದಲಾದ ದೇವತೆಗಳ ।
ಚಿತ್ರವಿಚಿತ್ರ ಮಹಿಮೆ ತಿಳಿದು ತಿಳಿದು ।
ಪುತ್ರ ಪೌತ್ರ ಪ್ರಪೌತ್ರ ವಂಶಾಭಿವೃದ್ಧಿಯಿಂದ ।
ಗಾತ್ರ ನಿರ್ಮಳರಾಗಿ ಬಾಳುವರೋ ।
ಗೋತ್ರ ನೂರೊಂದು ನಾನಾಜನುಮ ಧರಿಸಿದ ವಿ ।
ಹೋತ್ರಾದಿ ಲೋಕದಲ್ಲಿ ಇದ್ದ ಜನರು ।
ಪಾತ್ರ ಸತ್ಪಾತ್ರರಾಗಿ ತೃಪ್ತಿಯಾಗುವರು ಕಾ ।
ಲತ್ರಯ ಬಿಡದಲೆ ಊರ್ಧ್ವಗತಿಗೆ ।
ಗೋತ್ರದೊಡನೆ ಹರಿಯ ಕೊಂಡಾಡುತ ।
ಶ್ರೋತ್ರದಿಂದಲಿ ಇದು ಕೇಳಿದವನ ವಂಶ ।
ಕ್ಷೇತ್ರಾದಿಯಲ್ಲೀ ಇರಲು ಗತಿಗಭಿಮುಖ ।
ಧಾತ್ರಿಯೊಳಗೋರ್ವಜ್ಞಾನಿ ಪುಟ್ಟಲು ಮೇರು ।
ಗೋತ್ರಸಮತುಲ್ಯ ಪುಣ್ಯ ತಂದುಕೊಡುವ ।
ಮಾತ್ರಕಾಲವಾದರೂ ನೆನಿಸಿ ನೆನಿಸಿ ಸುಹೃ ।
ನ್ಮಿತ್ರನಾಗೆಲೋ ನಿನ್ನ ಬಾಂಧವರಿಗೆ ।
ಛತ್ರ ಚಾಮರ ನಾನಾ ಭೋಗದಿಂದಲಿ ಸ ।
ರ್ವತ್ರ ಬಾಳುತಲಿಪ್ಪ ಜ್ಞಾನಿಯಾಗಿ ।
ರಾತ್ರಿಚರರು ಇವನ ಮುಟ್ಟಲಂಜುವರು ಇದ್ದಾ ।
ಪಾತ್ರಿಪಾತ್ರ ಪದಾರ್ಥ ಮೊದಲಾದವು ।
ಸೂತ್ರ ಮೀಟಿದಂತೆ ಸತ್ಪಥವಾಗುವುದು ।
ಪೌತ್ರ ಭವಾಂಬುಧಿಗೆ ದಿವಿಜವ್ರಾತಾ ।
ನೇತ್ರತ್ರಯನ್ನ ಅವತಾರ ಆರಂಭಿಸಿ ।
ಮಾತ್ರಭೂತ ಕರ್ಮ ಜ್ಞಾನ ಲಿಂಗ ।

ಗಾತ್ರ ಷೋಡಶಕಳಾ ಕಾಲ ವೇದಶಾಸ್ತ್ರ ಪ ।
ವಿತ್ರ ವಸ್ತು ಸಮಸ್ತಲೋಕಾವರಣ ।
ಈ ತ್ರಿಧಾಮ ಸಹಾಯದಲ್ಲಿದ್ದ ದೇವಾದಿಗಳ ।
ನಿತ್ರಾಣನಾಗಿ ಎಣಿಸಿ ಕೂಡಿಸು ।
ಯಾತ್ರ ಮಿಕ್ಕಾದ ಚೇಷ್ಟೆ ಹರಿಗೆ ಸಮರ್ಪಿಸಿ ।
ತ್ರಾತಾತ್ಮಾ ಎಂದು ಹಸ್ತಮುಗಿದು ಬಾಗಿ ।
ನೇತ್ರನಾಗಿ ಲೋಕಕ್ಕೆ ಇಪ್ಪನೋರ್ವನು ಸತಿ ಕ ।
ಳತ್ರ ನಾಮಕನೋರ್ವ ವಸು ಓರ್ವನೋ ।
ಈ ತ್ರಿಬಗೆಯವರ ಅಂತರದಲ್ಲಿ ರೂ ।
ಪತ್ರಯ ಎನಿಪ ಪ್ರದ್ಯುಮ್ನಾದಿ ಮೂರ್ತಿ ।
ಅತ್ರಿನೇತ್ರೋದ್ಭವಕುಲ ವಿಜಯವಿಠಲ ।
ಕ್ಷೇತ್ರಜ್ಞ ಸ್ತುತಿಗೆ ಮೆಚ್ಚಿ ಕುಲ ಉದ್ಧಾರ ಮಾಡುವಾ ॥೧॥

ಮಟ್ಟತಾಳ

ಶುಚಿ ಮಾರ್ದವ ಸ್ವಾದ ರುಚಿ
ಅಮೃತಸಾರ ರಚನೆ ಮನೋಹರಾ ।
ಅಚಲ ಅವಿರೋಧ ಪಚನ ಶುಭ್ರವರ್ಣ ।
ನಿಚಯಮಿಳಿತರಹಿತ ಪ್ರಚುರಪ್ರಚುರಸಮ ।
ಸುಚರಿತ ಸರ್ವದಲಿ ಅಚಿರಕಾಲ ಪ್ರಾಪ್ತಿ ।
ಸಚರ ಚರಪಾಲಾ ವಿಜಯವಿಠ್ಠಲ ನಾನಾ ।
ಉಚಿತ ಧರ್ಮಗಳೆಲ್ಲಾವುಂಟವಗೆ ಮಾಳ್ಪ ॥೨॥

ತ್ರಿವಿಡಿತಾಳ

ಹನುಮನ್ನ ಭೀಮ ಮಧ್ವ ಶುಕ ದೂರ್ವಾಸ ಗುರು ।
ತನುಜ ಅಶ್ವತ್ಥಾಮ ಲಕ್ಷ್ಮಣ ಬಲರಾಮ ।
ವನಚರ ವಾಲಿ ಅರ್ಜುನ ಭರತ ಪ್ರದ್ಯುಮ್ನ
ಷಣ್ಮುಖ ಸಾಂಬಸರ್ವೋತ್ತುಂಗ ಶತ್ರುಘ್ನ ।
ಅನಿರುದ್ಧ ತಾರಾ ಉದ್ಧವ ದ್ರೋಣಾಂಗದ ಸುಗ್ರೀ ।
ವನು ಕರ್ಣ ಜಾಂಬವಾನ್ನ ಧರ್ಮ ವಿದುರ ಶಂ ।
ತನು ಸುಷೇಣ ಮಹಾಭಿಷಕ್ ನಾರದ ಭೃಗು ।

Rarest Archiver

ಗುಣವಂತ ಲವ ನೀಲ ದೃಷ್ಟದ್ಯುಮ್ನ ಭೀಷ್ಮ ।
ಕನು ದುರ್ಮುಖ ಘಟೋತ್ಕಚ ।
ಗಣಪ ಚಾರುದೇಷ್ಣ ಎಣಿಸು ಕ ।
ತ್ಥನ ಭಗದತ್ತ ವಿವಿಧ ಮೈಂದ ।
ವಸು ನಕುಲ ಸಹದೇವ ಬಭ್ರುವಾ ।
ಹನ ಮನು ಶುಚಿ ಕೌಶಿಕ ಪ್ರಹ್ಲಾದ ಬಾಹ್ಲೀಕ ।
ಜನಪ ಶರಭ ವಸುದೇವ ದೇವಕಿ ಗೋವ ।
ರ್ಧನಪರ್ವತನಂದಗೋಪ ಗೋಕುಲವೃಂದಾ ।
ವನ ಗೋಪಿಗೋಪಾಲ ಕಾಳಿಂದಿ ಮಥುರಾ ಪ ।
ಟ್ಟಣ ಶಕುನಿಜನಕ ಉಗ್ರಸೇನ ಅಕ್ರೂರ ।
ಘನಪರಾಕ್ರಮ ಭೀಷ್ಮ ಸತ್ಯ ಶ್ಯಮಂತಕ ।
ಮಣಿಕುಬ್ಜ ಕೃತವರ್ಮ ಸತ್ರಾಜಿತ ಪಾಂಡು ರು ।
ಗ್ಮಿಣಿ ಬಲಿ ಭರತ ಯಯಾತಿ ಯದು ಸಾತ್ಯಕಿ ।
ಧನುರ್ಧಾರಿ ಅಭಿಮನ್ಯು ಯುಯುತ್ಸು ಸಂಜಯ ।
ಮುನಿವ್ಯಾಸ ಯೋಜನಗಂಧಿ ಮಾದ್ರಿ ಕುಂತಿ ।
ಸನಕಾದಿ ಗಾಂಧಾರಿ ಕೃಪಾ ಕೃಪಿ ಪಾಂಚಾಲಿ ।
ತನುಜರೈವರು ದ್ರುಪದ ವಿರಾಟ ಮಾದ್ರೇಶ ।
ಅನಿಮಿಷನದಿ ಸರ್ವಪ್ರವಾಹ ರೇವತಿ ।
ವನಧಿಸಪುತ ನಾನಾದ್ವೀಪ ಖಂಡ ಕ್ಷೇತ್ರ ।
ವನ ಪರ್ವತ ಯಾಗ ವರ್ಣಾಶ್ರಮ ಜಾತಿ ।
ಇನಚಂದ್ರಮವಂಶ ಪಾರಂಪರೆ ಗ್ರಹಿಸು ।
ವನಗೋಚರ ವಾನರ ಯದುವಂಶದಲಿ ಬಂದು ।
ಜನಿಸಿದ ಸ್ತ್ರೀ ಪುರುಷ ಇವರೀವರ್ಗೆ ತಿಳಿದು ।
ತೃಣವೆ ಮೊದಲು ಮಾಡಿ ಮುಕ್ತಿಯೋಗ್ಯರನಾ ।
ಇನಿತು ಬಿಡದೆ ಪಿತೃಪುಣ್ಯಕಾಲದಲ್ಲಿ ಯೋ ।
ಚನೆ ಮಾಡಿ ಮತಿಯಿಂದ ಕೊಂಡಾಡಿದ ಭಕ್ತಿ ।
ಮನುಜನ್ನ ಸುಕೃತಕೆ ಕಡೆಗಾಣೆ ಪಡೆಗಾಣೆ ।
ಗಣನೆ ಇಲ್ಲದೆ ಮಹಾಕುಲ ಉದ್ಧಾರ ।
ಧನಧಾನ್ಯವಿದ್ಯಾದಿ ವಿಜಯ ವಿಠಲರೇಯ ।
ಕುಣಿಕುಣಿದಾಡುವ ಪಿತೃರೂಪಗಳಿಂದ ॥೩॥

Rarest Archiver

ಅಟ್ಟತಾಳ

ಮಲಿನವಸನ ಮಾತು ಪುಸಿ ಪೇಳುವ ನೀಚ ।
ಕಲಹ ಕಠಿಣೋಕ್ತ ಕಾಮುಕ ಚೋರ ಚಂ ।
ಚಲ ಬ್ಯಾಡಾ ಜಲ್ಪ ಧರ್ಮಧ್ವಜ ದ್ವಿಜನಿಂದೆ ।
ಜಲವಾಹ ಪಾಚಕಾ ಕಾರ್ಷಿಕಾ ಗಣಿತಜ್ಞ ।
ಕುಲಭ್ರಷ್ಟ ಅನಾಚಾರಿ ಕ್ಷುದ್ರ ಜೀವಹಿಂಸ ।
ಕೊಲೆಗಡುಕ ನಾನಾ ಧನಧಾನ್ಯ ರಸದು ।
ರ್ಮಲಕ್ರಿಯಾವಿಕ್ರಯ ಸಾರ್ಥಿಕಚಾರ್ವಾಕ ಕೇ ।
ವಲ ಹೀನಾಂಗ ಚೆನ್ನಿಗಾದರ ಚುಲ್ಲಕಾ ।
ಹಳಿವ್ಯಾಧಿ ವ್ರತದೂರ ನಿತ್ಯಕರ್ಮಶೂನ್ಯ ।
ಮಲಗಿಪ್ಪ ವಿಚಂಡ ಊರು ಊರು ಸಂಚಾರಿ ।
ಬಲತ್ಕಾರ ಪ್ರತಿಗ್ರಹಾಸ್ತೇನ್ಯ ಪ್ರತಿಷ್ಠಾಹ ಶ್ರದ್ಧಾಭೋಕ್ತ ।
ಗೋಳಕ ದೇಶಾಂತರಪರಿಚಿತರಹಿತ ತ್ವಂ ।
ಬಲುಸರ್ವರಾಧಾರಿ ಅಸ್ನಾಯಿ ರೋಗಿಷ್ಟ ।
ಅಳಲುವ ಇಂದ್ರಿಲೋಲುಪ ಮಾರ್ಗವಿಶ್ರಾಂತ ।
ಹೊಲೆಕೋಪ ಸಂತಪ್ತ ಮದ ಮತ್ಸರ ಲೋಭಿ ।
ತಳಮಳ ನೆಲೆಗಳ್ಳ ಪರದಾರಸಾಲಿಗಾ ದಾಕ್ಷಿಣ್ಯಾ ।
ಹಲುಬುವ ಹಂತಕ ಹಸಿವೆ ತೀರದವ ।
ಸುಳಿದಾಡುವ ಬಹು ಜಠರಜಠರ ಬಾಲಾ ।
ಬಲಿವೃಷಳಿವಂಧ್ಯಾಋತು ವ್ಯಭಿಚಾರಿ ಪೂಂ ।
ಶ್ಚಲಿ ಗರ್ಭಿಣಿ ದ್ವಯಭಾರ್ಯರ್ಗಳ ಭರ್ತಾ ವ್ಯಾ ।
ಕುಲ ಪ್ರತಿಕೂಲ ಪತ್ನಿ ದೂರ ದುಃಸಂಗ ।
ಮೆಲುವ ಅಯೋಗ್ಯಪದಾರ್ಥ ನಪುಂಸಕ ।
ಘಳಿಗೆ ಪ್ರಾಹಾರಿಕ ಪ್ರಪಂಚಾಸಕ್ತ ಸಂ ।
ಬಳಕಾರಿ ಶಾಲಕ ಮಿಕ್ಕ ಸಗೋತ್ರಜಾ ।
ಕಲಿಮನದವ ಪಿತೃಮಾತ್ರಾದಿ ಗುರುದ್ರೋಹಿ ।
ಕಲಕಲಾ ಪಗಡಿ ಜೂಜಾಟಖಟ್ಟ ಶಯ್ಯಾ ।
ಗೆಳೆಯರೊಂಚಕ ಅಲ್ಪಭೋಕ್ತಾ ಧರ್ಮದಾಂಧ ।
ಪೊಳೆವ ಶ್ರುತಿ ತಂತ್ರ ನಾಮ ಬಾಹಿರ ವಿಪ್ರ ।
ನಲಿವ ಪ್ರತ್ಯುಪಕಾರಿ ಆತತಾಯಿನಾತನ್ನ ।

Rarest Archiver

ಕುಲದೈವ ಪರಿತ್ಯಾಗಿ ಕುಹಕ ಅಸೂಯಕಾ ।
ಇಳೆಯೊಳಗೀಪರಿ ಉಂಟು ಅನಾಗ್ನಿಕಾ ।
ಮಿಳಿತ ಮಾಡಲಾಗಿ ಬಹುವಿಧ ಜನರನ್ನು ।
ಕುಳ್ಳಿರಪೇಳತಕ್ಕದಲ್ಲ ಪೈತ್ರಕಾಲದಲ್ಲಿ ।
ತಿಳಿವದು ಇದರ ವಿರುದ್ಧ ವಾದವನ್ನ ।
ಸಲೆ ತಾರತಮ್ಯ ಗುರುಹರಿಭಕ್ತಿ ಸ ।
ತ್ಕುಲ ಪ್ರಸೂತ ಪಂಚಭೇದಮತಿ ನಿತ್ಯ ।
ಗೆಲುವಾಗಿ ಇರಬೇಕು ಹಗಲು ಇರುಳು ಅಲ್ಲ ।
ತುಳಸೀಧಾಮಭೂಷಾ ವಿಜಯವಿಠ್ಠಲನಲ್ಲಿ ।
ನಿಲಿಸು ಮನಸು ನೀನು ಫಲರಹಿತವಾಗೊ ॥೪॥

ಆದಿತಾಳ

ಸ್ವರಸಶಬ್ದ ಕ್ರಿಯಾಕಾಲ ಭವ ದೃಷ್ಟಾ ।
ನಿರುತ ಈ ಪರಿ ತಿಳಿದು ತೊರೆದು ಶುದ್ಧಾತ್ಮನಾಗಿ ।
ಹಿರಿದಾಗಿ ಹಿಂದೆ ಉಚ್ಚರಿಸಿದ ದೇವಾಂಶರ ।
ಸ್ಮರಿಸಿದರಾಕ್ಷಣ ಮಾಡಿದ ನೈವೇದ್ಯ ।
ವರಸದೋಪಮವಾಗಿ ಭೋಕ್ತರಿಗೆ ಮಹಾರುಚಿ ।
ಕರವಾಗಿ ಇಪ್ಪದು ತದ್ದೋಷ ಪರಿಹಾರಾ ।
ಧರೆ ಮೇಲೆಯಿದ್ದ ದಿವ್ಯಶುಭರಸಗಳು ಬಂದು ।
ಭರಿತವಾಗಿವೆ ಇಂದಿನ ದಿನದಲ್ಲಿ ಬಿಡದೆ ।
ಧರ ಭುವರ್ಲೋಕ ನಾಕ ಭವನದಲ್ಲಿ ಇದ್ದ ।
ಸರ್ವ ಪಿತೃಗಣದವರು ತೃಪ್ತಿಯಾಗುವರು ।
ಮರುತಾದಿತ್ಯ ಸಾಧ್ಯ ವಸು ರುದ್ರಾಶ್ವಿನಿ ಋಷಿ ।
ಎರಡೈದುಗಣದವರು ಪಿತೃರೆನಿಸುವರು ।
ತರತಮ ಇದರೊಳು ಸಿದ್ಧವಾಗಿದೆ ಇಂತೂ ।
ಪರಮಾನಂದದಲ್ಲಿ ಈ ಬಗೆ ಒಪ್ಪುತಿದೆ ।
ನರನೊಮ್ಮೆ ತುತಿಸಿಕೊಂಡಾಡಿ ಪಾಡಿ ಕೇಳಿ ।
ಶಿರದೂಗಿ ಅನುವಾದ ಮಾಡಿದರಾದಡೆ ।
ವರಸೇತು ಜನಾರ್ದನ ಗೋಕರ್ಣ ದ್ವಾರಾವತಿ ।

Rarest Archiver

ಕುರುಕ್ಷೇತ್ರ ಮಾಯಾ ಕಾಶಿ ಬದರಿ ಪ್ರಯಾಗ ಅಯೋಧ್ಯ ।
ಪುರುಷೋತ್ತಮ ಕಾಂಚಿ ಮಥುರಾವಂತಿಕೆ ಪುರಿ ।
ತರೇಣೇಂದು ಉಪರಾಗ ಗಯಾ ಸಪ್ತನದಿಯಲ್ಲಿ ।
ಸುರ ಭೂಸುರರಿಗೆ ಭೋಜನ ಮಾಡಿಸಿದ ಪುಣ್ಯ ।
ಬರುವದು ಒಂದಾನಂತವಾಗಿ ನಾನಾಫಲ ।
ಗುರುಸದ್ವಾರಾ ಪ್ರಸನ್ನ ವಿಜಯವಿಠ್ಠಲರೇಯ ।
ಎರೆಡೈವತ್ತೊಂದು ಗೋತ್ರದವರ ಉದ್ಧರಿಸುವಾ ॥೫॥

ಜತೆ

ನರಕೋದ್ಧಾರ ಸತ್ಯ ಇದರಿಂದ ಪಿತೃಗಳಿಗೆ
ನರಕಾರಾತಿ ನಮ್ಮ ವಿಜಯವಿಠ್ಠಲ ಸುಳಿವಾ ॥೬॥

ಮೃತ್ಯುನಿರಾಸಾಷ್ಟಕ ಸ್ತೋತ್ರ

ಸ್ತೋತ್ರಂ ಸರ್ವಂ ಪ್ರವಕ್ಷ್ಯಾಮಿ ಮಾರ್ಕಂಡೇಯೇನ ಭಾಷಿತಮ್ ।
ನಾರಾಯಣಂ ಸಹಸ್ರಾಕ್ಷಂ ಪದ್ಮನಾಭಂ ಪುರಾತನಮ್ ।
ಹೃಷೀಕೇಶಂ ಪ್ರಪನ್ನೋಽಸ್ಮಿ ಕಿಂ ನೋ ಮೃತ್ಯುಃ ಕರಿಷ್ಯತಿ ॥
ಗೋವಿಂದಂ ಪುಂಡರೀಕಾಕ್ಷಂ ಅನಂತಮಜಮವ್ಯಯಮ್ ।
ಕೇಶವಂ ಚ ಪ್ರಪನ್ನೋಽಸ್ಮಿ ಕಿಂ ನೋ ಮೃತ್ಯುಃ ಕರಿಷ್ಯತಿ ॥
ವಾಸುದೇವಂ ಜಗದ್ಯೋನಿಂ ಭಾನುವರ್ಣಮತೀಂದ್ರಿಯಮ್ ।
ದಾಮೋದರಂ ಪ್ರಪನ್ನೋಽಸ್ಮಿ ಕಿಂ ನೋ ಮೃತ್ಯುಃ ಕರಿಷ್ಯತಿ ॥
ಶಂಖಚಕ್ರಧರಂ ದೇವಂ ಛಂದೋರೂಪಿಣಮವ್ಯಯಮ್ ।
ಅಧೋಕ್ಷಜಂ ಪ್ರಪನ್ನೋಽಸ್ಮಿ ಕಿಂ ನೋ ಮೃತ್ಯುಃ ಕರಿಷ್ಯತಿ ॥
ವರಾಹಂ ವಾಮನಂ ವಿಷ್ಣುಂ ನಾರಸಿಂಹಂ ಜನಾರ್ದನಮ್ ।
ಮಾಧವಂ ಚ ಪ್ರಪನ್ನೋಽಸ್ಮಿ ಕಿಂ ನೋ ಮೃತ್ಯುಃ ಕರಿಷ್ಯತಿ ॥
ಪುರುಷಂ ಪುಷ್ಕರಂ ಪುಣ್ಯಂ ಕ್ಷೇಮಬೀಜಂ ಜಗತ್ಪತಿಮ್ ।
ಲೋಕನಾಥಂ ಪ್ರಪನ್ನೋಽಸ್ಮಿ ಕಿಂ ನೋ ಮೃತ್ಯುಃ ಕರಿಷ್ಯತಿ ॥
ಸಹಸ್ರಶಿರಸಂ ದೇವಂ ವ್ಯಕ್ತಾವ್ಯಕ್ತಂ ಸನಾತನಮ್ ।
ಮಹಾಯೋಗಂ ಪ್ರಪನ್ನೋಽಸ್ಮಿ ಕಿಂ ನೋ ಮೃತ್ಯುಃ ಕರಿಷ್ಯತಿ ॥
ಭೂತಾತ್ಮಾನಂ ಮಹಾತ್ಮಾನಂ ಯಜ್ಞಯೋನಿಮಯೋನಿಜಮ್ ।

Rarest Archiver

ವಿಶ್ವರೂಪಂ ಪ್ರಪನ್ನೋಽಸ್ಮಿ ಕಿಂ ನೋ ಮೃತ್ಯುಃ ಕರಿಷ್ಯತಿ ॥
ಇತ್ಯುದೀರಿತಮಾಕರ್ಣ್ಯ ಸ್ತೋತ್ರಂ ತಸ್ಯ ಮಹಾತ್ಮನಃ ।
ಅಪಯಾತಸ್ತತೋ ಮೃತ್ಯುಃ ವಿಷ್ಣುದೂತೈಃ ಪ್ರಪೀಡಿತಃ ॥
ಇತಿ ತೇನ ಜಿತೋ ಮೃತ್ಯುಃ ಮಾರ್ಕಂಡೇಯೇನ ಧೀಮತಾ ॥
ಪ್ರಸನ್ನೇ ಪುಂಡರೀಕಾಕ್ಷೇ ನೃಸಿಂಹೇ ನಾಸ್ತಿ ದುರ್ಲಭಮ್ ।
ಮೃತ್ಯ್ವಷ್ಟಕಮಿದಂ ಪುಣ್ಯಂ ಮೃತ್ಯುಪ್ರಶಮನಂ ಶುಭಮ್ ॥
ಮಾರ್ಕಂಡೇಯ ಹಿತಾರ್ಥಾಯ ಸ್ವಯಂ ವಿಷ್ಣುರುವಾಚ ಹ ।
ಇದಂ ಯಃ ಪಠೇತ್ ಭಕ್ತ್ಯಾ ತ್ರಿಕಾಲಂ ನಿಯತಃ ಶುಚಿಃ ॥
ನಾಕಾಲೇ ತಸ್ಯ ಮೃತ್ಯುಃ ಸ್ಯಾನ್ನರಸ್ಯಾಚ್ಯುತಚೇತಸಃ ।
ಹೃತ್ಪದ್ಮಮಧ್ಯೇ ಪುರುಷಂ ಪುರಾಣಂ ॥
ನಾರಾಯಣಂ ಶಾಶ್ವತಮಪ್ರಮೇಯಮ್ ।
ವಿಚಿಂತ್ಯ ಸೂರ್ಯಾದತಿರಾಜಮಾನಂ ॥
ಮೃತ್ಯುಂ ಸ ಯೋಗೀ ಜಿತವಾಂಸ್ತಥೈವ ॥

(ಗರುಡ ಪುರಾಣ- ಬ್ರಹ್ಮಕಾಂಡ ೨೨೫-೧)

ತ್ವಮೇವ ಮಾತಾ ಚ ಪಿತಾ ತ್ವಮೇವ
ತ್ವಮೇವ ಬಂಧುಶ್ಚ ಸಖಾ ತ್ವಮೇವ
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ
ತ್ವಮೇವ ಸರ್ವಂ ಮಮ ದೇವ ದೇವ ॥

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇ ಸ್ವಭಾವಾತ್
ಕರೋಮಿ ಯದ್ಯತ್ ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ದಾಸ ಸಂದೇಶ -೧

ಇಷ್ಟು ಪಾಪವನೆ ಮಾಡಿದ್ದೇ ಸಾಕೋ ।
ಸೃಷ್ಟೀಶ ನಿ ಎನ್ನ ಉದ್ಧರಿಸಬೇಕು ॥ಪ॥
ಸ್ನಾನ ಸಂಧ್ಯಾದಿಗಳ ಮಾಡದಲೆ ಮೈಗೆಟ್ಟೆ ।
ಜ್ಞಾನ ಮಾರ್ಗವನಂತು ಮೊದಲೆ ಬಿಟ್ಟೆ ।
ಏನು ಹೇಳಲಿ ಪರರ ಮಾನಿನಿಯೊಳ್ ಮನಸಿಟ್ಟೆ ।
ಶ್ವಾನ ಸೂಕರನಂತೆ ಹೊರೆದೆ ಈ ಹೊಟ್ಟೆ ॥೧॥

Rarest Archiver

ಒಡಲ ಕಿಚ್ಚಿಗೆ ಪರರ ಕಡು ನೋಯಿಸಿದೆ ಕೃಷ್ಣ ।
ಬಿಡದೆ ಅನ್ಯರ ಋಣವ ಅಪಹರಿಸಿದೆ ।
ಮಡದಿಯಾ ನುಡಿ ಕೇಳಿ ಒಡ ಹುಟ್ಟಿದವರೊಡನೆ ।
ಹಡೆದ ತಾಯಿಯ ಕೂಡೆ ಹಗೆ ಮಾಡಿದೆ ॥೨॥

ವೃತ ನಿಯಮ ಉಪವಾಸ ಒಂದುದಿನ ಮಾಡಲಿಲ್ಲ ।
ಅತಿಥಿಗಳಿಗನ್ನವನು ನೀಡಲಿಲ್ಲ ।
ಶ್ರುತಿ ಶಾಸ್ತ್ರ ಪೌರಾಣ ಕಥೆಗಳನು ಕೇಳಲಿಲ್ಲ ।
ವೃಥವಾಗಿ ಬಹುಕಾಲ ಗತವಾಯಿತಲ್ಲ ॥೩॥

ತಂದೆ ತಾಯಿಗಳ ಸೇವೆ ಒಂದು ದಿನ ಮಾಡಲಿಲ್ಲ ।
ಮಂದ ಭಾಗ್ಯದ ಬವಣೆ ತಪ್ಪಲಿಲ್ಲ ।
ಹಿಂದೆ ಮಾಡಿದ ದೋಷ ಒಂದುಳಿಯದೆ ಅರುಹಿದೆನೊ ।
ತಂದೆ ಪಾಲಿಸೊ ಬೇಗ ಪುರಂದರ ವಿಠ್ಠಲ ॥೪॥

ದಾಸ ಸಂದೇಶ –೨

ಕೊಟ್ಟ ಬಿಡಾರದಲಿ ಎಷ್ಟು ದಿನ ಜೀವಿಸಲಿ ।
ಕಷ್ಟ ಪಡಲಾರೆ ಹರಿಯೆ ಶ್ರೀಹರಿಯೆ ॥ಪ॥

ಕಟ್ಟುಗಳು ಸಡಲಿದವೊ । ಬಳೆ ಮೊಳೆಗಳು ಉದುರಿದವು ॥
ನೆಟ್ಟ ಕಂಭವು ಕುಸಿದವು ।
ಪಟ್ಟ ಪಡಶಾಲೆಗಳು ದಟ್ಟ ಬಯಲಾದವು ।
ಕಟ್ಟಿ ಹೊದ್ದಿಸಲಾರೆನೊ ಕೃಷ್ಣ ॥೧॥

ಆರೆಳು ಜಾರಿದವು । ಮಾಯವಾಯಿತು ಹೊದಿಕೆ ।
ಜಾರಿ ಬಿದ್ದವು ಗಳಗಳು ।
ಆರು ಮೂರೆಂಬ ತಲೆ । ಬಾಗಿಲೆಲ್ಲವು ಕುಸಿದು ।
ಸೋರುತಿವೆ ನಾಲ್ಕು ಕಡೆಗೂ ದೇವ ॥೨॥

ಗೇಣೇಳು ನಿಚ್ಚಳಿಕೆ । ಬಾಡದ ನಿಲಸುತ್ತ ।
ಶೋಣೆಯೋಳ್ಗೋಡಾಡುತ್ತಾ । ಹರಿಯೆ
ಪ್ರಾಣನಾಯಕನೇ ಶ್ರೀಗೋಪಾಲವಿಠ್ಠಲ
ಆನಂದ ನಿಲಯ ವಾಸಾ ಶ್ರೀಶ ॥೩॥

Rarest Archiver

ದಾಸ ಸಂದೇಶ –೩

ಅಲ್ಲಿದೆ ನಮ್ಮ ಮನೆ ಇಲ್ಲಿ ಬಂದೆ ಸುಮ್ಮನೆ ॥ಪ॥

ಕದ ಬಾಗಿಲುಗಳುಳ್ಳ ಕಳ್ಳರ ಮನೆ ಇದು ।
ಮುದದಿ ಲೋಲಾಡುವ ಮುದ್ದು ಮನೆ ಇದು ।
ಎದುರಾಗಿ ವೈಕುಂಠವಾಸ ಮಾಡುವಂಥ ।
ಪದುಮನಾಭನ ದಿವ್ಯ ಬದುಕು ಮನೆ ಅದು ॥೧॥

ಮಾಳಿಗೆ ಮನೆ ಎಂದು ನೆಚ್ಚಿ ನೀ ಕೆಡಬೇಡಾ ।
ಕೇಳಯ್ಯಾ ಹರಿ ನಾಮಾಮೃತವ ।
ಯಮನ ದೂತರು ಬಂದು ಕೈಪಿಡಿದೆಳೆವಾಗ ।
ಮಾಳಿಗೆ ಮನೆ ಸಂಗಡ ಬಾರದಯ್ಯಾ ॥೨॥

ಸತಿ ಸುತರು ಎಂಬ ಹಂಬಲ ಸಾಕೋ ।
ಕಡು ಅಬ್ಬರದ ಗರ್ವ ಅದೇಕೊ ।
ಒಡೆಯ ಶ್ರೀಪುರಂದರವಿಠ್ಠಲರಾಯನ
ಧೃಡ ಭಕ್ತಿಯಲಿ ನೀ ಭಜಿಸೆಲೊ ಮನುಜಾ ॥೩॥

ದಾಸ ಸಂದೇಶ –೪

ಶ್ರೀಪತಿಯ ಕೃಪಾ ಕಟಾಕ್ಷ ವೀಕ್ಷಣ ತಪ್ಪುವಾಗ ।
ಅನೇಕ ಬಂಧುಗಳು । ಲಕ್ಷ ವೈದ್ಯರು ಇರಲಾಗಿ ।
ಕಣ್ಣು ಕಣ್ಣು ಬಿಡುವರಯ್ಯಾ ।
ತಾಪಸಿ ಅರಣ್ಯದೋಳು ಒಂಟಿಯಾಗಿರಲು ।
ಅಂಜಬೇಡವೆಂದು ನಮ್ಮ ಕಂಜನಾಭನೆ ಬಂದು
ಆಪತ್ತುಗಳ ಪರಿಹರಿಸುವ ಪುರಂದರವಿಠ್ಠಲ ॥

ಹಾಡಿದರೆ ಎನ್ನೊಡೆಯನ ಹಾಡುವೆ ।
ಬೇಡಿದರೆ ಎನ್ನೊಡೆಯನ ಬೇಡುವೆ ।
ಒಡೆಯಗೆ ಒಡಲನು ತೋರುವೆ ।
ಎನ್ನ ಬಡತನ ಬಿನ್ನಹ ಮಾಡುವೆ ।
ಒಡೆಯ ಶ್ರೀಪುರಂದರವಿಠಲರಾಯನ ।
ಅಡಿಗಳನು ಸಾರಿ ಭಜಿಸುವೆ ।

Rarest Archiver

ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ
ಕುಳಿತು ಪಾಡಲು ನಿಲುವ ನಿಂತರೆ ನಲಿವ
ನಲಿದರೆ ಒಲಿವೆ ನಾ ನಿಮಗೆಂಬ
ಸುಲಭನೋ ಹರಿ ತನ್ನವರನು ಅರೆಗಳಿಗೆ ಬಿಟ್ಟಗಲನೊ
ರಮಾಧವನ ಒಲಿಸಲರಿಯದೆ ಪಾಮರರು
ಬಳಲುವರು ಈ ಭವದೊಳಗೆ ॥

* * *

ಯಾವ ಕರ್ಮವೋ ಇದು ಏನು ಕರ್ಮವೋ ॥ಪ॥

ಸತ್ತವನು ಎತ್ತಪೋದ ತನ್ನ ಜನ್ಮಕ್ಕೋದ ।
ಸತ್ತವನು ಯಾವನೆಂದು ನಿತ್ಯ ಪಿಂಡವಿಕ್ಕುತ್ತಾರೆ ॥೧॥

ಎಳ್ಳು ದರ್ಭೆ ಕೈಲಿಪಿಡಿದು ಪಿತೃತೃಪ್ತಿ ಎಂದುಬಿಡಲು ।
ಎಳ್ಳು ಮೀನ ನುಂಗಿ ಹೋದರೆ ದರ್ಭೆ ನೀರೊಳು
ಹರಿದುಹೋಯಿತು ॥೨॥

ಎಡಗೈಯೆಂದು ಬಲಗೈಯೆಂದು ಎಡಬಲಗೈಯ್ಯ ತೋರಿಸಿ ।
ಸಡಗರೆಂಬ ವರವ ಕಠಿಣ ವರಹವನ್ನು ಕಳೆಯುತ್ತಾರೆ ॥೩॥

ಮಂತ್ರಾಕ್ಷತೆ ಕೈಯಲಿ ಕೊಟ್ಟು ಸ್ವರ್ಗ ಹೊಂದುವರೆಂದು ।
ಮಂತ್ರವೆಲ್ಲೋ ಅಕ್ಷತೆಯಲ್ಲೋ ಅವರೆಲ್ಲೋ ಇವರೆಲ್ಲೋ ॥೪॥

ಹೇಳುವವನು ಅಜ್ಞಾನಿ ಕೇಳುವವನು ಅವಿವೇಕಿ ।
ಹೇಳುವ ಕೇಳುವರಿಬ್ಬರ ಸೊಲ್ಲ ಪುರಂದರವಿಠಲ ತಾನೇಬಲ್ಲ ॥೫॥

Rarest Archives

ಜಿತಾಮಿತ್ರ ಪ್ರತಿಷ್ಠಾನ, ರಾಯಚೂರು

ಜಗದ್ಗುರು ಶ್ರೀಮಧ್ವಾಚಾರ್ಯರ ಮೂಲಮಹಾಸಂಸ್ಥಾನ ಮಂತ್ರಾಲಯ ಶ್ರೀರಾಘವೇಂದ್ರಸ್ವಾಮಿಗಳವರ ಮಠದ ಪೀಠಾಧಿಪತಿಗಳಾದ ತಪೋನಿಧಿಗಳೂ ಆದ ಶ್ರೀ ಜಿತಾಮಿತ್ರತೀರ್ಥರ ಹೆಸರಿನಲ್ಲಿ ಪ್ರತಿಷ್ಠಾನ ಪ್ರಾರಂಭಿಸಲಾಗಿದೆ. ದಿ. ಶಿವಪುರ ವೆಂಕಟೇಶರವರ ಕನಸಿನ ಕೂಸು ಜಿತಾಮಿತ್ರ ಪ್ರತಿಷ್ಠಾನ. ಇದರ ಮೂಲಕ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸುವ ಯೋಜನೆ ಇದೆ. ಪ್ರತಿಷ್ಠಾನದ ಮೊದಲ ಕುಸುಮವೇ ಈ ಹೊತ್ತಿಗೆ 'ಶ್ರಾದ್ಧ: ಒಂದು ಚಿಂತನೆ' ಪುಸ್ತಕದ ಬಿಡುಗಡೆಯೇ ಪ್ರತಿಷ್ಠಾನದ ಮೊದಲ ಪುಟ್ಟ ಹೆಜ್ಜೆ. ಸ್ವೀಕರಿಸಿ ಸಲಹೆ-ಸೂಚನೆ ನೀಡಿ. ನೀವೆಲ್ಲ ಜೊತೆಗಿದ್ದೀರಿ ಎಂಬ ಧೈರ್ಯ ನಮಗೆ.

ಜೋಶಿ, ಹೇರೂರು, ನವಲಿ, ರಾಜಪುರೋಹಿತ, ಪುರೋಹಿತ, ಕಂಪ್ಲಿ ರಾಮಾಯಣ, ಹೆರಕಲ್, ಶಿವಪುರ ಕುಟುಂಬದ ಎಲ್ಲ ಬಂಧುಗಳು ಹಾಗೂ ರಾಯಚೂರು ಶೇಷಗಿರಿದಾಸ್, ಶ್ಯಾಂಸುಂದರ ಚೀಕಲಪರಿವಿ, ಹನುಮೇಶ್ ಜೋಷಿ, ಗಂಗಾವತಿ, ಗುಂಡೂರಾವ್ ಚೆನ್ನಳ್ಳಿ, ಸಿಂಧನೂರು ಇವರೆಲ್ಲರಿಗೂ ವಂದನೆಗಳು.

ಸರ್ವ ಸದಸ್ಯರು
ಜಿತಾಮಿತ್ರ ಪ್ರತಿಷ್ಠಾನ
ರಾಯಚೂರು

ವಿವರಗಳಿಗಾಗಿ
ಬದರಿನಾರಾಯಣ ಹೇರೂರು
9676736921

www.jitamitra.org

Rarest Archiver

ಋಣಸಂದಾಯದ ದೀಕ್ಷೆ,

ವಿಜ್ಞಾನಿಗಳ ಹೇಳಿಕೆಯ ಪ್ರಕಾರ 200 ಕೋಟಿ ವರ್ಷದ ಹಿಂದೆ ಮಾನವ ಜೀವಿಯ ಅವತರಣೆ. ಅಂದಿನಿಂದಲೇ ಆತ್ಮದ ಆಟ. 'ಪುನರಪಿ ಜನನಂ, ಪುನರಪಿ ಮರಣಂ' ಕ್ರಿ.ಶ. 4500 ವರ್ಷಗಳ ಹಿಂದೆ ಹರಪ್ಪಾದಲ್ಲಿ ದೊರೆತ ಅಸ್ಥಿಪಂಜರಗಳು ಇತಿಹಾಸದಲ್ಲಿ ಗೋಚರವಾಗುವ ಪ್ರಪ್ರಥಮ ಶವಸಂಸ್ಕಾರ. ಆತ್ಮವನ್ನು ವಿಶ್ವದ ಪ್ರಮುಖ 13 ಧರ್ಮಗಳು ಒಪ್ಪುತ್ತವೆ.

ಪಿತೃಪಕ್ಷ ಮಹಮ್ಮದಿಯರಲ್ಲಿ ವ್ಯಕ್ತಿ ಸತ್ತ ದಿನವೇ ಆಚರಿಸುತ್ತಾರೆ. ಕ್ರೈಸ್ತರು ತಮ್ಮ ಪಿತೃಗಳ ಮರಣದ ವಾರ್ಷಿಕ ದಿನವನ್ನು ತಮ್ಮ ಧಾರ್ಮಿಕ ಗುರುವಿಗೆ ತಿಳಿಸಿ ಅವನ ಮೂಲಕ ಆತ್ಮಕ್ಕೆ ಶಾಂತಿ ಕೋರುತ್ತಾರೆ.

ಜೈನರಲ್ಲಿ ಶಾಸ್ತ್ರ ವಿಧಿ ಹೇಳದಿದ್ದರೂ ಆಚರಣೆಯಲ್ಲಿದೆ.

ವೀರಶೈವ ಸಿದ್ಧಾಂತದಲ್ಲಿ ಶ್ರಾದ್ಧ ಕರ್ಮವಿರದಿದ್ದರೂ ತಿಥಿಯನ್ನು ಆಚರಿಸುತ್ತಾರೆ.

ಶ್ರಾದ್ಧದ ಕ್ರಿಯೆಯನ್ನು ವಿಧಿಸಿದ್ದು ಆಪಸ್ತಂಬರು. ಹೇಳಿದ್ದು ಮನು.

ಸಹಗಮನ ಜೀವಂತ ಆಹುತಿಯಾದರೆ ಸಮಾಧಿ-ಬಲಿದಾನ-ಸ್ಮಾರಕ-ಸ್ಮರಣ ಸಂಚಿಕೆಗಳು ಶ್ರಾದ್ಧದ ಮುಂದುವರೆದ ಆಯಾಮಗಳೇ. ಹೀಗೆ ವಿಶ್ವ ಒಪ್ಪಿಕೊಂಡ ಕ್ರಿಯೆ ಶ್ರಾದ್ಧ. ಸಂತ ಶಿಶುನಾಳ ಶರೀಫರು ಹೇಳಿದ ಮಾತಿದು. 'ಒಂದು ಹೆಣಕೆ ಎರಡು ಹೆಣವು ದಣಿವುದ್ಯಾತಕೆ', ಅದ್ಭುತ ಸತ್ಯ: ಜೀವನ ಸಾಫಲ್ಯತೆಯಿಂದ ಮರಣ ಮಹಾನವಮಿಯಾದಲ್ಲಿ ಆ ಚೇತನಕ್ಕೆ ನಡೆಯುವ ಸಂಸ್ಕಾರ ಅರ್ಥಪೂರ್ಣ. ಕ್ರಿಯೆಯು ಅಮರ, ನೆನಪೂ ಕೂಡ ಅಜರಾಮರ.

ಪರಲೋಕದ ಪಾಸ್‌ಪೋರ್ಟ್ ಆದ ಶ್ರಾದ್ಧದ ವಿವರಗಳು ಜನಸಾಮಾನ್ಯರ ಅರಿವಿನ ಪರಿಧಿಯನ್ನು ವಿಸ್ತರಿಸುತ್ತೆ. ಶ್ರೀನಿವಾಸ ಸು. ಮಠದ ಅವರ ಅಚ್ಚುಕಟ್ಟಾದ ಸಂಕಲನ ಹಾಗೂ ನಿರೂಪಣೆ, ಅಪರೂಪದ ಅಲಂಕರಣ, ಬದರಿನಾರಾಯಣ ಹೇರೂರು, ಗುಂಡೂರು ಪವನಕುಮಾರರಿಂದ ಉತ್ತಮ ಪ್ರಕಾಶನ, ಜಿತಾಮಿತ್ರ ಪ್ರತಿಷ್ಠಾನದ ಎಲ್ಲ ಗೆಳೆಯರಿಗೆ, ಲೇಖಕರಿಗೆ ಶುಭ ಆಸಂಶೆಗಳು.

ರಾಜಾ ಎಸ್. ರಾಜಗೋಪಾಲಾಚಾರ್

ಜಿತಾಮಿತ್ರ ಪ್ರತಿಷ್ಠಾನ
ರಾಯಚೂರು